ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಮೇ 2025

ಬೆಲೆ ರೂ. 20/-

SAPTHAGIRI(KANNADA)
SPIRITUAL ILLUSTRATED MONTHLY
Volume:04, Issue:10, Pages:56
May - 2025,Price Rs.20/-



ಕೃಷ್ಣೋ ರಕ್ಷತು ನೋ ಜಗತ್ರಯಗುರುಃ, ಕೃಷ್ಣಂ ನಮಸ್ಯಾಮ್ಯಹಂ
ಕೃಷ್ಣೇ ನಾಮರಶತ್ರವೋ ವಿನಿಹತಾಃ, ಕೃಷ್ಣಾಯ ತಸ್ಮೈನಮಃ।
ಕೃಷ್ಣಾದೇವ ಸಮುತ್ಥಿತಂ ಜಗದಿದಂ, ಕೃಷ್ಣಸ್ಯ ದಾಸೋ (ಅ) ಸ್ಮ್ಯಹಂ
ಕೃಷ್ಣ ತಿಷ್ಠತಿ ಸರ್ವ ಮೇತ ದಖಿಲಂ, ಹೇ ಕೃಷ್ಣ ರಕ್ಷಸ್ವಮಾಮ್॥

ಕಾರ್ವೇಟಿ ನಗರಂ, ಶ್ರೀ ವೇಣುಗೋಪಾಲ ಸ್ವಾಮಿಯವರ ಬ್ರಹ್ಮೋತ್ಸವಗಳು

19-05-2025 ರಿಂದ 27-05-2025 ರ ವರೆಗೆ

ವೆಂಕಟಪಾಳೆಂ ನಲ್ಲಿರುವ ಶ್ರೀವೆಂಕಟೇಶ್ವರಸ್ವಾಮಿ ಆಲಯದಲ್ಲಿ 15-03-2025 ರಂದು ಸ್ವಾಮಿಯವರ ಕಲ್ಯಾಣೋತ್ಸವವು ಆರು ಗೋಪುರಗಳೊಂದಿಗೆ ನಿರ್ಮಿಸಿದ ನಮೂನೆ ಆಲಯದ ವೇದಿಕೆಯಲ್ಲಿ ಅತ್ಯಂತ ವೈಭವವಾಗಿ ಕಲ್ಯಾಣೋತ್ಸವ ನಡೆಯಿತು. ಆಂಧ್ರಪ್ರದೇಶದ ರಾಜ್ಯ ಸರ್ಕಾರ, ಮತ್ತು ತಿ.ತಿ.ದೇ., ಯವರ ನೇತೃತ್ವದಲ್ಲಿ ಈ ಕಾರ್ಯಕ್ರಮವು ನಡೆಯಿತು.



ಶ್ರೀ ವೆಂಕಟೇಶ್ವರ ಸ್ವಾಮಿಯವರಿಗೆ ಗೌ॥ ಮುಖ್ಯಮಂತ್ರಿ ಶ್ರೀ ನಾರಾಚಂದ್ರಬಾಬು ನಾಯುಡು ರವರು, ಅವರ ಸತೀಮಣಿ ಶ್ರೀಮತಿ ಭುವನೇಶ್ವರಿ ದಂಪತಿಗಳು ರೇಷ್ಮೆ ವಸ್ತ್ರಗಳನ್ನು ಸಮರ್ಪಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀ ಶ್ರೀ ಶ್ರೀ ಪೆದ್ದ ಜೀಯರ್ ಮತ್ತು ಶ್ರೀ ಶ್ರೀ ಶ್ರೀ ಚಿನ್ನ ಜೀಯರ್ ಯವರು, ಆಂಧ್ರಪ್ರದೇಶದ ರಾಜ್ಯಪಾಲರು ಶ್ರೀ ಅಬ್ದುಲ್ ನಜೀರ್ ರವರು, ಆಂಧ್ರಪ್ರದೇಶದ ದತ್ತಿ ಇಲಾಖೆಯ ಮಂತ್ರಿಗಳಾದ ಶ್ರೀ ಆನಂ ರಾಮನಾರಾಯಣ ರೆಡ್ಡಿ, ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯುಡು, ರವರು ತಿ.ತಿ.ದೇ., ಕಾರ್ಯ ನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್ ಐ.ಎ.ಎಸ್., ರವರು ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್. ವೆಂಕಯ್ಯ ಚೌದರಿ, ಐ.ಆರ್.ಎಸ್., ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ, ಐ.ಎ.ಎಸ್., ಇತರ ತಿ.ತಿ.ದೇ., ಆಡಳಿತ ಮಂಡಲಿಯ ಸದಸ್ಯರು ಪಾಲ್ಗೊಂಡರು.










# ಭಗವದ್ಗೀತೆ



ಜಾತಸ್ಯ ಹಿ ಧ್ರುವೋ ಮತ್ಯುಃಧ್ರುವಂ ಜನ್ಮ ಮೃತಸ್ಯ ಚ।
ತಸ್ಮಾದ ಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ॥

ಹುಟ್ಟಿದವನಿಗೆ ಸಾವು ತಪ್ಪಿದ್ದಲ್ಲ, ಸತ್ತವನಿಗೆ ಹುಟ್ಟು ತಪ್ಪಿದ್ದಲ್ಲ ಆದ್ದರಿಂದ
ತಪ್ಪಿಸಲಾಗದ ವಿಷಯದಲ್ಲಿ ತಲೆ ಕೆಡಿಸಿಕೊಂಡೇನು ಫಲ?

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -27)



ಬನ್ನಿರಿ ನೋಡ ಬನ್ನಿರಿ ಶೇಷಾದ್ರಿ ರಂಗನ
ಶ್ರೀವೆಂಕಟಗಿರಿಯಲಿ ನೆಲೆಕಂಡವನ
ಸೌಭಾಗ್ಯದ ಬೆಡಗಿಯ ಕೈಹಿಡಿದವನ॥
ಕಟಿಯಲಿ ಕರವಿಟ್ಟ ಸುರಕ್ಷಾದೀಕ್ಷನ

ನಿಜ ಸಂದರುಶನದ ಆಮಿಷವನೊಡ್ಡಿ।
ವಿವಿಧ ಹರಿ ಭಜನಮಂಡಲಿಗಳನು॥
ಸ್ವಗಾನದತ್ತ ಸೆಳೆಯುತ ನಿಜ ಸಾಹಿತ್ಯ।
ಲತಾಸರೆಯಾದ ಭಕುತ ಸುರದ್ರುಮನ

ಸರ್ವತ್ರ ಭಕುತರನು ಕಂಡು ರಕ್ಷಿಸಲು ॥
ಉತ್ತುಂಗ ವೆಂಕಟ ಶೃಂಗದಲಿ ನಿಂತವನ।
ವಿಶ್ವತಶ್ಚಕ್ಷು "ಅಧೋದೃಷ್ಟಿಯಲಿ"ನೋಡುತ॥
ಭಕುತರನು ಮನಗೆದ್ದ ಅಧೋಕ್ಷಜನ

ಉತ್ಸವ ವೈಭವದಲಿ ಶೋಭಿಸುವವನ।
ನಿತ್ಯದಿ ರಾಜಭೋಗವನು ಭುಂಜಿಸುವನ॥
ಸುಗುಣಗಣ ವಸನಭೂಷಣ ಗಣದಿ।
ಮನಸೆಳೆಯುವ ಶ್ರೀ ವಿದ್ಯೇಶ ವಿಠ್ಠಲನ

– ಶ್ರೀ ವಿದ್ಯೇಶ ವಿಠ್ಠಲ

# ದಯಾ ಶತಕಮ್




**ಅದ್ಯಾಪಿ ತದ್ವೃಷಗಿರೀಶದಯೇ ಭವತ್ಯಾ ಮಾರಂಭಮಾತ್ರಮನಿದಂಪ್ರಥಮಸ್ತುತೀನಾಮ್ ।**
**ಸಂದರ್ಶಿತಸ್ವಪರ ನಿರ್ವಹಣಾ ಸಹೇಥಾ ಮಂದಸ್ಯ ಸಾಹಸಮಿದಂ ತ್ವಯಿ ವಂದಿನೋ ಮೇ ॥102॥**

ಹಿಂದಿನ ಪದ್ಯದಲ್ಲಿ ಆಚಾರ್ಯರು ದಯಾದೇವಿಯ ಒಲವು, ಆಕೆಯ ಅನುಗ್ರಹವು, ಚೇತನರ ವಿಷಯದಲ್ಲಿ ಸದಾ ಇರುತ್ತದೆ ಎಂಬುದಾಗಿ ವರ್ಣಿಸಿ ಆಕೆಯ ವೈಶಿಷ್ಟ್ಯವನ್ನು ಸ್ತುತಿಸಿದ್ದಾರೆ. ಈ ಪದ್ಯದಲ್ಲಿ ಅದನ್ನೇ ಮತ್ತೊಂದು ರೀತಿಯಿಂದ ವರ್ಣಿಸಿ ಸ್ತುತಿಸಿದ್ದಾರೆ.

ಭಗವಂತನ ದಯೆಯನ್ನು ದಯೆಯ ಪ್ರಭಾವ ಮಹಿಮೆಗಳನ್ನು, ಕುರಿತು ಅನೇಕ ಸ್ತೋತ್ರಗಳನ್ನು ರಚಿಸಬೇಕೆಂದು ಅವರಿಗೆ ಬಹಳ ಮಟ್ಟಿಗೆ ಆಸೆಯಿರುವುದೆಂಬುದು **'ಅನಿದಂ ಪ್ರಥಮ ಸ್ತುತೀನಾಂ'** ಎಂಬುವುದರಿಂದ ಸ್ಪಷ್ಟಪಡುತ್ತದೆ. ಹಾಗೆ ಅನೇಕ ಸ್ತೋತ್ರಗಳನ್ನು ರಚಿಸಬೇಕೆಂದಿಸುವ ಪ್ರಯತ್ನದಲ್ಲಿ ಇದು ಪ್ರಥಮ ಪ್ರಯತ್ನವೆಂದೂ ತಿಳಿಸಿದ್ದಾರೆ. ತಾನು ಮೂಢನೆಂದೂ ಮಾಡಬೇಕೆಂದಿರುವ ಕೆಲಸ ಅತ್ಯಂತ ಹಿರಿದಾದುದೂ, ಸಾಹಸದ ಕೆಲಸವೆಂದೂ ಹೇಳಿದ್ದಾರೆ. ಇಂತಹ ಸಾಹಸದ ಕೆಲಸವನ್ನು ಮೂಢನಾದ ತನ್ನಂತಹವರು ಮಾಡುವಾಗ ಅನೇಕ ಲೋಪದೋಷಗಳಿರಬಹುದೆಂದೂ ಸ್ತುತಿಸುವ ರೀತಿಯಲ್ಲೂ ಅನೇಕ ದೋಷಗಳಿರಬಹುದೆಂದೂ, ಅವುಗಳನ್ನು ಉದಾರವಾದ ಮನಸ್ಸಿನಿಂದ ಸಹಿಸಿಕೊಳ್ಳಬೇಕೆಂದೂ ಅವರು ಪ್ರಾರ್ಥಿಸಿರುವುದು, ತಮ್ಮನ್ನು ಶಿರಿಯನನ್ನಾಗಿ ತಿಳಿದುಕೊಳ್ಳುವ ಆಚಾರ್ಯರ ಹಿರಿಮೆಯನ್ನು ತೋರಿಸುತ್ತದೆ. ಅಲ್ಲದೆ ತಾವು ಸ್ತುತಿಸುವ ರೀತಿಯಲ್ಲಿ ಮತ್ತು ಮಾಡುವ ಕೆಲಸಗಳಲ್ಲಿ ಲೋಪದೋಷಗಳು ಇದ್ದರೂ ದಯಾದೇವಿಯು ಅವುಗಳನ್ನು ಗಣನೆಗೆ ತೆಗೆದುಕೊಳ್ಳದೇ ಹೇಗೆ ಮರೆಯುವುದು ಸಾಧ್ಯ? ದೋಷರಹಿತವಾದ ಅನೇಕ ಸ್ತೋತ್ರಗಳಿರುವಾಗ ದೋಷಯುಕ್ತವಾದದ್ದನ್ನು ಸ್ವೀಕರಿಸುವುದು ಹೇಗೆ ಸಾಧ್ಯ? ದಯಾದೇವಿಯನ್ನು **'ಸಂದರ್ಶಿತ ಸ್ವಪರ ನಿರ್ವಹಣಾ'** ಅಂದರೆ, ತನ್ನವರು ಇತರರೆಂಬ ಭೇದವನ್ನೆಣಿಸದೇ ಎಲ್ಲರನ್ನೂ ಸಮಾನವಾಗಿ ಕಾಣುವ ಗುಣವನ್ನು ನಿರ್ವಹಿಸಿಕೊಂಡು ಹೋಗುವ ಸಾಮರ್ಥ್ಯವುಳ್ಳವಳೆಂದು ವರ್ಣಿಸಿ ಆಚಾರ್ಯರು ಈ ಪ್ರಶ್ನೆಯನ್ನು ಸರಳವಾಗಿ ಬಿಡಿಸಿದ್ದಾರೆ. ಇಲ್ಲಿ, ತನ್ನವರು ಇತರರು ಎಂದರೆ ಯಾರು ಯಾರು? ಭಗವಂತನ ದೃಷ್ಟಿಯಲ್ಲಿ ಇದೂ ಸಾಧ್ಯವೆ? ಎಂಬುದು ಮತ್ತೊಂದು ಪ್ರಶ್ನೆ. ತನ್ನವರು ಎಂದರೆ ಭಗವದ್ವಿಷಯವಾಗಿ ವಿಶೇಷವಾದ ಭಕ್ತಿ ಪ್ರಪತ್ತಿಗಳನ್ನಿಟ್ಟುಕೊಂಡು ಅಪರಾಧಿಗಳಲ್ಲದೇ ಇರುವವರೆನ್ನಬಹುದು. ಇತರರೆಂದರೆ ಭಗವದ್ವಿಷಯವಾಗಿ ಅಪರಾಧಗಳನ್ನೆಸಗಿ ಭಗವಂತನಿಂದ ದೂರವಾಗುತ್ತಿರುವ ಅಪರಾಧಿ ಚೇತನರೆನ್ನಬಹುದು. ಭಗವಂತನು ದಯಾಪೂರ್ಣನಾದುದರಿಂದ ಸ್ವಕೀಯರನ್ನು ಅಪರಾಧಿಗಳಲ್ಲದ ಚೇತನರನ್ನು ಹೇಗೋ ಹಾಗೆಯೇ ಪರಕೀಯರನ್ನು ಅಂದರೆ ಅಪರಾಧಿಚೇತನರನ್ನು ಕೂಡ ನಿರ್ವ್ಯಾಜಪ್ರೇಮವನ್ನು ತೋರಿಸಿ ಏನಾದರೊಂದು ಉಪಾಯದಿಂದ ಉದ್ಧರಿಸುವ ಪ್ರಯತ್ನ ಮಾಡುವನಲ್ಲವೆ? ಇದೇ ಭಗವಂತನ ದಯೆಯ ವೈಶಿಷ್ಟ್ಯ. ಹೀಗೆ ಭಗವಂತನ ದಯೆಯನ್ನು ಸ್ತುತಿಸಿ ತನ್ನ ಸ್ತೋತ್ರವು ದೋಷಯುಕ್ತವಾದುದಾದರೆ ಅದು ಪ್ರಥಮ ಪ್ರಯತ್ನವೆಂಬುದನ್ನು ಗಮನಿಸಿ ಸಹಿಸಿಕೊಳ್ಳಲಿ ಎಂದು ಪ್ರಾರ್ಥಿಸಿದ್ದಾರೆ.

ತಿರುಮಲ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀ ವಿಶ್ವಾವಸು ನಾಮ ಸಂವತ್ಸರ ವೈಶಾಖ - ಜ್ಯೇಷ್ಠಮಾಸ ಸಂಚಿಕೆ

ಸಂಪುಟ:04 ಮೇ - 2025 ಸಂಚಿಕೆ:10



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಜೆ.ಶ್ಯಾಮಲ ರಾವ್,ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ||ಕೆ.ರಾಧಾರಮಣ,ಎಮ್.ಎ.ಎಮ್.ಫಿಲ್.ಪಿಎಚ್.ಡಿ.,
ಪಿ.ಜಿ. ಡಿಪ್ಲೊಮಾದಲ್ಲಿ ಎಪಿಗ್ರಫಿ, ಡಿಪ್ಲೊಮಾ ಇನ್ ಯೋಗ

**ಸಂಪಾದಕರು**
ಡಾ||ವಿ.ಜಿ.ಚೊಕ್ಕಲಿಂಗಂ,ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ .ಪಿ. ರಾಮರಾಜು ,ಎಮ್.ಎ.,
ವಿಶೇಷಾಧಿಕಾರಿ,ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507

ಕಾರ್ಯಾಲಯ: 0877 - 2264543
: 0877 - 2264359
ಸಂಪಾದಕರು : 0877 - 2264360

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ:
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org**
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ವಿಶಿಷ್ಟ ವೈಶಾಖ | - ಶ್ರೀಮತಿ ಕೆ.ವಿ. ಪದ್ಮಾವತಿ | 07 |
| ಅಬ್ಬೂರಿನ ಬ್ರಹ್ಮಣ್ಯ ತೀರ್ಥರ ಸನ್ನಿಧಾನ | - ಡಾ|| ಗುರುರಾಜ ಪೋಶೆಟ್ಟಿಹಳ್ಳಿ | 10 |
| ಝರಣಿ ನರಸಿಂಹಸ್ವಾಮಿ | -ಶ್ರೀಮತಿ ಮಾಲಾಪ್ರಸಾದ್ | 14 |
| ನಾರದ | -ಡಾ|| ಸಿ.ಎಸ್. ಊರ್ಮಿಳಾ | 15 |
| ದುದ್ದದ ಶ್ರೀ ಲಕ್ಷ್ಮೀನರಸಿಂಹ ದೇವಾಲಯ | -ಕೆಂಗೇರಿ ಚಕ್ರಪಾಣಿ | 18 |
| ಆಳ್ವಾರರ ನಾಯಕಮಣಿ ನಮ್ಮಾಳ್ವಾರ್ | -ಡಾ|| ಎನ್.ಕೆ. ರಾಮಶೇಷನ್ | 20 |
| ಗಂಗೆಯನ್ನು ಸಾಕ್ಷಾತ್ಕರಿಸಿಕೊಂಡ ಶ್ರೀ ಸತ್ಯಸಂಧ ತೀರ್ಥರು | - ಶ್ರೀಧರ ರಾಯಸಂ | 22 |
| ಸರಸ್ವತಿ ಪುಷ್ಕರ ಪರ್ವಕಾಲ | - ಡಾ|| ಸುಮನ ಬದರೀನಾಥ್ | 24 |
| ಅನ್ನಮಯ್ಯ - ಪುರಂದರ | - ಎಸ್. ವೆಂಕಟೇಶ ಮೂರ್ತಿ | 26 |
| ಶ್ರೀ ಆಂಜನೇಯ ಸ್ವಾಮಿ ಪೂಜಾ ವಿಧಾನ | - ಅನುವಾದ: ಎಸ್. ವಾದಿರಾಜ | 27 |
| ಸಗುಣ - ನಿರ್ಗುಣ ಸಿದ್ಧಾಂತಗಳ ಅಭೇದತೆ | - ಕಲ್ಯಾಣಿ ಮೂರ್ತಿರಾಮನಾಥಪುರ | 31 |
| ಮಂಗಳಗಿರಿಯ ಪಾನಕನರಸಿಂಹನ ಮಹಾತ್ಮ್ಯೆ | - ವಿ. ನಾಗೇಂದ್ರಪ್ರಸಾದ್ | 33 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | - ಶ್ರೀಮತಿ ಎನ್. ಪಾರ್ವತಿ | 35 |
| ಬಲ್ಲಟಗಿ ಶ್ರೀ ಗುಂಡಾಚಾರ್ಯರು | -ಶ್ರೀಮತಿ ಮಾನಸಜಯರಾಜ್ ಕುಲಕರ್ಣಿ | 37 |
| ಕೆಲವು ತತ್ವಗಳ ತರ್ಕಗಳು | -ಶ್ರೀಮತಿ ಎಸ್. ಕಲ್ಯಾಣಿ | 39 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್. ನರಸಿಂಹನ್ | 42 |
| ತಿರುತ್ತೆಟ್ರಿಯಂಬಲಮ್ | - ಶ್ರೀಮತಿ ಸೂರ್ಯವಂಶಿ | 44 |
| ರಾಶಿಫಲಗಳು | -ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ|| ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ-ಮಕ್ಕಳು ಹಿರಿಯರನ್ನೂ ಪರಿವರ್ತಿಸಬಲ್ಲರು | - ಎ.ಆರ್.ರಘುರಾಮ | 48 |
| ಚಿತ್ರಕಥೆ- ಹೇಳಿಕೆಯ ಮಾತುಗಳನ್ನು ಕೇಳುವುದು ಅಪಾಯ | - ಡಾ|| ಕೆ. ರವಿಚಂದ್ರನ್ | 52 |


**ಮುಖಚಿತ್ರ** - ಉಭಯದೇವಿಯರೊಂದಿಗೆ ಶ್ರೀವೇಣುಗೋಪಾಲಸ್ವಾಮಿ, ಕಾರ್ವೇಟಿನಗರಂ

**ಹಿಂಬದಿಚಿತ್ರ** - ಶ್ರೀ ಲಕ್ಷ್ಮೀನರಸಿಂಹಸ್ವಾಮಿ (ಚಿತ್ರಕಲೆ: ಮಣಿಯಂ ಸೆಲ್ವನ್, ಚೆನ್ನೈ)

## ಸಂಪಾದಕೀಯ...

# ಮಾಧವ ಮಾಸ

**ಸೂ**ರ್ಯೋದಯ ಮತ್ತು ಸೂರ್ಯಾಸ್ತಮಾನಗಳು ಹುಟ್ಟಿದ ಪ್ರತಿಯೊಂದು ಜೀವಿಗೆ ಅಂದರೆ ಎಲ್ಲಾ ಚರಾಚರ ಪ್ರಪಂಚಕ್ಕೇ ಅವಶ್ಯಕವಾದದ್ದು. ನಮ್ಮ ಹುಟ್ಟು, ಸಾವುಗಳು ಉದಯಾಸ್ತಮಾನರೂಪದಲ್ಲಿನ ಸೌರಚಲನದೊಂದಿಗೆ ಹೆಣೆದುಕೊಂಡಿದೆ, ಎಂದರೆ ತಪ್ಪಾಗಲಾರದು. ಅದಕ್ಕೆ ಸೂರ್ಯದೇವನನ್ನು ಕಾಲವೆಂದು, ಕಾಲನೆಂದೂ ಕರೆಯುತ್ತಾರೆ. ಗಾಡಿಯ ಚಕ್ರದಂತೆ ತಿರುಗುವ ಈ ಕಾಲಚಕ್ರದಲ್ಲಿ ಋತುಗಳು, ತಿಂಗಳುಗಳು, ಋತುಧರ್ಮಗಳು, ಇದ್ದರೂ ಮಾರ್ಗಶಿರ ಮಾಸದ ನಂತರ ಪುನಃ ಅಂತಹಾ ಪ್ರಾಧಾನ್ಯತೆಯನ್ನು ಹೊಂದಿರುವುದು ಈ ವೈಶಾಖಮಾಸ!

ಇದಕ್ಕೆ ಮಾಧವ ಮಾಸವೆಂದು ಹೇಳುತ್ತಾರೆ. ಅಂದರೆ ಶ್ರೀಮಹಾವಿಷ್ಣುವಿಗೆ ಪ್ರೀತಿಪಾತ್ರವಾಗಿರುವಂತಹಾ ತಿಂಗಳು. ಮಾನವಜಾತಿಗೆ ಅತ್ಯುತ್ತಮವಾದ ಸಂದೇಶವನ್ನು ನೀಡುವ ಮಹತ್ತರವಾದ ಮಾಸ ಇದು. ಅದಕ್ಕೇ ಅರ್ಚಾವತಾರದೊಂದಿಗೆ ಪ್ರಪತ್ತಿಯನ್ನು ಪ್ರತಿಪಾದಿಸಿದ ಮಹಾನುಭಾವರ ಜನ್ಮತಿಥಿಗಳು ಈ ತಿಂಗಳಿನಲ್ಲೇ ಬರುತ್ತವೆ. ಇದರಲ್ಲಿ ಮೊದಲನೆಯದು ಸರ್ವಪ್ರಪತ್ತಿಯ ಸ್ವರೂಪನಾದ ಪ್ರಹ್ಲಾದನನ್ನು ರಕ್ಷಿಸಿ, ಅಹಂಕಾರಿಯಾದ ಹಿರಣ್ಯಕಶಿಪುವಿನ ಸಂಹರಿಸಿದ ನರಸಿಂಹಸ್ವಾಮಿಯ ಜಯಂತಿ. ಭಗವಂತನ ಸರ್ವಾಂತ ರ್ಯಾಮಿ ತತ್ವವನ್ನು, ಸರ್ವೋತ್ತಮ ತತ್ವವನ್ನು ಅರ್ಥಮಾಡಿಕೊಂಡು ಆತ್ಮಸಮರ್ಪಣೆಯನ್ನು ಮಾಡಿಕೊಂಡ ಪ್ರಹ್ಲಾದರಾಜನಿಗೆ ರಕ್ಷಣೆ, ಅಹಂಕಾರ ತೋರಿದ ಹಿರಣ್ಯಕಶಿಪುವಿಗೆ ಶಿಕ್ಷೇ ಲಭಿಸಿದ್ದು ಈ ಅವತಾರದಿಂದಲೇ!

ಆಂಜನೇಯಸ್ವಾಮಿಯು ಶರಣಾಗತ ತತ್ವಕ್ಕೇ ಆದರ್ಶಪ್ರಾಯನಾದವನು, ಸ್ವಾಮಿ ಭಕ್ತಿಯೇ ಮೂರ್ತಿವೆತ್ತಂತಿರುವ ಮಹನೀಯನಾದ ಮಾರುತಿಯ ಜಯಂತಿಯೂ ಇದೇ ತಿಂಗಳಿನಲ್ಲಿ ಬರುತ್ತದೆ. ಈತ ಸರ್ವವಿಧವಾದ ಸಾಮರ್ಥ್ಯವನ್ನು ಹೊಂದಿದ್ದರೂ ತ್ರಿಕರಣ ಶುದ್ಧಿಯಿಂದ ದಾಸ್ಯಭಾವವನ್ನು ಸ್ವೀಕರಿಸಿ ರಾಮಚಂದ್ರನ ಕಾರ್ಯಗಳನ್ನು ಅತ್ಯಂತ ಸಮರ್ಥವಂತವಾಗಿ ನಿರ್ವಹಿಸಿದ ನಿಸ್ವಾರ್ಥ ಜೀವಿ.

ಅಣುವಣುವಿನಲ್ಲೂ ಅಂತರ್ಯಾಮಿಯನ್ನು ದರ್ಶಿಸಿ ಶಿವೋಹಂ ಎಂಬ ಅದ್ವೈತ ಭಾವವನ್ನು ಪ್ರಕಟಿಸಿದ ಆದಿಶಂಕರರು ಸುಗುಣಕ್ಕೆ ಪ್ರತೀಕವಾದ ಶರಣಾಗತಿ ತತ್ವವನ್ನು ಜನರಿಗೆ ಉಪದೇಶಿಸಿದರು. ಅದಕ್ಕೆ ಪಾರಮಾರ್ಥಿಕ ಪರಮಾವಧಿಯ ತೀರವನ್ನು ಸೇರಿದ್ದರೂ ಜನಗಳ ಆತ್ಮೋಜ್ಜೀವನಕ್ಕಾಗಿ ಭಜಗೋವಿಂದಂ, ಶಿವಾನಂದಲಹರಿ, ಸೌಂದರ್ಯಲಹರಿ, ಕನಕಧಾರಾಸ್ತೋತ್ರ, ಲಕ್ಷ್ಮೀನರಸಿಂಹ ಕರಾವಲಂಬ ಸ್ತೋತ್ರವನ್ನು ಜನರಿಗೆ ನೀಡಿ ಚರಿತಾರ್ಥರಾದರು. ಭಿನ್ನತೆಯಲ್ಲೂ ಏಕತ್ವದ ಚೈತ್ಯಸ್ವರೂಪವನ್ನು ತಮ್ಮ ರಚನೆಯಲ್ಲಿ ಪ್ರಕಟಿಸಿ ನೂತನ ಸಂದೇಶವನ್ನು ನೀಡಿದರು. ಶಂಕರರು ಪ್ರಸ್ಥಾನತ್ರಯಕ್ಕೆ ಭಾಷ್ಯವನ್ನು ನೀಡಿ ಲೋಕೋಪಕಾರಿಯಾದರು. ಆತ್ಮಾನಾತ್ಮಾ ವಿವೇಕದೊಂದಿಗೆ ಮನುಷ್ಯನು ಸೇರಬೇಕಾಗಿರುವ ಗಮ್ಯವನ್ನು ಆಧ್ಯಾತ್ಮವಿದ್ಯೆಯನ್ನು ಎಲ್ಲರಿಗೂ ಹಂಚಿದ ಮಹಾತ್ಮರು. ವ್ಯಕ್ತಿಗೆ, ಐಕ್ಯತೆಗೆ ಕರ್ತವ್ಯ ಪ್ರಬೋಧನೆಯನ್ನು ಮಾಡಿದ ಧರ್ಮೋದ್ಧಾರಕರು.

ಇನ್ನು ಭಗವದ್ರಾಮಾನುಜರು ಸಾಕ್ಷಾತ್ ರಾಮಾನುಜರೇ! ಅವರ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಅನನ್ಯ ಶರಣಾಗತಿ ತತ್ವವೇ ತುಂಬಿದೆ! ಇನ್ನು ನಮ್ಮಾಳ್ವಾರರ ರಚನೆಗಳಲ್ಲಿ ಭಗವಂತನ ಸುಗುಣಗಳ ಲಹರಿಯೇ ಇರುತ್ತದೆ. ಪರಮಾತ್ಮನ ಸರ್ವಶ್ರೇಷ್ಠತೆ ಎದ್ದು ಕಾಣುತ್ತಿದೆ. ಪದಕವಿತಾಪಿತಾಮಹರೆಂಬ ಹೆಗ್ಗಳಿಕೆಗೆ ಪಾತ್ರರಾದ ಅನ್ನಮಾಚಾರ್ಯರ ಪದಕವಿತೆಗಳೆಲ್ಲವೂ **"ಪತಿ ಪತ್ನೀ ಜೀವಾತ್ಮ ಪರಮಾತ್ಮ"**, ತಲ್ಲೀನತೆ ದಿವ್ಯಶರಣಾಗತಿಯನ್ನು ಸಾರುವಂತಹವೇ ! ವರ್ಣವೈಷಮ್ಯಗಳಿಗೆ ಅತೀತವಾಗಿ ಸಮತಾಭಾವ, ಸರ್ವ ಜಗದ್ರಕ್ಷಕನಲ್ಲಿ ದೀರ್ಘಶರಣಾಗತಿಯಾದ ಸಾರವೇ ಆ ಗೀತೆಗಳಲ್ಲಿ ತುಂಬಿವೆ. ಪ್ರಾಚೀನ ಧಾರ್ಮಿಕ ಜ್ಞಾನಸಾರವನ್ನು ಸಂಕೀರ್ತನೆಯಲ್ಲಿ ಎಲ್ಲರಿಗೂ ಹಂಚಿದ ಘನತೆ ಅನ್ನಮಯ್ಯನದೇ ಆಗಿದೆ. ಅದ್ವೈತ ಭಾವನೆಗೆ ಪ್ರತಿರೂಪವಾದ ಆದಿಶಂಕರರು ಎಲ್ಲರೂ ದೈವಗಳ ಮೇಲೆ ಶರಣಾಗತಿ ಸ್ತೋತ್ರವನ್ನು ರಚಿಸಿದರೆ, ಅನ್ನಮಯ್ಯ ದೈವವನ್ನು ಶ್ರೀವೇಂಕಟೇಶ್ವರನಲ್ಲಿ ನೋಡುತ್ತಾ ಭಿನ್ನತ್ವದಲ್ಲಿ ಏಕತ್ವವನ್ನು ಪ್ರದರ್ಶಿಸಿದರು. ಹೀಗೆ ಮಹಾಪುರುಷರೆಲ್ಲರೂ ತಮ್ಮ ಅವತಾರದಿಂದ ಆದರಿಸಿದ ಮಾಸ ಈ ಮಧು ಮಾಧವಮಾಸ!

ಈ ಮಾಸದಲ್ಲಿ ಗೃಹಪ್ರವೇಶಗಳು, ದೇವತಾಪ್ರತಿಷ್ಠಾಪನೆಗಳು, ಉಪನಯನಾದಿ ಕ್ರತುವುಗಳನ್ನು ಮಾಡುವುದಕ್ಕೆ ಮುಹೂರ್ತಗಳಿರುತ್ತವೆ. ಈ ಮಾಸದಲ್ಲಿ ಪ್ರತಿದಿನವೂ ಒಮ್ಮೆಯಾದರೂ ಶ್ರೀಮನ್ನಾರಾಯಣನನ್ನು ಸ್ಮರಿಸಿ ಎಲ್ಲಾ ಕಾರ್ಯವನ್ನು ಮಾಡಬೇಕು. ಈ ಮಾಸದಲ್ಲಿ ಆಚರಿಸಬೇಕಾದ ವಿಧಿವಿಧಾನಗಳೆಲ್ಲದರಲ್ಲೂ ಆರೋಗ್ಯರಹಸ್ಯಗಳು ಅಡಗಿವೆ ಎನ್ನುವುದು ವಿಶೇಷ! ಈ ಮಾಸದಲ್ಲಿ ತಿ.ತಿ.ದೇ. ನಿರ್ವಹಿಸಿದ ಪರ್ವದಿನಗಳು, ಸಂಭ್ರಮಗಳಿಗೆ ಕೊರೆತೆಯಿಲ್ಲ, ತಿರುಚಾನೂರು ಶ್ರೀಪದ್ಮಾವತಿ ಅಮ್ಮನವರ ವಸಂತೋತ್ಸವಗಳು, ಹೃಷೀಕೇಶ್, ನಾರಾಯಣವನ, ಜಮ್ಮಲಮಡುಗು, ಕಾರ್ವೇಟಿನಗರ ಕ್ಷೇತ್ರಗಳಲ್ಲಿ ಬ್ರಹ್ಮೋತ್ಸವಗಳು, ತರಿಗೊಂಡ ವೇಂಗಮಾಂಬ ಜಯಂತಿ ಇತ್ಯಾದಿಗಳನ್ನು ತಿ.ತಿ.ದೇ., ಬಹಳ ವೈಭದಿಂದ ನಿರ್ವಹಿಸುತ್ತದೆ. ಆಸ್ತಿಕರೆಲ್ಲರೂ ಈ ಉತ್ಸವಗಳಲ್ಲಿ ಪಾಲ್ಗೊಂಡು ಸ್ವಾಮಿಯ ಕೃಪೆಗೆ ಪಾತ್ರರಾಗಿ!



# ವಿಶಿಷ್ಟ ವೈಶಾಖ

-ಶ್ರೀಮತಿ. ಕೆ. ವಿ. ಪದ್ಮಾವತಿ
97437 22327

ವೈಶಾಖ ಮಾಸವು ವಸಂತಋತುವಿನ ಮಧ್ಯ ಭಾಗವು. ಗಿಡ ಮರಗಳೆಲ್ಲಾ ಚಿಗುರಿ ನಗುತ್ತಿವೆ. ಉತ್ತರಾಯಣವಾದುದರಿಂದ ಸೂರ್ಯನ ಬಿಸಿಲು ಪ್ರಖರವಾಗುತ್ತಾ ಬಂದು, ಮುಂದಿನ ಬೇಸಗೆಯಾದ ಗ್ರೀಷ್ಮಕ್ಕೆ ಅನುವು ಮಾಡಿಕೊಡುತ್ತದೆ. ವೈಶಾಖದಲ್ಲಿ ಆಗೊಮ್ಮೆ ಈಗೊಮ್ಮೆ ಬೀಳುವ ಸಂಜೆಯ ಮಳೆಯಿಂದ, ಭೂದೇವಿಗೆ ಬಿಸಿಲು-ಮಳೆಗಳ ಸುಖಸಮಾಗಮ ನಡೆಯುತ್ತಿರುತ್ತದೆ. ಹೀಗೆ ವೈಶಾಖ ಮುಂದಿನ ಬಿಸಿಲನ್ನು ಸಹಿಸಲು ಸಿದ್ಧತೆಯನ್ನು ಮಾಡಿಕೊಡುವ ತಿಂಗಳಾಗಿವೆ.

ಪೂರ್ಣಿಮೆ ದಿನ ವಿಶಾಖಾ ನಕ್ಷತ್ರದ ಯೋಗ ಇರುವುದರಿಂದ ಈ ಮಾಸಕ್ಕೆ ವೈಶಾಖವೆಂದು ಹೆಸರು ಬಂದಿದೆ. ವಿಶಾಖಾ ನಕ್ಷತ್ರವು,ಅಶ್ವಿನಿಯೇ ಮೊದಲಾದ ನಕ್ಷತ್ರಗಳ ಗುಂಪಿನಲ್ಲಿ 16ನೆಯದು. ಇಂದು ಇಂದ್ರಾಗ್ನಿ ದೇವತಾದ್ವಯ ಯುಕ್ತವಾದ ನಕ್ಷತ್ರವು, ಆದ್ದರಿಂದಲೇ ಈ ತಿಂಗಳಿನಲ್ಲಿ ಹಗಲಿನಲ್ಲಿ ಅಗ್ನಿ ಸಮಾನನಾದ ಬಿಸಿಲು, ಸಂಜೆಗೆ ಇಂದ್ರಪ್ರೇರಿತವಾದ ಮಳೆಗಳ ಸಮಾಗಮವನ್ನು ಕಾಣುತ್ತೇವೆ. ವೈಶಾಖದ ಪಾಡ್ಯಮಿಯು ತ್ರೇತಾಯುಗದ ಆದಿಯಾಗಿತ್ತೆಂದು ಹೇಳುತ್ತಾರೆ. ಚತುರ್ದಶಿಯಂದು ಪರಮಾತ್ಮನು ನರಸಿಂಹಾವತಾರಿಯಾಗಿ ಹಿರಣ್ಯಕಶಿಪುವನ್ನು ಕೊಂದ ದಿನವಾಗಿದೆ. ಅಂದು ನರಸಿಂಹ ಜಯಂತಿಯ ಆಚರಣೆ ನಡೆಯುತ್ತದೆ. ಆ ದಿನ ಸ್ವಾತಿ ನಕ್ಷತ್ರ, ಶನಿವಾರ ಅಥವಾ ಸೋಮವಾರ ಬಂದರೆ ಶ್ರೇಷ್ಠವು. ಇದೇ ದಿನ ಕೂರ್ಮಾವತಾರವೂ ನಡೆಯಿತೆಂದು ಹೇಳುತ್ತಾರೆ.

ವೈಶಾಖದ ಪೂರ್ಣಿಮೆಯು ಹಿಂದೂಗಳಿಗೆ ವ್ಯಾಸ ಪೂರ್ಣಿಮೆಯಾದರೆ, ಬೌದ್ಧರಿಗೆ ಬುದ್ಧಪೂರ್ಣಿಮೆ. ಅಂದಿನಿಂದ ಮುಂದಕ್ಕೆ ಕೃಷಿಕಾರ್ಯ ಆರಂಭವಾಗುವುದರಿಂದ **‘ಅಗೆಹುಣ್ಣಿಮೆ’** ಎಂದೂ ಹೆಸರು ಇದಕ್ಕಿದೆ. ಈ ದಿನ ಪೂರ್ಣಿಮಾ ವ್ರತವನ್ನು ಮಾಡಿ ಗೌರೀದೇವಿಯನ್ನು ಪೂಜಿಸಿ, ಪೂರ್ಣಕುಂಭವನ್ನು ದಾನ ಮಾಡುವ ಮತ್ತೊಂದು ಪದ್ಧತಿಯೂ ಇದೆ.

ಕೃಷ್ಣಪಕ್ಷದಲ್ಲಿ ಚಂದ್ರನು ಕ್ಷೀಣನಾಗುವುದರಿಂದ, ಚಾಂದ್ರಮಾನ ಪದ್ಧತಿಯಲ್ಲಿ ದೇವಾದಿಪೂಜೆಗಳು ಶುಕ್ಲದಲ್ಲಿಯೇ ಹೆಚ್ಚು. ಚಂದ್ರನಂತೆಯೇ ಪುಣ್ಯವೂ ಆಗ ವೃದ್ಧಿಯಾಗುತ್ತದೆ. ಆದರೆ ಉತ್ತರಾಯಣದ ತಿಂಗಳುಗಳು ದೇವತೆಗಳಿಗೆ ಹಗಲಾದುದರಿಂದ ಕೃಷ್ಣಪಕ್ಷವೂ ಉತ್ತಮವೇ ಆಗಿದೆ. ವೈಶಾಖದ ಕೃಷ್ಣಪಕ್ಷದ ವಿಶಿಷ್ಟ ದಿನಗಳೆಂದರೆ, ಪ್ರಥಮ ದಿನದ ನಾರದ ಜಯಂತಿ, ಅಷ್ಟಮಿಯ ದಿನ ತುಂಬುರರ ಜಯಂತಿ. ದೈವೀ ಸಂಗೀತಕ್ಕೆ ಪ್ರತಿನಿಧಿಗಳಾದ ಇವರಿಬ್ಬರ ಜಯಂತಿಯನ್ನು ಒಂದೇ ತಿಂಗಳಿನಲ್ಲಿ ನಡೆಸುವುದು ಪ್ರಶಸ್ತವು.

ವೈಶಾಖದ ಅಮಾವಾಸ್ಯೆಯನ್ನು ಬಾದಾಮಿ ಅಮಾವಾಸ್ಯೆ ಎಂದು ಕರೆಯುತ್ತಾರೆ. ತರ್ಪಣ, ಲಕ್ಷ್ಮೀಪೂಜೆ ಮತ್ತು ಶಿವ ಪೂಜೆಗಳಿಗೆ ಅಮಾವಾಸ್ಯೆ ಶ್ರೇಷ್ಠವು. ಅಂದು ಶನೈಶ್ಚರನ ಜಯಂತಿಯೂ ಇದೆ. ನಮ್ಮ ಕೃಷಿ ಪ್ರಧಾನ ಸಮಾಜದಲ್ಲಿ ಹಿಂದಿನವರು ಬಿಡುವಿನ ವೇಳೆಯನ್ನು ಧಾರ್ಮಿಕ ಕಾರ್ಯಗಳಿಗೆ ಮೀಸಲಾಗಿಟ್ಟಿದ್ದವರು. ವೈಶಾಖದಲ್ಲಿ ಬಹಳ ದೇವಾಲಯಗಳಲ್ಲಿ ರಥೋತ್ಸವ ನಡೆಯುತ್ತದೆ. ದವನ,ಮಲ್ಲಿಗೆ, ಧಾರಾಳವಾಗಿ ಸಿಗುವ ಈ ಕಾಲದಲ್ಲಿ ಅವನೇ ಕೊಟ್ಟ ವಸ್ತುಗಳನ್ನು ಅವನಿಗೇ ಅರ್ಪಿಸಿ ಕೃತಾರ್ಥರಾಗೋಣ. ಹೀಗೆ ವೈಶಾಖವು ಹಲವು ಚಟುವಟಿಕೆಗಳ ಆಗರವಾಗಿ, ದೈಹಿಕ ಮತ್ತು ಮಾನಸಿಕ ಉನ್ನತಿಯನ್ನು ಸಾಧಿಸಲು ನೆರವಾಗುತ್ತದೆ. ಅಂತಹ ವೈಶಾಖವನ್ನು ವೈಭವದಿಂದ ಸ್ವಾಗತಿಸೋಣ.

## ಕೂರ್ಮ ಜಯಂತಿ

**“ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ”** ಲೋಕದಲ್ಲಿ ದುಷ್ಟ ಶಕ್ತಿಗಳ ಉಪಟಳವು ಮಿತಿಮೀರಿದಾಗ, ಅವುಗಳ ದೌರ್ಜನ್ಯದಿಂದ ಲೋಕದ ವ್ಯವಸ್ಥೆಯು ಏರು ಪೇರಾಗಿ ಶಿಷ್ಟ ಜನರು ಅಪಾರವಾದ ಸಂಕಷ್ಟಗಳನ್ನು ಎದುರಿಸಬೇಕಾದ ಸಂದರ್ಭವು ಒದಗಿದಾಗ ಜಗದ್ರಕ್ಷಕನಾದ ನಾರಾಯಣನು ಧರ್ಮಸಂಸ್ಥಾಪನೆ ಮಾಡುವ ಸಲುವಾಗಿ ಸನ್ನಿವೇಶಗಳಿಗೆ ಅನುಗುಣವಾಗಿ ನಾನಾ ಅವತಾರಗಳನ್ನೆತ್ತುವನೆಂಬುದೇ ಮೇಲಿನ ಶ್ಲೋಕದ ಅರ್ಥವಾಗಿರುತ್ತದೆ. ಇದೇ ದಶಾವತಾರದ ವ್ಯಾಖ್ಯೆಯಾಗಿರುತ್ತದೆ. ಈ ಹತ್ತು ಅವತಾರಗಳನ್ನೇ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ - ಎಂದು ಗುರುತಿಸಲಾಗಿದೆ.




ಮಹಾವಿಷ್ಣುವಿನ ಎರಡನೇ ಅವತಾರವೇ ಕೂರ್ಮಾವತಾರ, ಎಂದರೆ ಆಮೆಯ ರೂಪವನ್ನು ಧರಿಸಿದ ಮಹಾವಿಷ್ಣುವು ಲೋಕಕಲ್ಯಾಣವನ್ನು ಮಾಡಿದ ಪ್ರಸಂಗವನ್ನೇ ಆದರಿಸಿ **“ಕೂರ್ಮಜಯಂತಿ”** ಯೆಂದು ಆಚರಿಸುತ್ತಾ ಮಹಾವಿಷ್ಣುವಿನ ಆರಾಧನೆಯನ್ನು ಮಾಡಲಾಗುತ್ತದೆ. ಅಮೃತಮಥನದ ಕಾಲದಲ್ಲಿ ದೇವಾಸುರರು ನಾರಾಯಣನ ಸಲಹೆಯಂತೆ ಮಂದರ ಪರ್ವತವನ್ನು ಕಡೆಗೋಲಾಗಿರುವಂತೆ ಪ್ರಾರ್ಥಿಸಿ ಕರೆ ತಂದು, ವಾಸುಕಿಯನ್ನು ಹಗ್ಗದಂತೆ ಸುತ್ತಿ ಕ್ಷೀರಸಮುದ್ರವನ್ನು ಮಥಿಸುತ್ತ ಅಮೃತವನ್ನು ಹೊರತೆಗೆಯುವ ಕಾರ್ಯದಲ್ಲಿ ತೊಡಗುತ್ತಾರೆ. ಆದರೆ ಮಂದರ ಪರ್ವತವು ನಿಧಾನವಾಗಿ ಕ್ಷೀರಸಮುದ್ರದಲ್ಲಿ ಮುಳುಗಲಾರಂಭಿಸುತ್ತದೆ. ಕಂಗೆಟ್ಟ ದೇವಾಸುರರು ನಾರಾಯಣನ ಮೊರೆಹೊಕ್ಕಾಗ ಆತ ಬೃಹದ್ಗಾತ್ರದ ಕೂರ್ಮಾವತಾರವನ್ನು ತಳೆದು ತನ್ನ ಬೆನ್ನ ಮೇಲೆ ಮಂದರ ಪರ್ವತವು ಸ್ಥಿರವಾಗಿ ನಿಲ್ಲುವಂತೆ ಮಾಡಿ ಸಮುದ್ರಮಂಥನ ಕಾರ್ಯವು ನಿರ್ವಿಘ್ನವಾಗಿ ನಡೆಯಲು ಸಹಕರಿಸುತ್ತಾನೆ. ಹೀಗೆ ನಾರಾಯಣನು ಕೂರ್ಮಾವತಾರವನ್ನು ಎತ್ತಿದ ದಿನವನ್ನೇ ವೈಶಾಖ ಪೌರ್ಣಮಿಯ ದಿನವೆಂದು ಗುರುತಿಸಿ ಅಂದು **‘ಕೂರ್ಮಜಯಂತಿ’** ಯನ್ನು ಆಚರಿಸಲಾಗುತ್ತದೆ. ಹೀಗೆ ಅವತರಿಸಿದ ನಾರಾಯಣನು ನಂತರದಲ್ಲಿ ಅಮೃತವು ಉದ್ಭವವಾದಾಗ ಅದು ದೇವತೆಗಳಿಗೆ ಮಾತ್ರ ಲಭಿಸುವಂತೆ ಮಾಡಲು ಮೋಹಿನಿಯ ರೂಪವನ್ನು ತಾಳುತ್ತಾನೆ. ಈ ಎಲ್ಲ ಕಥೆ ಭಾಗವತ ಅಗ್ನಿಪುರಾಣ ಮತ್ತು ರಾಮಾಯಣದಲ್ಲಿ ಬರುತ್ತದೆ. ಕೂರ್ಮಪುರಾಣವು ಹದಿನೆಂಟು ಪುರಾಣಗಳಲ್ಲಿ ಪ್ರಮುಖವಾಗಿದ್ದು ಮಹಾವಿಷ್ಣುವಿನಿಂದ ನೇರವಾಗಿ ನಾರದಮುನಿಗೆ ಹೇಳಿದ್ದೆಂದು ಭಾವಿಸಲಾಗಿದೆ.

ದಶಾವತಾರಗಳಲ್ಲಿ ಮತ್ಸ್ಯ, ಕೂರ್ಮ, ವರಾಹ ಮತ್ತು ನರಸಿಂಹಾವತಾರಗಳು ಸತ್ಯಯುಗದಲ್ಲಿಯೂ, ವಾಮನ, ಪರಶುರಾಮಾವತಾರಗಳು ತ್ರೇತಾಯುಗದಲ್ಲಿಯೂ, ದ್ವಾಪರದಲ್ಲಿ ಕೃಷ್ಣಾವತಾರವೂ ಕಲಿಯುಗದಲ್ಲಿ ಬುದ್ಧ ಮತ್ತು ಕಲ್ಕಿ ಅವತಾರವೂ ಆಗಿರುವುದೆಂದು ಹೇಳಲಾಗಿದೆ.

ಐದನೇ ಅವತಾರವಾದ ವಾಮನರೂಪದವರೆಗೂ ಉಳಿದ ನಾಲ್ಕು ಅವತಾರಗಳು ಜೀವಿಗಳ ಅತ್ಯಂತ ಕೆಳವರ್ಗದ ಪ್ರಾಣಿಗಳಿಂದಲೂ ಪ್ರಾರಂಭವಾಗಿ (ಮೀನಿನಿಂದ ವರಾಹದ ವರೆಗೆ). ನರಸಿಂಹಾವತಾರದಲ್ಲಿ ಅರ್ಧಮಾನವ ಮತ್ತು ಅರ್ಧ ಪ್ರಾಣಿಯಂತಿದ್ದು ವಾಮನಾವತಾರದಲ್ಲಿ ವರ್ಣನೆಯಿದೆ. ಮಾನವ ರೂಪಕ್ಕೆ ತಲುಪಿದ ಜೀವಿಗಳ ವಿಕಾಸವಾದದ ತತ್ತ್ವವನ್ನು ಇಲ್ಲಿ ಗುರುತಿಸಬಹುದಾಗಿದೆ. ಮತ್ಸ್ಯ, ಕೂರ್ಮ, ವರಾಹಗಳು ಸಂಪೂರ್ಣವಾಗಿ ಜಲಚರ ಮತ್ತು ಪ್ರಾಣಿಯ ರೂಪಗಳಾಗಿವೆ.

ಆಮೆಯ ಅವತಾರವನ್ನು ಮಹಾವಿಷ್ಣುವು ತಳೆದನೆಂದು ಹೇಳುವ ಕಥೆಯಲ್ಲಿ ಇದೊಂದು ವಿಶಿಷ್ಟರೂಪವಾಗಿದ್ದು ಇದರ ಆರಾಧನೆಯು ನಡೆಯುವ ದೇವಾಲಯಗಳು ದೇಶದಲ್ಲಿಯೇ ಅತ್ಯಂತ ವಿರಳ ಸಂಖ್ಯೆಯಲ್ಲಿವೆ. ಪ್ರಮುಖವಾಗಿ ಇದಕ್ಕೆ ಮೀಸಲಾದ ಮೂರು ಮಂದಿರಗಳಿವೆ. ಶ್ರೀಕಾಕುಳಂನಲ್ಲಿ ಮಹಾವಿಷ್ಣುವಿನ ಈ ಅವತಾರದ ಮಂದಿರವಿದ್ದು ಇದನ್ನು ಶ್ರೀರಾಮಾನುಜಾಚಾರ್ಯರು ಸ್ಥಾಪಿಸಿದರೆಂದು ಹೇಳುತ್ತಾರೆ. ದಕ್ಷಿಣ ಭಾರತದ ಅತ್ಯಂತ ವಿಶಿಷ್ಟವಾದ ವಿಷ್ಣು ದೇವಾಲಯವೆಂಬ ಹೆಸರನ್ನು ಇದು ಹೊಂದಿದೆ. ಆಂಧ್ರಪ್ರದೇಶದ ಶ್ರೀಕಾಕುಳಂನಲ್ಲಿರುವ **"ಕೂರ್ಮಮಂದಿರವು"** ದೊಡ್ಡ ಗಾತ್ರದ ಸಾಲಿಗ್ರಾಮದ ರೂಪದಲ್ಲಿ ಮಹಾವಿಷ್ಣುವಿನ ಮೂರ್ತಿಯನ್ನು ಹೊಂದಿದೆ.

ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಬಳಿ ಇರುವ ಒಂದು ಸಣ್ಣ ಹಳ್ಳಿ ಗವಿರಂಗಾಪುರ. ಇಲ್ಲಿರುವ ಗವಿರಂಗನಾಥ ಸ್ವಾಮಿ ಎನಿಸಿರುವ ಮಹಾವಿಷ್ಣುವು ಆಮೆಯ ರೂಪದಿಂದ ಇಲ್ಲಿ ಆರಾಧನೆಗೊಳ್ಳುತ್ತಾರೆ. ಇದೊಂದು ಗುಹಾ ಮಂದಿರವಾಗಿದ್ದು ಕರ್ನಾಟಕದ ವಿಶಿಷ್ಟ ದೇವಾಲಯಗಳಲ್ಲಿ ಒಂದಾಗಿದೆ. ಆಂಧ್ರಪ್ರದೇಶದಲ್ಲಿಯೇ ಇರುವ ಮತ್ತೊಂದು ಕೂರ್ಮಮಂದಿರವು ಚಿತ್ತೂರಿನಲ್ಲಿರುವ **'ಕೂರ್ಮಾಲ್'** ಎಂಬ ಹಳ್ಳಿಯಲ್ಲಿದ್ದು **"ಕೂರ್ಮ ವಾದಿರಾಜಸ್ವಾಮಿಮಂದಿರ"** ವೆಂಬ ವಿಶಿಷ್ಟ ದೇವಾಲಯವೆನಿಸಿದೆ. ಈ ಮಂದಿರದ ಕಾರಣದಿಂದಲೇ ಊರಿನ ಹೆಸರು ಇರುವುದೆಂದು ಹೇಳುತ್ತಾರೆ.

ಕೂರ್ಮಪುರಾಣವು ಹದಿನೆಂಟು ಪುರಾಣಗಳಲ್ಲಿ ಒಂದಾಗಿದ್ದು ಅದು ಶ್ರೀಹರಿಯ ದೇಹದ ಬೆನ್ನಿನ ಭಾಗದಿಂದ ಮೂಡಿಬಂದ ಕೂರ್ಮಾವತಾರದ ವಿಚಾರವನ್ನು ಒಳಗೊಂಡಿದ್ದರೂ ಕೇವಲ ಶ್ರೀಹರಿಯ ಶಕ್ತಿಯನ್ನೇ ಸ್ತುತಿಸದೆ ವಿಷ್ಣು, ಶಿವ ಮತ್ತು ಶಕ್ತಿ ಮೂರನ್ನೂ ಪ್ರಧಾನವಾಗಿಯೇ ಪರಿಗಣಿಸಲಾಗಿದೆ. 95 ಅಧ್ಯಾಯಗಳಿಂದಲೂ 17,000 ಶ್ಲೋಕಗಳಿಂದಲೂ ರಚಿಸಲಾಗಿರುವ ಈ ಕೂರ್ಮಪುರಾಣದಲ್ಲಿ ದಂತಕಥೆಗಳು ಪುರಾಣ ತೀರ್ಥಗಳು, ವೇದಾಂತಾದಿ ಪಾರಮಾರ್ಥಿಕ ವಿಚಾರಗಳಿಂದ ಕೂಡಿದ್ದು **"ಈಶ್ವರಗೀತೆ"** ಯೆಂದೂ ಇದನ್ನು ಕರೆಯುತ್ತಾರೆ. ಪೂರ್ವ ವಿಭಾಗ ಮತ್ತು ಉಪವಿಭಾಗ ಎಂದು ಎರಡು ವಿಭಾಗಗಳಾಗಿ ಇದನ್ನು ವಿಂಗಡಿಸಲಾಗಿದೆ. ಈ ಗೀತೆಯು ವಿಷ್ಣುವಿನಿಂದ ಹೇಳಲ್ಪಟ್ಟಿದ್ದರೆ ಇದರಲ್ಲಿ ಶಿವನು ವಿಷ್ಣುವಿನ ಅಪೇಕ್ಷೆಯಂತೆ ಜಗತ್ತು, ಜೀವನ, ಆತ್ಮ, ಪುರುಷ, ಪ್ರಕೃತಿ, ಮಾಯಾ, ಯೋಗ, ಮೋಕ್ಷ ಎಂಬ ಎಲ್ಲ ವಿಚಾರಗಳನ್ನು ಬೋಧಿಸಿದಂತೆ ಇದೆ. ಯಾವುದೇ ವರ್ಣದವರು ಕೂಡ ಭಕ್ತಿಯೋಗದ ಮೂಲಕ ಮೋಕ್ಷವನ್ನು ಹೊಂದುವುದು ಸಾಧ್ಯವೆಂದು ಕೂಡ ಹೇಳುತ್ತ ಅದರ ವಿಧಾನವನ್ನು ವಿವರಿಸಲಾಗಿದೆ.

ಕಚ್ಛಪಮಂತ್ರವನ್ನು ಉಚ್ಚಾರಣೆ ಮಾಡುತ್ತ, ಉಪವಾಸಾದಿ ವಿಧಿಗಳಿಂದ ಶ್ರೀಹರಿಯ ಪೂಜೆಯನ್ನು ಮಾಡುವುದರೊಂದಿಗೆ **"ಕಚ್ಛಪಜಯಂತಿ"** ಯನ್ನು ಆಚರಿಸಲಾಗುತ್ತದೆ. ಕಚ್ಛನು ಅಥವಾ **"ಕೂರ್ಮಗಾಯತ್ರಿ"** ಮಂತ್ರವೆಂದೂ ಕರೆಯುತ್ತಾರೆ.

**ಓಂ ಕಚ್ಛಪೇತಾಯ ವಿದ್ಮಹೇ! ಮಹಾಬಲಾಯ ಧೀಮಹೀ!**
**ತನ್ನೋ ಕೂರ್ಮ ಪ್ರಚೋದಯಾತ್**

**ಅಥವಾ**

**ಓಂ ತರಾತರಾಯ ವಿದ್ಮಹೇ ! ಪಾಶಹಸ್ತಾಯ ಧೀಮಹೀ !**
**ತನ್ನೋ ಕೂರ್ಮ ಪ್ರಚೋದಯಾತ್॥**

ಕೂರ್ಮಮಂದಿರಗಳಲ್ಲಿ ಅಂದು ವಿಶೇಷ ಪೂಜೆಯು ನಡೆಯುತ್ತದೆ. ಪೌರ್ಣಮಿಯ ಹಿಂದಿನ ದಿನದಿಂದಲೇ ವ್ರತವನ್ನು ಪ್ರಾರಂಭಿಸುವ ಭಕ್ತರು ವಿಷ್ಣುಸಹಸ್ರನಾಮದ ಪಾರಾಯಣವನ್ನು ಮಾಡುತ್ತಾರೆ. ಸಮುದ್ರಮಂಥನ ಕಾಲದಲ್ಲಿ ಕ್ಷೀರಸಮುದ್ರದಿಂದ ಉದ್ಭವಿಸಿದ ಹದಿನಾಲ್ಕು ಅನರ್ಘ್ಯ ರತ್ನಗಳು ಮಹಾವಿಷ್ಣುವಿನ ಕೂರ್ಮಾವತಾರದ ಸಹಕಾರವಿಲ್ಲದೆ ಹೊರಬರಲು ಸಾಧ್ಯವಾಗುತ್ತಿರಲಿಲ್ಲವಾದ್ದರಿಂದಲೂ, ಯಾವುದೇ ರೀತಿಯಲ್ಲಿ ಸಂಕಷ್ಟಗಳು ಎದುರಾದರೂ, ಪಾರು ಮಾಡಲು ತಾನಿದ್ದೇನೆಂದು ಅಭಯವನ್ನು ನೀಡುವವನು ಮಹಾವಿಷ್ಣುವೆಂದೂ ಭಕ್ತಿಯಿಂದ ಅವನ ಆರಾಧನೆಯನ್ನು **"ಕೂರ್ಮ ಜಯಂತಿ"**ಯೆಂದು ಮಾಡಲಾಗುತ್ತದೆ. ದೇವಿಯೋಗಮಾಯೆಯು ಕೂರ್ಮಾವತಾರದ ಮಹಾವಿಷ್ಣುವಿನೊಂದಿಗೆ ನೆಲೆಸಿರುತ್ತಾಳೆಂಬ ಪ್ರತೀತಿಯೂ ಇದ್ದು ಭಕ್ತಾದಿಗಳು ಆ ದಿನದಿಂದ ಅನೇಕ ಶುಭಕಾರ್ಯಗಳನ್ನು ಪ್ರಾರಂಭಿಸುತ್ತಾರೆ.

# ಅಬ್ಬೂರಿನ ಬ್ರಹ್ಮಣ್ಯ ತೀರ್ಥರ ಸನ್ನಿಧಾನ

- ಡಾ|| ಗುರುರಾಜ ಪೋಶೆಟ್ಟಿಹಳ್ಳಿ
97393 69621



## ಶ್ರೀ ಬ್ರಹ್ಮಣ್ಯತೀರ್ಥರು:

ಶ್ರೀನರಸಿಂಹನ ಅನುಗ್ರಹದಿಂದ ಜನಿಸಿ, ಶ್ರೀ ಪುರುಷೋತ್ತಮ ತೀರ್ಥರಿಂದ ಯತ್ಯಾಶ್ರಮ ಪಡೆದ ಮಹಾತ್ಮ ಧನ್ಯಯತಿಗಳು. ಶ್ರೀ ವ್ಯಾಸರಾಜರ ಜನನಕ್ಕೆ ನಿಮಿತ್ತರಾಗಿ ದ್ವೈತವೇದಾಂತ ಸಾಮ್ರಾಜ್ಯ ಸಿಂಹಾಸನದ ವೀರಕೇಸರಿ ಶ್ರೀವ್ಯಾಸರಾಜರ ಗುರುಗಳು. ಸಾಧಕರ ಸಾಧನೆಗೆ ಬೇಕಾದ ಆರೋಗ್ಯವನ್ನು ಕರುಣಿಸುವ ಭಾಸ್ಕರಾಂಶರೆಂದೇ ಪ್ರಖ್ಯಾತರಾದರು. ಸಿದ್ಧಾಂತಪ್ರಸಾರ, ವಾದಿಪರಾಜಯ, ಕೆರೆ ನಿರ್ಮಾಣದಂತಹ ಕಾರ್ಯಗಳಿಂದ ತತ್ವಜ್ಞಾನ ಕ್ಷೇತ್ರ, ಕೃಷಿ ಕ್ಷೇತ್ರಗಳೆರಡಕ್ಕೂ ನೀರೆರೆದ ಮಹನೀಯರು.

ಮಾಧ್ವಯತಿ ಪರಂಪರೆಯಲ್ಲಿ ಶ್ರೇಷ್ಠರೆನಿಸಿದ ಬ್ರಹ್ಮಣ್ಯತೀರ್ಥರ ಆರಾಧನೆ ಮೇ 25 ರಂದು ನಡೆಯಲಿದೆ. ಅವರ ಜೀವನ-ಪವಾಡಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ.

ಕಂಸಧ್ವಂಸಿಪದಾಂಭೋಜ ಸಂಸಕ್ತೋ ಹಂಸಪುಂಗವಃ ।
ಬ್ರಹ್ಮಣ್ಯಗುರುರಾಜಾಖ್ಯೋ ವರ್ತತಾಂ ಮಮ ಮಾನಸೇ ॥
(ಶ್ರೀ ವ್ಯಾಸರಾಜರು - ತಾತ್ಪರ್ಯಚಂದ್ರಿಕಾ)

ಜ್ಞಾನಮಂಟಪವೆಂದು ಪ್ರಸಿದ್ಧವಾದ ಅಬ್ಬೂರಿನ ಭವ್ಯ ಬೃಂದಾವನದಲ್ಲಿ ವಿರಾಜಮಾನರಾಗಿರುವ ಭಾಸ್ಕರಾಂಶ ಸಂಭೂತರಾದ ಶ್ರೀಬ್ರಹ್ಮಣ್ಯತೀರ್ಥರ ಸಿದ್ಧಿ ಸಾಧನೆಗಳು ಅಪೂರ್ವವಾದುದು, ಸನ್ಯಾಸಿಗಳು ಹೇಗಿರಬೇಕೆಂದು ತಮ್ಮ ಬದುಕಿನ ಮೂಲಕ ತಿಳಿಸಿಕೊಟ್ಟ ಅವರು ಸನ್ಯಾಸ ಕುಲಕ್ಕೆ ಕಾಂತಿಯುತ ದೀಪದಂತೆ ಬೆಳಗಿದ ಯತಿವರೇಣ್ಯರು. ಕರ್ನಾಟಕ ವಿದ್ಯಾಸಿಂಹಾಸನಾಧೀಶ್ವರರಾದ ಶ್ರೀವ್ಯಾಸರಾಜರಂತಹ ಸೀಮಾ ಪುರುಷರನ್ನು ಆಧ್ಯಾತ್ಮ ಜಗತ್ತಿಗೆ ಬಳುವಳಿಯಾಗಿ ಕೊಟ್ಟ ಹಿರಿಮೆ ಅವರದು.

ಆಚಾರ್ಯಮಧ್ವರ ಪರಂಪರೆಯಲ್ಲಿ ಶ್ರೀಪದ್ಮನಾಭತೀರ್ಥ, ನರಹರಿತೀರ್ಥ, ಮಾಧವತೀರ್ಥ ಮತ್ತು ಅಕ್ಷೋಭ್ಯತೀರ್ಥ, ಅನಂತರ ಜಯತೀರ್ಥ, ವಿದ್ಯಾಧಿರಾಜರು, ರಾಜೇಂದ್ರತೀರ್ಥ, ಜಯಧ್ವಜ ತೀರ್ಥರ ಅನಂತರ ಪುರುಷೋತ್ತಮತೀರ್ಥರಿಂದ ಆಶ್ರಮ ಸ್ವೀಕರಿಸಿದ ಮಹಾನುಭಾವರೇ ಬ್ರಹ್ಮಣ್ಯತೀರ್ಥರು.

ಬ್ರಹ್ಮಣ್ಯತೀರ್ಥರ ಕಾಲ 1443 ರಿಂದ 1467. ನರಸಿಂಹನೆಂಬ ಜನ್ಮನಾಮದಿಂದ ಅಬ್ಬೂರಿನಲ್ಲಿ ಜನಿಸಿ, 8ನೇ ವಯಸ್ಸಿನಲ್ಲಿ ಉಪನಯನಗೊಂಡು, ಶ್ರೀಪುರುಷೋತ್ತಮ ತೀರ್ಥರಿಗೆ ಸ್ವಪ್ನಸೂಚಿತವಾಗಿ ಅದರಂತೆ ಅವರು ನರಸಿಂಹನಿಗೆ ಸನ್ಯಾಸವನ್ನು ನೀಡಿದರು. ಇವರೇ ಮುಂದೇ ಬ್ರಹ್ಮಣ್ಯತೀರ್ಥರೆಂದು ಪ್ರಸಿದ್ಧರಾದರು.

## ಮಧುಕರವೃತ್ತಿ

ಶ್ರೀಬ್ರಹ್ಮಣ್ಯತೀರ್ಥರು ಪ್ರತಿದಿನ ಕಣ್ವನದಿಯಲ್ಲಿ ತಮ್ಮ ಶಿಷ್ಯರು ಮಧುಕರ ವೃತ್ತಿಯಿಂದ ತರುತ್ತಿದ್ದ ಪಕ್ವಾನ್ನವನ್ನು ಶ್ರೀನರಸಿಂಹದೇವರಿಗೆ ಅರ್ಪಿಸಿ ಶಿಷ್ಯರೊಂದಿಗೆ ಭೋಜನ ಮಾಡುತ್ತಿದ್ದರು. ಹೀಗೆ ಅವರ ತಪಸ್ಸು ಅವಿಚ್ಛಿನ್ನವಾಗಿತ್ತು. ಅವರು ಶಿಷ್ಯರು ತಂದ ಭಿಕ್ಷಾನ್ನವನ್ನು ಪ್ರೋಕ್ಷಿಸಿದಾಗ ಅದು ಮತ್ತೆ ಆಗ ತಾನೆ ಪಕ್ವಗೊಂಡ ಅನ್ನದಂತೆ ಬಿಸಿಯಾಗುತ್ತಿದ್ದಿತಂತೆ. ಅವರು ಕಲಶಪೂಜೆ ಮಾಡಿದ ಮೇಲೆ ಅದರಲ್ಲಿ

ಉಂಟಾಗುತ್ತಿದ್ದ ದೇವತಾ ಸಾನ್ನಿಧ್ಯದಿಂದಾಗಿ ಅವರ ಶಿಷ್ಯರಿಗೆ ಅದನ್ನು ಎತ್ತಲು ಅಸಾಧ್ಯವಾಗುತ್ತಿದ್ದಿತು ಎಂದು ಪ್ರತೀತಿ.

## ಶ್ರೀ ವ್ಯಾಸರಾಜರ ಜನ್ಮ

ಒಮ್ಮೆ ಶ್ರೀಬ್ರಹ್ಮಣ್ಯತೀರ್ಥರು ಬನ್ನೂರು ಪ್ರಾಂತ್ಯದಲ್ಲಿ ಸಂಚಾರದಲ್ಲಿದ್ದಾಗ, ರಾಮಾಚಾರ್ಯನೆಂಬುವ ಸಪತ್ನೀಕನಾಗಿ ಗಂಗಾ ಸ್ನಾನಕ್ಕೆ ತೆರಳುವಾಗ ಬ್ರಹ್ಮಣ್ಯತೀರ್ಥರು ನೆಲೆಸಿದ್ದ ಸ್ಥಳದ ಬಳಿ ಬರುವ ವೇಳೆಗೆ ವಿಚಿತ್ರ ಜ್ವರವೊಂದರಿಂದ ನಿಧನನಾದನು. ಗಂಡನ ವಿರಹ ವೇದನೆಯನ್ನು ತಾಳಲಾರದೆ ಅವನ ಪತ್ನಿ, ಪತಿಯೊಂದಿಗೆ ಸಹ ಗಮನವನ್ನು ಮಾಡಲು ನಿಶ್ಚಯಿಸಿ, ಗುರುಗಳ ಅಪ್ಪಣೆ ಪಡೆಯಲು ಬ್ರಹ್ಮಣ್ಯತೀರ್ಥರಲ್ಲಿಗೆ ಬಂದಳು. ಆದರೆ ಅವಳು ಬಂದು ನಮಸ್ಕರಿಸಿದಾಗ ತಪೋನಿಧಿಯಾದ ಬ್ರಹ್ಮಣ್ಯತೀರ್ಥರ ಮುಖಾರ ವಿಂದದಿಂದ ಬಂದ ಅನುಗ್ರಹವೆಂದರೆ **'ದೀರ್ಘಸುಮಂಗಲೀ ಭವ'** ಅಲ್ಲಿದ್ದವರಿಗೆಲ್ಲ ಆಶ್ಚರ್ಯ. ಗಂಡ ನಿಧನರಾಗಿರುವಾಗ ಗುರುಗಳು ಹೀಗೇಕೆ ಆಶೀರ್ವದಿಸಿದ್ದಾರೆಂದು. ಆಗ ಗುರುಗಳು **"ಇದು ನಮ್ಮ ಮಾತಲ್ಲ, ನಮ್ಮ ಆರಾಧ್ಯಮೂರ್ತಿಯಾದ ಭಗವಂತನ ಅನುಗ್ರಹ. ಅದೆಂದೂ ಸುಳ್ಳಾಗದು. ನಿನ್ನ ಪತಿ ಬದುಕುವನು, ಶತಾಯುಷಿಯಾಗುವನೆಂದರು. ಅವನಿಗೆ ಎರಡು ಮಕ್ಕಳಾಗುವುದು"** ಎಂದರು. ಶ್ರೀಗಳು ನೀಡಿದ ಮಂತ್ರೋದಕವನ್ನು ಸ್ವೀಕರಿಸಿ,ಅದನ್ನು ತನ್ನ ಪತಿಯ ಮೃತದೇಹದ ಮೇಲೆ ಪ್ರೋಕ್ಷಿಸಿದಳು. ಆ ಬ್ರಾಹ್ಮಣ ನಿದ್ರೆಯಿಂದೆದ್ದವನಂತೆ ಎದ್ದು ಕುಳಿತನಂತೆ. ಅವನು ಕಾಶೀಯಾತ್ರೆಯನ್ನೂ ಮುಗಿಸಿದನಂತೆ ಅವನ ಪತ್ನಿ ಗರ್ಭಿಣಿಯಾಗಿ ಸಕಾಲದಲ್ಲಿ ಗಂಡು ಮಗುವನ್ನು ಹಡೆದಳು.

ಹೀಗೆ ಜನಿಸಿದ ಮಗುವಿಗೆ ಶ್ರೀಗಳು ಭೂಸ್ಪರ್ಶವಾಗದಂತೆ ಸ್ವರ್ಣ ಪಾತ್ರೆಯನ್ನೇ ನೀಡಿದರು. ಆ ಮಗುವನ್ನು ತಮ್ಮ ಬಳಿ ತರಿಸಿಕೊಂಡ ಶ್ರೀಗಳು ತಮ್ಮ ಸ್ವಹಸ್ತದಿಂದಲೇ ಕಣ್ವ ನದಿಯಲ್ಲಿ ತೊಳೆದು, ಭಗವಂತನಿಗೆ ಅಭಿಷೇಕಿಸಿದ ಕ್ಷೀರವನ್ನು ಪಾನ ಮಾಡಿ ಸುತ್ತ ಪೋಷಿಸಿದರು. ಹಾಗೆ ಆ ಮಗುವನ್ನು ತೊಳೆದ ಸ್ಥಳ **'ಶ್ವೇತ ಶಿಲಾಹ್ರದ'** (ಬಿಳಿಕಲ್ಲು ಮಡು) ಎಂಬ ಹೆಸರಿನಿಂದ ಇಂದಿಗೂ ಪ್ರಸಿದ್ಧವಾಗಿದೆ. ಆ ಮಗುವೇ ಮಧ್ವಮತವನ್ನು ಉತ್ತುಂಗ ಕ್ಕೇರಿಸಿದ, ಸಕಲ ಅನ್ಯ ಮತಸ್ಥರಿಗೆ ಸಿಂಹಸ್ವಪ್ನರಾದ, ಆನೆಗೊಂದಿ ಕ್ಷೇತ್ರದಲ್ಲಿ ವೃಂದಾವನಸ್ಥರಾದ, ಪ್ರಹ್ಲಾದಾವತಾರರಾದ ಶ್ರೀವ್ಯಾಸರಾಜರು.

ಶ್ರೀ ಬ್ರಹ್ಮಣ್ಯತೀರ್ಥರ ಬೃಂದಾವನವಿರುವುದು ಬೆಂಗಳೂರು ಸಮೀಪದ ಮೈಸೂರು ಹೆದ್ದಾರಿಯ ರಾಮನಗರ ತಾಲ್ಲೂಕು ಚನ್ನಪಟ್ಟಣದಿಂದ ಸುಮಾರು 5 ಕಿ.ಮೀ. ದೂರದ ಸುಂದರ ಪ್ರಾಕೃತಿಕ ನೆಲೆಯಾದ ಅಬ್ಬೂರು ಸಾತ್ವಿಕ ಪರಿಸರದ ದೈವಿಕ ಗ್ರಾಮ. ಚಾರಿತ್ರಿಕವಾಗಿ ಪೌರಾಣಿಕವಾಗಿ ಪ್ರಾಮುಖ್ಯತೆ ಪಡೆದಿರುವ ಅಬ್ಬೂರು ಈ ಹಿಂದೆ ಚಿಕ್ಕಗಂಗವಾಡಿ ಅರಸು ಮನೆತನದ ರಾಜಧಾನಿಯಾಗಿತ್ತು. ಚೋಳರ ಕಾಲದಲ್ಲಿ ಈ ಸ್ಥಳ ಅಪ್ಪಿಯೂರು ಎಂದು ಕರೆಯಲ್ಪಟ್ಟು, ತಮಿಳು ಭಾಷೆಯ ಈ ಅಪ್ಪಿಯೂರು ಕನ್ನಡದಲ್ಲಿ ಅಭಿಯೂರಾಗಿ ನಂತರ ಅಬ್ಬೂರಾಗಿದೆ.

## ಮಳೂರು ಕ್ಷೇತ್ರ

ಒಮ್ಮೆ ಚಿಕ್ಕಗಂಗವಾಡಿ ಅರಸು ಮನೆತನದ ತಿಮ್ಮರಸು ಎಂಬ ರಾಜನಿಗೆ ಸಾರಂಗಧರ ಎಂಬ ಪುತ್ರನಿದ್ದನು. ಅವನ ತಾಯಿ ಅವನ ಬಾಲ್ಯದಲ್ಲೇ ಮೃತಳಾದ್ದರಿಂದ ರಾಜನು (ಮುದುಕನಾಗಿದ್ದರೂ ಕೂಡ) ಮತ್ತೊಬ್ಬ ರಾಜಕುಮಾರಿಯನ್ನು ವಿವಾಹವಾದನು. ಆದರೆ ಆ ರಾಜಕುಮಾರಿಯಾದರೋ ತನ್ನ ಮಗನಾದ (ಸವತಿಯ ಮಗ), ಸಾರಂಗಧರನನ್ನೇ ಕಾಮಿಸಿದಾಗ, ಆ ರಾಜಕುಮಾರನು ತಿರಸ್ಕರಿಸಲು, ಆ ರಾಜಕುಮಾರಿಯು ಅವನ ಮೇಲಿನ ಸಿಟ್ಟಿನಿಂದ ರಾಜನ ಬಳಿ ಹೋಗಿ ರಾಜಕುಮಾರನು ತನ್ನ ಮಾನಭಂಗಕ್ಕೆ ಪ್ರಯತ್ನಿಸಿದನೆಂದು ಹೇಳಿದಳು. ಆ ರಾಜನಾದರೋ ವಿವೇಕರಹಿತನಾಗಿ ಅವಳ ಮಾತನ್ನು ನಂಬಿ ತನ್ನ ಭಟರಿಗೆ ರಾಜಕುಮಾರನ ಕೈಕಾಲು ಕತ್ತರಿಸಿ, ಕಣ್ವನದಿಯಲ್ಲಿ ಬಿಸಾಡಲು ಆಜ್ಞಾಪಿಸಿದನು. ಅದರಂತೆ ಭಟರು ಮಾಡಿದರು. ಅಲ್ಲಿಯ ನದೀತೀರಕ್ಕೆ ಅಂದಿನ ಆಹ್ನೀಕಕ್ಕೆಂದು ತೆರಳಿದ್ದ ಶ್ರೀಬ್ರಹ್ಮಣ್ಯತೀರ್ಥರ ದೃಷ್ಟಿ ಬಿದ್ದಿತು. ಕೂಡಲೇ ಅವರು ನದಿಯ ಮೃತ್ತಿಕೆಯನ್ನು ಅಭಿಮಂತ್ರಿಸಿ, ಅವನ ಮೈಗೆ ಸ್ವತಃ ಲೇಪಿಸಿದರು. ಆಗ ಅವನ ಕೈಕಾಲುಗಳು ಮೊಳೆತು ಪುನಃ ಮೊದಲಿನಂತಾದನು. ಇದು ನಡೆದದ್ದು ಮಳೂರು ಎಂಬ ಪ್ರಸಿದ್ಧ ಕ್ಷೇತ್ರ. ಈ ಕಾರಣದಿಂದಲೇ ಆ ಕ್ಷೇತ್ರಕ್ಕೆ ಮಳೂರು (ಕೈ ಕಾಲುಗಳು ಮತ್ತೆ ಮೊಳೆತ ಊರು) ಎಂಬ ಹೆಸರಿರುವ ಪ್ರತೀತಿ ಇದೆ. ಇದೇ ಸ್ಥಳದಲ್ಲೇ ಮುಂದೆ ಶ್ರೀವ್ಯಾಸರಾಜರು ಅತ್ಯಂತ ಮನೋಹರವಾದ ಅಪ್ರಮೇಯ ಎಂಬ ಹೆಸರಿನ ಬಾಲಕೃಷ್ಣನ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಮುಂದೆ ಅದು ಪವಿತ್ರ ಯಾತ್ರಾ ಸ್ಥಳವಾಯಿತು. **'ಮಳೂರುಕೃಷ್ಣ'**ನೆಂದು ಪುರಂದರದಾಸರು **'ಜಗದೊದ್ಧಾರನ ಆಡಿಸಿದಳೆಶೋದೆ'** ಎಂಬ ಕೀರ್ತನೆಯನ್ನು ಈ ಮೂರ್ತಿಯನ್ನು ನೋಡಿ ರಚಿಸಿದರೆಂದು ಪ್ರತೀತಿ.

ಅನೇಕ ಯತಿವರೇಣ್ಯರ ಜಪ, ತಪ, ಅನುಷ್ಠಾನಗಳಿಂದ ಪುನೀತವಾಗಿರುವ ಈ ಸುಂದರ ಪ್ರದೇಶ ಪುರಾಣದಲ್ಲಿ ಜ್ಞಾನಮಂಟಪವೆಂದೇ ಪ್ರಸಿದ್ಧ. ಮುಗಿಲೆತ್ತರಕ್ಕೆ ಹೋಗಿ ನಿಂತಿರುವ ತೆಂಗಿನ ಮರಗಳು, ಸುತ್ತಮುತ್ತ ಹಚ್ಚ ಹಸಿರಿನಿಂದ ಕಂಗೊಳಿಸುತ್ತದೆ ಅಬ್ಬೂರು ಮಠ. ಬೆಂಗಳೂರಿನಿಂದ ಚನ್ನಪಟ್ಟಣಕ್ಕೆ ತೆರಳಿ ಅಲ್ಲಿಂದ ಬಸ್ ಅಥವಾ ಆಟೋದಲ್ಲಿ ಹೋಗಬಹುದು.

ಅಬ್ಬೂರು ಪ್ರದೇಶವನ್ನು ಬ್ರಹ್ಮಾಂಡಪುರಾಣದ ಶ್ರೀ ಅಪ್ರಮೇಯ ಮಹಾತ್ಮ್ಯೆಯಲ್ಲಿ **"ಜ್ಞಾನಮಂಟಪ"** ವೆಂದು ಕರೆಯಲಾಗಿದೆ. ಜೀವನದಲ್ಲಿ ಮುಂದಿನ ನೆಲೆಗಾಣದೆ ಹತಾಶವಾಗಿರುವ ಹೃದಯಗಳಲ್ಲಿ ಚೈತನ್ಯದ ಛಾಪು ಮೂಡಿಸಿ, ಅಜ್ಞಾನ ಅಂಧಕಾರದಲ್ಲಿ ತೊಳಲುತ್ತಿರುವ ಸಹಸ್ರಾರು ಜೀವಿಗಳಿಗೆ ಆಧ್ಯಾತ್ಮದ ಅರಿವಿತ್ತು ಪೋಷಿಸುವ ಜ್ಞಾನಮಂಟಪ. ಈ ಕ್ಷೇತ್ರ ಕೇವಲ ಜ್ಞಾನ ಮಂಟಪವಷ್ಟೇ ಅಲ್ಲದೆ ಜ್ಞಾನಿವರೇಣ್ಯರಾದ ಪುರುಷೋತ್ತಮತೀರ್ಥರು, ಬ್ರಹ್ಮಣ್ಯತೀರ್ಥರು, ಶ್ರೀಪಾದರಾಜರು. ವ್ಯಾಸರಾಜರು ಮೊದಲಾದ ಯತಿಪುಂಗವರು ಮಂಟಪದ ಸ್ಥಂಭಗಳಂತೆ ನಿಂತು, ಸಾಧನೆ ಮಾಡಿ

ಸಿದ್ಧಿ ಪಡೆದಿದ್ದರಿಂದ ಇದು ಜ್ಞಾನಿಗಳ ಮಂಟಪವಾಗಿಯೂ ಶೋಭಿಸುತ್ತದೆ. ಜ್ಞಾನಾಕಾಂಕ್ಷಿಗಳಾಗಿ ಬರುವವರಿಗೆ ಮಂಟಪದಂತೆ ಆಶ್ರಯವಿತ್ತು ವಿನೀತಗುರುಗಳ ಗುರುತನ್ನು ತೋರಿ, ಜ್ಞಾನಾರ್ಜನೆಗೆಂದು ಮಾರ್ಗದಲ್ಲಿ ಎದುರಾಗುವ ಸಕಲ ಸಂಕಷ್ಟಗಳನ್ನು ನಿವಾರಿಸಿ ಜ್ಞಾನಗಮ್ಯನ ದಿವ್ಯ ದರ್ಶನವೀಯುವ ಜ್ಞಾನಧನವನ್ನು ಗಳಿಸಬೇಕೆಂಬ ಹೆಬ್ಬಯಕೆ ಮೂಡಿಸುವ ಜ್ಞಾನ ದೇಗುಲವೂ ಆಗಿದೆ ಈ ಅಬ್ಬೂರು. ಇಲ್ಲಿಯ ಮಣ್ಣಿನಲ್ಲಿ ಅನರ್ಘ್ಯ ರತ್ನಗಳೇ ತುಂಬಿದೆ ಎಂದರೆ ತಪ್ಪಾಗಲಾರದು ಈ ತಪೋ ಭೂಮಿಯು ಬೂದಿಮುಚ್ಚಿದ ಕೆಂಡದಂತೆಯೂ, ಮೋಡ ಮುಸುಕಿದ ಸೂರ್ಯ ಚಂದ್ರರಂತೆ ಇದ್ದು, ಭಕ್ತಿ ಜ್ಞಾನ ವೈರಾಗ್ಯಗಳ ನೆಲೆವೀಡಾಗಿದೆ.

## ಶ್ರೀನರಸಿಂಹ ಧ್ವಜಸ್ತಂಭದ ಸ್ಥಾಪನೆ

ಒಮ್ಮೆ ಶ್ರೀಬ್ರಹ್ಮಣ್ಯತೀರ್ಥರು ಉತ್ತರಕರ್ನಾಟಕದ ಶಿರಸಿಯ ಬಳಿಯ ಬನವಾಸಿ ಎಂಬ ಗ್ರಾಮವನ್ನು ಸಂದರ್ಶಿಸಿದ್ದರು. ಅಲ್ಲಿ ನರಸಿಂಹಾಚಾರ್ಯ ಮತ್ತು ಕೃಷ್ಣಾಚಾರ್ಯ ಎಂಬ ಬ್ರಾಹ್ಮಣರ ಮನೆಯಲ್ಲಿ ಭಿಕ್ಷೆಯನ್ನು ಸ್ವೀಕರಿಸಿದ್ದರು. ಆಗ ತಮ್ಮೊಂದಿಗೆ ಬರಲು ಇಚ್ಛಿಸಿದ, ಖಾದ್ರಿ ನರಸಿಂಹನ ಆರಾಧಕರಾದ ಶ್ರೀಕೃಷ್ಣಾಚಾರ್ಯರನ್ನು ತಮ್ಮೊಂದಿಗೆ ಕರೆತಂದರು. ಒಮ್ಮೆ ಕೃಷ್ಣಾಚಾರ್ಯರು ಖಾದ್ರಿಯ ನರಸಿಂಹ ಸ್ವಾಮಿಯನ್ನು ಸಂದರ್ಶಿಸಲು ಅಪೇಕ್ಷಿಸಿದರು. ಆದರೆ ವೃದ್ಧಾಪ್ಯದಿಂದ ಚಿಂತಿತರಾದರು. ಅವರ ಭಕ್ತಿಗೆ ಮೆಚ್ಚಿದ ಸ್ವಾಮಿ ನರಸಿಂಹನು ಅವರಿಗೆ ಸ್ವಪ್ನದಲ್ಲಿ ದರ್ಶನವಿತ್ತು, ತಿರುವೇಂಗಳನಾಥ ಬೆಟ್ಟದ ಸ್ಥಳವೊಂದರಲ್ಲಿ ಸನ್ನಿಹಿತನಾಗಿರುವುದನ್ನು ಶ್ರೀಗಳಿಗೆ ತಿಳಿಸಿದರು. ಆಗ ಶ್ರೀಗಳು ಆ ಸ್ವಪ್ನ ನಿರ್ದೇಶಿತ ಸ್ಥಳಕ್ಕೆ ಧಾವಿಸಿದಾಗ, ಧ್ವಜಸ್ತಂಭದ ಮೇಲ್ಭಾಗದ ಚೌಕಾಕಾರದ ಕಲ್ಲೊಂದು ಕಾಣಿಸಿತು. ಶ್ರೀಗಳು ಕಂಬವೊಂದನ್ನು ನಿರ್ಮಿಸಿ ಅದರ ಪೂರ್ವ ಭಾಗದಲ್ಲಿ ಶಂಖಚಕ್ರಗಳನ್ನು, ದಕ್ಷಿಣದಲ್ಲಿ ಆಂಜನೇಯನನ್ನೂ, ಉತ್ತರದಲ್ಲಿ ಗರುಡನನ್ನೂ ಕೆತ್ತಿಸಿ, ಅದರ ಮೇಲೆ ಸ್ವಪ್ನಸೂಚಿತವಾಗಿದ್ದ ಸ್ಥಳದಲ್ಲಿ ದೊರೆತ ಧ್ವಜಸ್ತಂಭವನ್ನು ಕೂರಿಸಿ, ಆ ಬೆಟ್ಟದ ಮೇಲೆಯೇ ಸ್ಥಾಪಿಸಿ, ಪೂಜಾವ್ಯವಸ್ಥೆಯನ್ನು ಏರ್ಪಡಿಸಿದರು. ಅದರ ನಿತ್ಯಪೂಜೆಯನ್ನು ಶ್ರೀಕೃಷ್ಣಾಚಾರ್ಯರಿಗೇ ನೀಡಿದರು. ಅನಂತರ ತನ್ನ ತಪ್ಪಿನ ಅರಿವಾದ, ರಾಜನು ಮರುಗುತ್ತಿರಲು ಸಾರಂಗಧರನು ಮರಳಿದನು. ಅವನಿಂದ ಶ್ರೀಬ್ರಹ್ಮಣ್ಯತೀರ್ಥರ ತಪೋಮಹಿಮೆಯನ್ನು ತಿಳಿದು, ಅವರಿಗೆ ತನ್ನ ಸಮಸ್ತ ರಾಜ್ಯವನ್ನು ಸಮರ್ಪಿಸಲು ಮುಂದಾದಾಗ, ವಿರಕ್ತ ಶಿರೋಮಣಿಗಳಾದ ಶ್ರೀಬ್ರಹ್ಮಣ್ಯತೀರ್ಥರು ಅದಕ್ಕೆ ಒಪ್ಪದೆ ತಾವು ವಾಸವಿದ್ದ ಅಬ್ಬೂರು ಗ್ರಾಮವನ್ನು ಸ್ವೀಕರಿಸಿದರು.

## ಬರಪರಿಹಾರ

ಒಮ್ಮೆ ತಮ್ಮ ಯಾತ್ರೆಯ ವೇಳೆ ಕರ್ನಾಟಕದ ರಾಜಧಾನಿಯಾದ ವಿಜಯನಗರವನ್ನು ತಲುಪಿದಾಗ, ಅಲ್ಲಿನ ದೇವಾಲಯದಲ್ಲಿ ಸ್ವರ್ಣ ಪೀಠದಲ್ಲಿ ಪೂಜೆಯನ್ನು ನೆರವೇರಿಸಿದರು. ಆ ವೇಳೆಗೆ ಅಲ್ಲಿನ ಜನರೆಲ್ಲ ಬಂದು ಈ ಸ್ಥಳದಲ್ಲಿ ಹಲವಾರು ವರುಷಗಳಿಂದ ಅನಾವೃಷ್ಟಿಯಾಗಿದೆ. ನಾವು ಮಾಡಿದ ಜಪಹೋಮಾದಿಗಳೆಲ್ಲ ವ್ಯರ್ಥವಾಗಿದೆ. ಅದರ ಪರಿಹಾರಕ್ಕೋಸ್ಕರ ತಮ್ಮ ಕೃಪಾದೃಷ್ಟಿಯನ್ನು ಶಿಷ್ಯರಿಗೆ ಆದೇಶಿಸಿ, ಪರ್ಜನ್ಯ ಜಪವನ್ನು ಮಾಡಿಸಿದರು. ಜನಗಳಿಗೆ ಅಚ್ಚರಿಯೋ ಅಚ್ಚರಿ ಹನಿ ನೀರೂ ಇಲ್ಲವಾಗಿದ್ದ ಆ ಸ್ಥಳದಲ್ಲಿ ಜಲಧಾರೆ ಸುರಿಯ ತೊಡಗಿತಂತೆ.

## ಬ್ರಹ್ಮಣ್ಯಪುರ

ತನ್ನ ರಾಜ್ಯಕ್ಕೆ ಶ್ರೀಬ್ರಹ್ಮಣ್ಯತೀರ್ಥರಿಂದ ಆದ ಅನುಗ್ರಹದಿಂದ ರೋಮಾಂಚನಗೊಂಡ ಶ್ರೀಕೃಷ್ಣದೇವರಾಯನು, ಚನ್ನಪಟ್ಟಣದ ಬಳಿ ಇರುವ ಫಲಭರಿತವಾದ ಅನೇಕ ಗ್ರಾಮಗಳನ್ನು ಸಮರ್ಪಿಸಿದನು. ಶ್ರೀವ್ಯಾಸರಾಜರಾದರೋ ಆ ಗ್ರಾಮಗಳನ್ನೆಲ್ಲ ತಮ್ಮ ಶಿಷ್ಯವರ್ಗಕ್ಕೆ ಸೇರಿದ 32 ಜನ ಬ್ರಾಹ್ಮಣರಿಗೆ ದಾನ ಮಾಡಿದರು. ಆ ಸ್ಥಳವೇ **'ಬ್ರಹ್ಮಣ್ಯಪುರ'** ಈಗ ಆ ಜಾಗವನ್ನು **'ಬ್ರಹ್ಮಣಿಪುರ'** ಎಂದು ಕರೆಯುತ್ತಿದ್ದು, ಚನ್ನಪಟ್ಟಣದಿಂದ ಬೆಂಗಳೂರಿಗೆ ಬರುವ ಮಾರ್ಗದಲ್ಲಿ ಚನ್ನಪಟ್ಟಣ ಬಸ್ ನಿಲ್ದಾಣದಿಂದ 2 ಕಿ.ಮೀ. ದೂರದ ಮುಖ್ಯ ರಸ್ತೆಯಿಂದ ಬಲ ಭಾಗದಲ್ಲಿದೆ.

## ವಿಠ್ಠಲ ಬೆಟ್ಟ

ಒಮ್ಮೆ ಭಗವಂತನು ಶ್ರೀಗಳಿಗೆ ಸ್ವಪ್ನದಲ್ಲಿ ಬಂದು ಅಬ್ಬೂರಿನ ಬಳಿಯಿರುವ ಬೆಟ್ಟವೊಂದರಲ್ಲಿ ಭೂಮಿಯೊಳಗೆ ಅಡಗಿರುವ ಮೂರ್ತಿಯನ್ನು ತೆಗೆದು ಪೂಜಿಸಬೇಕೆಂದು ಆಜ್ಞಾಪಿಸಿದನು. ಅದರಂತೆ ಹುಡುಕಿದ ಅವರಿಗೆ ಸುಂದರ ವಿಠಲಪ್ರತಿಮೆಯೂ ಲಭಿಸಿತು. ಅಂದಿನಿಂದ ಆ ಬೆಟ್ಟಕ್ಕೆ **'ವಿಠ್ಠಲಬೆಟ್ಟ'** ಎಂಬ ಹೆಸರಾಯಿತು.

## ಪ್ರಾಣವಿಗ್ರಹ ಪ್ರತಿಷ್ಠಾಪನೆ

ಅಬ್ಬೂರು ಸನಿಹದಲ್ಲೆ ಬ್ರಹ್ಮಣ್ಯಪುರವೆಂಬಲ್ಲಿ ಬ್ರಹ್ಮಣ್ಯ ತೀರ್ಥರು, ಶ್ರೀಪಾದರಾಜರು ಮತ್ತು ಶ್ರೀವ್ಯಾಸರಾಜರು ಸೇರಿ ಒಟ್ಟಾಗಿ ಪ್ರತಿಷ್ಠಾಪಿಸಿರುವ ಜಾಗೃತ ಸನ್ನಿಧಾನವುಳ್ಳ ಪ್ರಾಣಪತಿ (ಹನುಮಂತ) ದೇವಾಲಯವಿದೆ. ಅತ್ಯಂತ ಮನೋಹರವಾಗಿರುವ ಈ ವೀರಾಂಜನೇಯನ ಶಿರೋಭಾಗದಲ್ಲಿ ಸೀತಾಲಕ್ಷ್ಮಣ ಸಮೇತ ಶ್ರೀರಾಮಚಂದ್ರನು ಶಂಖಚಕ್ರಧಾರಿಯಾಗಿ ಕಿರೀಟದ ಮೇಲಿನ ಗೂಡಿನಲ್ಲಿ ಬ್ರಹ್ಮಣ್ಯತೀರ್ಥರಿಂದಲೇ ಪೂಜಿತ ನರಸಿಂಹ ಸಾಲಿಗ್ರಾಮವಿದೆ. ಮುಂದೆ ಶ್ರೀವ್ಯಾಸರಾಜರು ದೇಶಾದ್ಯಂತ 732 ಪ್ರಾಣದೇವರ ಪ್ರತಿಷ್ಠೆಗೆ ಇದು ಸ್ಫೂರ್ತಿಯುತ ಘಟನೆಯಾಗಿ ಪರಿಣಮಿಸಿತು.

## ಶ್ರೀಬ್ರಹ್ಮಣ್ಯತೀರ್ಥರ ಮಹಿಮೆ

ಬ್ರಹ್ಮಣ್ಯತೀರ್ಥರು ದುಃಖ, ಹತಾಶೆ, ನೋವು, ಸಮಸ್ಯೆಗಳಿಗೆ ಸಿಲುಕಿರುವವರಿಗೆ ವರಪ್ರದಾಯಕರೆಂದು ಪ್ರತೀತಿ. ಬ್ರಹ್ಮಣ್ಯತೀರ್ಥರು ಬಾಲ್ಯದಿಂದಲೇ ಆಧ್ಯಾತ್ಮಿಕ ವಿಷಯಗಳಲ್ಲಿ ಆಸಕ್ತಿ ಹೊಂದಿದವರು. ಅವರ ಹಿನ್ನೆಲೆಯಲ್ಲಿಯೂ ಅದರ ಪ್ರಭಾವವಿತ್ತು, ಬ್ರಹ್ಮಣ್ಯತೀರ್ಥರು ಸೂರ್ಯಾಂಶ ಸಂಭೂತರೆನ್ನಲಾಗುತ್ತದೆ. ಜ್ಞಾನಮಂಟಪವೆಂದು ಪ್ರಸಿದ್ಧವಾದ ಅಬ್ಬೂರಿನಲ್ಲಿ ಹಿಂದೆ ರಾಮಾಚಾರ್ಯರೆಂಬುವವರಿದ್ದರು. ನರಸಿಂಹ ಉಪಾಸನೆಯ ಫಲವಾಗಿ ಬಹು ದಿನದ ನಂತರ ಇವರು

ಪಡೆದ ಪುತ್ರನೇ ಮುಂದೆ ಬ್ರಹ್ಮಣ್ಯತೀರ್ಥರಾದರು. ನರಸಿಂಹೋಪಾಸನೆಯಿಂದ ಜನಿಸಿದ ಕಾರಣ ನರಸಿಂಹ ನಾಮಾಂಕಿತನಾದ ಇವರು ಬಾಲ್ಯದಲ್ಲೇ ಬಲು ಚುರುಕು. ಗುರು ಪುರುಷೋತ್ತಮತೀರ್ಥರ ಬಳಿ ವಿದ್ಯಾಭ್ಯಾಸ ಮಾಡಿದ ನರಸಿಂಹ ಮುಂದೆ ಇದೇ ಗುರುಗಳಿಂದ ಯತ್ಯಾಶ್ರಮ ದೀಕ್ಷೆ ಪಡೆದರು. ಸೂರ್ಯನಂತೆ ತೇಜೋವಂತನಾಗಿದ್ದ ನರಸಿಂಹನಿಗೆ ಬ್ರಹ್ಮಣ್ಯತೀರ್ಥ ಎಂದು ನಾಮಕರಣ ಮಾಡಲಾಯಿತು.

ಗುರುಗಳ ಕಾಲಾನಂತರ ಸಂಸ್ಥಾನದ ಜವಾಬ್ದಾರಿ ಹೊತ್ತ ಶ್ರೀಗಳು ಯತ್ಯಾಶ್ರಮ ಧರ್ಮವನ್ನು ಚಾಚೂ ತಪ್ಪದೆ ಪಾಲಿಸಿದರು. ಮಧ್ವಶಾಸ್ತ್ರದ ಮುಕುಟಪ್ರಾಯರಾಗಿದ್ದ ಬ್ರಹ್ಮಣ್ಯತೀರ್ಥರು ಅನೇಕ ಪಂಡಿತರನ್ನು ವಾದದಲ್ಲಿ ಸೋಲಿಸಿದ್ದರು. **"ವಿಷ್ಣು ಸರ್ವೋತ್ತಮತ್ವಂ ಚ ಸರ್ವದಾ ಪ್ರತಿಪಾದಯಾ"** ಎಂಬ ಮಧ್ವಾಚಾರ್ಯರ ಆದೇಶದಂತೆ ಶ್ರೀಹರಿಯ ಪಾರಮ್ಯವನ್ನು ಎತ್ತಿ ಹಿಡಿದವರು ಬ್ರಹ್ಮಣ್ಯತೀರ್ಥರು.

ಬ್ರಹ್ಮಣ್ಯತೀರ್ಥರ ಬಗೆಗೆ ಹಲವು ಪ್ರತೀತಿಗಳಿವೆ. ಅವರ ತಪಃಶಕ್ತಿ ಅದ್ಭುತವಾದದ್ದು. ಯತಿಸಾರ್ವಭೌಮರಾದ ವ್ಯಾಸರಾಜರ ಪ್ರಕಾರ ಬ್ರಹ್ಮಣ್ಯತೀರ್ಥರು ಭಕ್ತರ ಅಭೀಷ್ಟಗಳನ್ನು ಪೂರೈಸುವ ಚಿಂತಾಮಣಿ, ಅನುಗ್ರಹದ ಮಂದಹಾಸ ಬೀರುವ ವಂದನೀಯರು. ಇವರ ಬೃಂದಾವನದ ಸೇವೆಯಿಂದ ವಿದ್ಯಾಕಾಂಕ್ಷಿಗಳು ವಿದ್ಯಾಸುಖ ಪಡೆಯುವುದು ಖಚಿತ ಎಂಬುದು ಭಕ್ತರ ನಂಬಿಕೆ.

ಮಧ್ವಾಚಾರ್ಯರ ಮಹಾಸಂಸ್ಥಾನದ ಪೂರ್ವಾದಿಮಠದ ಪೀಳಿಗೆಯಲ್ಲಿ ಬಂದು ಆಚಾರ್ಯರ ಕರಾರ್ಜಿತವಾದ ತಮ್ಮ ಸಂಸ್ಥಾನದ ಮೂರ್ತಿಗಳನ್ನು ನಿರಂತರ ಪೂಜಿಸಿ ಬ್ರಹ್ಮಣ್ಯತೀರ್ಥರು ಕ್ರಿ.ಶ. 1467, ಸರ್ವಜಿತು ಸಂವತ್ಸರದ ವೈಶಾಖಬಹುಳ ಏಕಾದಶಿಯಂದು ಬೃಂದಾವನಸ್ಥರಾದರು. ಇವರ ಬೃಂದಾವನದ ದರ್ಶನದಿಂದ ವ್ಯಕ್ತಿಯ ಸಮಸ್ತ ಪಾಪಗಳು ನಿಶ್ಶೇಷವಾಗುವುದರಲ್ಲಿ ಸಂಶಯವಿಲ್ಲ ಎಂಬುದು ಭಕ್ತರ ವಿಶ್ವಾಸ, ಶ್ರೀಹರಿಯ ಮೋಕ್ಷಪಥ ಪಡೆಯುವುದಕ್ಕಾಗಿ ಗುರುಗಳ ಬೃಂದಾವನದ ಮುಂದೆ ಸಾಲುದೀಪಗಳನ್ನು ಹಚ್ಚುವವರು ಅನೇಕರು.

**"ಆರೋಗ್ಯಂ ಭಾಸ್ಕರಾದಿಚ್ಛೇತ್"** ಎಂಬಂತೆ ಬ್ರಹ್ಮಣ್ಯತೀರ್ಥರನ್ನು ಸೇವಿಸುವವರು ಎಂತಹ ಕಠಿಣತರ ರೋಗಗಳಿಂದ ಬಳಲುತ್ತಿದ್ದರೂ ಸಹ ಅವರ ಕೃಪಾಶೀರ್ವಾದಿಂದ ರೋಗಮುಕ್ತರಾಗಿ ಆರೋಗ್ಯ ಕಾಂತಿಯನ್ನು ಪಡೆದುಕೊಳ್ಳುತ್ತಿರುವ ನಿದರ್ಶನಗಳು ಸಾಕಷ್ಟಿವೆ. ಗುರುಗಳ ಬೃಂದಾವನದ ಮೇಲೆ ಭಾವಣಿಯಲ್ಲಿ ವಿಷ್ಣುಸಾನ್ನಿಧ್ಯವುಳ್ಳ ತುಳಸಿ ಗಿಡವಿದೆ. ಸೂರ್ಯಾಂಶರಾದುದರಿಂದ ಸೂರ್ಯನ ಕಿರಣಗಳು ಬೃಂದಾವನದ ಮೇಲೆ ನೇರವಾಗಿ ಬೀಳುತ್ತದೆ. ಸುಮಾರು ಆರು ದಶಕಗಳ ಐತಿಹ್ಯವಿರುವ ಈ ದಿವ್ಯ ಬೃಂದಾವನ ಸ್ವಲ್ಪ ವಾಲಿದಂತಿದ್ದರೂ ಈಗಲೂ ಸ್ಥಿರದೃಢವಾಗಿ ನಿಂತಿದೆ. ದರ್ಶನ ಮಾತ್ರದಿಂದಲೇ ಯಾವುದೋ ಉತ್ಸಾಹದ ಚಿಲುಮೆಯಲ್ಲಿ ಮಿಂದ ಸಂಭ್ರಮದೊಂದಿಗೆ ಭಕ್ತಿಯ ತರಂಗಗಳು ಭಾವುಕರ ಎದೆಯನ್ನು ಹಿತವಾಗಿ ಅಪ್ಪಿಹಿಡಿಯುತ್ತದೆ.

ಶ್ರೀಮಧ್ವಾಚಾರ್ಯರ ಅನುಯಾಯಿಗಳಾದ ರಾಜೇಂದ್ರತೀರ್ಥರ ಪೂರ್ವಾದಿ ಮಠದ ಪರಂಪರೆಯಲ್ಲಿ ಬಂದ ಶ್ರೀಪುರುಷೋತ್ತಮ ತೀರ್ಥರು ಅಬ್ಬೂರಿನಲ್ಲಿ ಬಹುಕಾಲ ವಾಸಿಸಿದ ತಪೋ ನಿಧಿಗಳು ಆಚಾರ್ಯರ ನೇರ ಶಿಷ್ಯ ಶ್ರೀ ಅಕ್ಷೋಭ್ಯತೀರ್ಥರ ಕರಕಮಲ ಸಂಜಾತರಾದ ಟೀಕಾಚಾರ್ಯರೆನಿಸಿದ ಶ್ರೀಜಯತೀರ್ಥರಿಂದ ಪ್ರಯಾಗದಂತಹ ಪುಣ್ಯಕ್ಷೇತ್ರದಲ್ಲಿ ಟೀಕಾರಾಯರಿಂದ ಸನ್ಯಾಸ ದೀಕ್ಷೆಯನ್ನು ಪಡೆದ ವಿದ್ಯಾಧಿರಾಜರಿಗೆ ರಾಜೇಂದ್ರತೀರ್ಥ ಮತ್ತು ಕವೀಂದ್ರತೀರ್ಥರೆಂಬ ಇಬ್ಬರು ಶಿಷ್ಯರು ಗುರುಗಳ ಆಜ್ಞೆಯಂತೆ ಉತ್ತರ ಭಾರತದಲ್ಲಿ ಅದರಲ್ಲೂ ತಾರ್ಕಿಕರಾದ ತವರೂರುರೆನಿಸಿದ ಬಂಗಾಳದಲ್ಲಿ ನೆಲೆಸಿ ದ್ವೈತ ದುಂದುಭಿಯನ್ನು ಸಮರ್ಥವಾಗಿ ಮೊಳಗಿಸಿದ ಹಿರಿಮೆ ರಾಜೇಂದ್ರತೀರ್ಥರದು. ಅವರ ಪ್ರಿಯ ಶಿಷ್ಯನಾಗಿ ವೇದಾಂತ ಸಾಮ್ರಾಜ್ಯವನ್ನು ಪಾಲಿಸಿದ ಮಹಾನುಭಾವರೇ ಶ್ರೀಪುರುಷೋತ್ತಮತೀರ್ಥರು.

ಪಾಂಡಿತ್ಯದಲ್ಲಿ, ಹರಿಭಕ್ತಿ, ತಪಶ್ಶಕ್ತಿಯಲ್ಲಿ ಪುರುಷೋತ್ತಮ ತೀರ್ಥರಿಗೆ ಸಾಟಿ ಯಾರು ಇರಲಿಲ್ಲ. ಬ್ರಹ್ಮಣ್ಯತೀರ್ಥರು ಪುರುಷೋತ್ತಮ ತೀರ್ಥರ ಶಿಷ್ಯ ಶ್ರೇಷ್ಠರು ಮಠದ ಅಭಿಮುಖವಾಗಿ ಇರುವ ಬೆಟ್ಟದಲ್ಲಿ ಪುರುಷೋತ್ತಮ ತೀರ್ಥರು ಬದುಕಿ, ಸಾಧನೆಗೈದು, ಸಿದ್ಧಿಯ ಬೆಳಕನ್ನು ಕಂಡುಕೊಂಡ ಗುಹೆಯಿದೆ, ಪುರುಷೋತ್ತಮ ತೀರ್ಥರಿಗೆ ಬೃಂದಾವನವಿಲ್ಲ, ಬ್ರಹ್ಮಣ್ಯತೀರ್ಥರ ಬೃಂದಾವನಕ್ಕೆ ಹಸ್ತೋದಕ, ಮಂಗಳಾರತಿ ಮಾಡುವ ಮೊದಲು ಪುರುಷೋತ್ತಮ ತೀರ್ಥರ ಸನ್ನಿಧಾನಯುಕ್ತವಾದ ಗುಹಾದ್ವಾರವಿರುವ ಎದುರು ಬೆಟ್ಟಕ್ಕೆ ಹಸ್ತೋದಕ, ಮಂಗಳಾರತಿಯನ್ನು ಬ್ರಹ್ಮಣ್ಯತೀರ್ಥರ ಸನ್ನಿಧಾನದಿಂದಲೇ ಸಲ್ಲಿಸುವ ಸಂಪ್ರದಾಯ ಈ ಹೊತ್ತಿಗೂ ಬೆಳೆದುಕೊಂಡು ಬಂದಿದೆ.

ಗುಹೆಯ ಬಳಿ ಸಂಚರಿಸುವ ಎಷ್ಟೋ ಮಂದಿ ಗೋಪಾಲಕರು ವೈಷ್ಣವ ಚಿಹ್ನೆಧರಿಸಿ, ಕಾಷಾಯ ವಸ್ತ್ರಗಳಿಂದ ಕಂಗೊಳಿಸುವ ವೃದ್ಧರನ್ನು ಕಂಡಿದ್ದಾಗಿ ಹೇಳುವುದುಂಟು **"ಪುಣ್ಯ ಫಲಿಸಿದವರ ಕಣ್ಣಿಗೆ ಪುರುಷೋತ್ತಮರು ಕಾಣಿಸುವರು"** ಎಂಬುದು ಒಂದು ನಾಣ್ನುಡಿಯಾಗಿಬಿಟ್ಟಿದೆ.

ಶ್ರೀ ವ್ಯಾಸರಾಜರ ನಂತರ ಶ್ರೀಧರ ತೀರ್ಥರ ಪರಂಪರೆಯಲ್ಲಿ ಬಂದ ಮಠವೇ ಇಂದಿನ ಕುಂದಾಪುರ ವ್ಯಾಸರಾಜ ಮಠ ಈ ಮಠಕ್ಕೆ ಅಬ್ಬೂರು ಮಠವೆಂದೂ ಕರೆಯುವ ವಾಡಿಕೆ ಇದೆ.

ಈಗ ವಿರಾಜಮಾನರಾಗಿರುವ ಶ್ರೀಲಕ್ಷ್ಮೀಂದ್ರತೀರ್ಥ ಶ್ರೀಪಾದರು ಅಬ್ಬೂರು ಕ್ಷೇತ್ರ ಅಭಿವೃದ್ಧಿಗೊಳಿಸಿ ವಿಶಾಲವಾದ ಪೂಜಾ ಮಂದಿರ, ಪಾಠಶಾಲೆ ಇತ್ಯಾದಿಗಳನ್ನು ನಿರ್ಮಿಸಿ ಯಾತ್ರಾರ್ಥಿಗಳಿಗೆ ಸಕಲ ಸೌಕರ್ಯಗಳನ್ನು ಕಲ್ಪಿಸಿರುತ್ತಾರೆ. ಪ್ರತಿ ವರ್ಷ ವೈಶಾಖ ಬಹುಳ ದಶಮಿ-ದ್ವಾದಶಿ ಪರ್ಯಂತ ಬ್ರಹ್ಮಣ್ಯತೀರ್ಥ ಆರಾಧನೆ ಭಕ್ತಿ ಶ್ರದ್ಧೆಗಳಿಂದ ನೆರವೇರಿಸಲ್ಪಡುತ್ತದೆ.

**(ವಿವಿಧ ಮೂಲಗಳಿಂದ)**



# ನೀರಿನಲ್ಲಿರುವ ನರಸಿಂಹ....

# ಶ್ರೀ ಝರಣಿ ನರಸಿಂಹ ಸ್ವಾಮಿ ಕ್ಷೇತ್ರ

- ಶ್ರೀಮತಿ. ಮಾಲಾಪ್ರಸಾದ್
81053 65307

ದೇಗುಲಗಳ ಬೀಡಾದ ಕರ್ನಾಟಕದಲ್ಲಿ ಒಂದೊಂದು ದೇಗುಲಗಳು ಒಂದೊಂದು ಐತಿಹಾಸಿಕ ಹಿನ್ನೆಲೆಯಿದೆ, ವಿಶೇಷತೆಯಿಂದ ಪ್ರಸಿದ್ಧಿಯನ್ನು ಪಡೆದಿದೆ. ಅಂತಹ ಒಂದು ದೇವಾಲಯವೇ ಝರಣಿ ನರಸಿಂಹಸ್ವಾಮಿ ಕ್ಷೇತ್ರ. ಈ ಗುಹಾಂತರ ದೇವಾಲಯ ಸ್ಮಾರಕಗಳ ನಗರವೆಂದು ಪ್ರಸಿದ್ಧಿಯಾದ ಬೀದರ್‌ನ ಮಂಗಳ ಪೇಟೆ ಯಲ್ಲಿದೆ. ಶ್ರೀ ಝರಣಿ ನರಸಿಂಹಸ್ವಾಮಿ ದೇವಾಲಯವು ಗುಹಾಂತರ ದೇವಾಲಯವಾಗಿದ್ದು, ಎದೆ ಮಟ್ಟದ ನೀರಿನಲ್ಲಿ ನಡೆದು ಕೊಂಡು ಹೋಗಬೇಕು. ವಿಷ್ಣುವಿನ ದಶಾವತಾರಗಳಲ್ಲಿನ ಒಂದು ಅವತಾರವಾದ ಉಗ್ರನರಸಿಂಹನು ಇಲ್ಲಿ ನೆಲೆಸಿದ್ದಾನೆ. ಸುಮಾರು ಒಂದು ಕಿ.ಮೀ.ವರೆಗೂ ಗುಹೆಯೊಳಗೆ ನೀರಿನಲ್ಲಿಯೇ ನಡೆದುಕೊಂಡು ಹೋಗಿ ಉದ್ಭವ ಮೂರ್ತಿಯಾದ ನರಸಿಂಹನ ದರ್ಶನ ಪಡೆಯಬೇಕು. ಸದಾ ನರಸಿಂಹಸ್ವಾಮಿಯ ಪಾದಕಮಲಗಳಿಂದ ನೀರು ಪ್ರವಹಿಸುತ್ತಿರುವುದರಿಂದ ಈ ಕ್ಷೇತ್ರವನ್ನು ಜಲ ನರಸಿಂಹಸ್ವಾಮಿ ದೇವಸ್ಥಾನ ಎಂದೂ ಕರೆಯುತ್ತಾರೆ. ದೇಶದಲ್ಲೇ ವಿಶಿಷ್ಟವಾದ ಈ ಕ್ಷೇತ್ರದಲ್ಲಿ ವರ್ಷದ 365 ದಿನಗಳು ಸಹ ನೀರು ಪ್ರವಹಿಸುತ್ತಿರುತ್ತದೆ. ದೇವಾಲಯದ ಸುತ್ತಲೂ ಹಚ್ಚ ಹಸಿರಿನ ಪರ್ವತಗಳು, ಪ್ರಶಾಂತವಾದ ವಾತಾವರಣ ಭಕ್ತರನ್ನು ಕೈ ಬೀಸಿ ಕರೆಯುತ್ತದೆ. ಪುರಾಣಗಳ ಪ್ರಕಾರ ಮಹಾಶಿವನು ಈ ಗುಹೆಯೊಳಗೆ ತಪಸ್ಸು ಮಾಡುವಾಗ ಜಲಾಸುರ ಎಂಬ ರಾಕ್ಷಸನು ತಪಸ್ಸನ್ನು ಭಗ್ನಗೊಳಿಸಲು ಮುಂದಾಗುವನು. ಆಗ ಶ್ರೀಲಕ್ಷ್ಮೀನರಸಿಂಹನು ಜಲಾಸುರನನ್ನು ಸಂಹರಿಸುವನು. ಜಲಾಸುರನ ಕೋರಿಕೆಯಂತೆ ತನ್ನ ಪದ್ಮ ಪಾದಕಮಲಗಳಲ್ಲಿ ಜಲಾಸುರನನ್ನು ಜಲದಂತೆ ಹರಿಯಲು ಬಿಡುತ್ತಾನೆ ಆದರಿಂದ ಈ ಕ್ಷೇತ್ರಕ್ಕೆ ಜಲ ನರಸಿಂಹಸ್ವಾಮಿ ಎಂದು ಹೆಸರು ಬಂದಿದೆ. ನರಸಿಂಹಸ್ವಾಮಿಯ ಮೂರ್ತಿಯ ಪಕ್ಕದಲ್ಲೇ ಶಿವಲಿಂಗವೂ ಇದೆ. ಹೀಗೆ ಹರಿಹರರು ಇಬ್ಬರೂ ಈ ದೇವಸ್ಥಾನದಲ್ಲಿ ಪೂಜಿಸಲ್ಪಡುವ ಪುಣ್ಯ ಕ್ಷೇತ್ರವಿದು. ಗುಹೆಯ ಕೊನೆಯಲ್ಲಿ ಗೋಡೆಯ ಮೇಲೆ ಕಲ್ಲಿನಿಂದ ಕೆತ್ತಿದ್ದ ನರಸಿಂಹನ ರೂಪವಿದೆ. ಈ ಗುಹೆಯಲ್ಲಿನ ನೀರು ಎಲ್ಲಿಂದ ಯಾವಾಗ ಹೇಗೆ ಬರುತ್ತದೆ ಎಂದು ಯಾರಿಂದಲೂ ಕಂಡು ಹಿಡಿಯಲಾಗಿಲ್ಲ.ಇಲ್ಲಿ ಹರಿಯುವ ನೀರಿನಲ್ಲಿ ಸಲ್ಫರ್ ಇದ್ದು, ಇದು ಚರ್ಮರೋಗಗಳನ್ನು ಗುಣಪಡಿಸುವ ಗುಣವನ್ನು ಹೊಂದಿದೆ. ಭಕ್ತಾದಿಗಳು ಸಂತಾನಪ್ರಾಪ್ತಿಗಾಗಿಯೂ ದೇವಸ್ಥಾನಕ್ಕೆ ಆಗಮಿಸುತ್ತಾರೆ.

# ನಾರದ

– ಡಾ॥ ಸಿ. ಎಸ್. ಊರ್ಮಿಳಾ



ನಾರದ ಎಂಬ ಹೆಸರನ್ನು ಹೇಳಿದರೆ ಕೇಳಿದರೇನೆ ಸಾಕು ನಮಗೆ ತಕ್ಷಣ ನೆನಪಿಗೆ ಬರುವುದು ತ್ರಿಲೋಕ ಸಂಚಾರಿ, ಕಲಹಪ್ರಿಯ ತುಂಬುರು ವಾದ್ಯ ಹಿಡಿದವರು, **'ನಾರಾಯಣ, ನಾರಾಯಣ'**, ಎಂದು ಹೇಳಿಕೊಂಡು ಬಂದರೇನೇ ಸಾಕು ದೇವಲೋಕದಲ್ಲಿ ಆಗಲಿ, ಮನುಷ್ಯ ಲೋಕದಲ್ಲಾಗಲಿ, ಮತ್ತಿತರ ಸಮಸ್ತ ಲೋಕಗಳಲ್ಲಾಗಲಿ ನಾರದ ಬಂದರೇನೆ ಎಲ್ಲರಿಗೂ ಗಡಗಡ ಆರಂಭಿಸುತ್ತದೆ. ಆದರೆ ನಾರದರೆಂದರೆ ನಮ್ಮ ಮೈನಡುಗಬೇಕಾಗಿಲ್ಲ. ಅವರು ಯಾವುದೋ ಲೋಕಹಿತಾರ್ಥಕ್ಕಾಗಿಯೇ ತ್ರಿಲೋಕದಲ್ಲಿ ಸಂಚರಿಸುತ್ತಾರೆ ಎಂಬ ಸದ್ಭಾವನೆ ನಮ್ಮಲ್ಲಿ ಇರಲಿ.

ನಾರದರು ಸ್ವಾಯಂಭವ ಮನ್ವಂತರದಲ್ಲಿ ಬ್ರಹ್ಮದೇವರ ಹತ್ತು ಮಾನಸ ಪುತ್ರರಲ್ಲಿ ಕಡೆಯವರಾಗಿ ಬ್ರಹ್ಮದೇವರ ತೊಡೆಯಿಂದ ಜನಿಸಿದವರು. ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ಭೃಗು, ವಸಿಷ್ಠ, ದಕ್ಷ, ನಾರದ, ಇವರೆಲ್ಲಾ ಬ್ರಹ್ಮನ ಮಾನಸಪುತ್ರರು.

**ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ**
**ಭೃಗುರ್ವಸಿಷ್ಠೋ ದಕ್ಷಶ್ಚ ದಶಮಸ್ತ್ರನಾರದಃ**

ಎಂಬುದಾಗಿ ಶ್ರೀಮದ್ಭಾಗವತದ ತೃತೀಯ ಸ್ಕಂಧ 13 ನೇ ಅಧ್ಯಾಯದ 22 ನೇ ಶ್ಲೋಕವು ತಿಳಿಸುತ್ತದೆ.

ನಾರದರಿಗೆ ಸನತ್ಕುಮಾರರು ಹೇಳಿದ್ದು ನಾರದ ಪುರಾಣವೆಂದೇ ಪ್ರಸಿದ್ಧವಾಗಿದೆ. ನಾರದರು ಮಾಡಿದ ಜಗನ್ಮಂಗಳ ಕಾರ್ಯಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ತಿಳಿದುಕೊಳ್ಳೋಣ.

1.ಪರ್ವತರಾಜನ ಪುತ್ರಿಯಾದ ಪಾರ್ವತಿಗೂ, ಶಿವನಿಗೂ ವಿವಾಹ ಮಾಡಿಸಿದ್ದಕ್ಕೆ ನಾರದರೇ ಕಾರಣಕರ್ತರು ತನ್ಮೂಲಕ ತಾರಕಾಸುರಸಂಹಾರ ಷಣ್ಮುಖನಿಂದ ಆದದ್ದು.

2. ಹರಿಯ ಪಾರಮ್ಯವನ್ನು ಸಾರಲು ಸದಾಕಾಲ ಸಂಚರಿಸುತ್ತಾ, ಹರಿದ್ವೇಷಿಗಳನ್ನು ನಾಶಗೊಳಿಸಲು ಬೇಕಾದ ಕಾರ್ಯವನ್ನು ಮಾಡುತ್ತಿದ್ದವರು ನಾರದರು,

3. ಶ್ರೀಮದ್ರಾಮಾಯಣ ರಚನೆಯಾಗಲು ರತ್ನಾಕರನೆಂಬ ದರೋಡಕೋರನಿಗೆ ರಾಮ ಮಂತ್ರವನ್ನು ಉಪದೇಶಿಸಿ ವಾಲ್ಮೀಕಿಯನ್ನಾಗಿ ಪರಿವರ್ತಿಸಿದವರು ನಾರದರು.

4. ಮಹಾಭಾರತ ಕಥೆಯನ್ನು ದೇವಲೋಕದಲ್ಲಿ ಪ್ರಚಾರ ಮಾಡಿದವರು ನಾರದರು.

5. ದಕ್ಷನ ಮಕ್ಕಳೆನಿಸಿದ 10000 ಜನ ಹರ್ಯಶ್ವರಿಗೂ 1000 ಜನ ಶಬಲಾಶ್ವರಿಗೂ ಜ್ಞಾನೋಪದೇಶ ಮಾಡಿ ಸೃಷ್ಟಿಕಾರ್ಯಕ್ಕೆ ತೊಡಗಬೇಡಿ ಎಂದು ಹೇಳಿದವರೇ ನಾರದರು.

6. ಅಗ್ನಿಪುತ್ರಿಯೆನಿಸಿದ ದ್ರೌಪದೀ ದೇವಿಯನ್ನು ಪಾಂಡವರೈವರು ಲಗ್ನವಾದರೂ, ವಾರಣಾವರ್ತದಲ್ಲಿ ಪಾಂಡವರು ನೆಲೆಸಿರುವಾಗ ನಾರದರು ಒಂದು ಸುಂದೋಪಸುಂದರ ಕಥೆಯನ್ನುರುಹಿ ಒಂದೊಂದು ವರ್ಷದ ಪ್ರಕಾರ ದ್ರೌಪದಿಯ ಸಂಗಡ ಸಂಸಾರ ನಡೆಸುವಂತೆ ನಿಯಮ ಮಾಡಿ ತಪ್ಪಿದಲ್ಲಿ ಒಂದು ವರ್ಷಕಾಲ ತೀರ್ಥಯಾತ್ರೆ ಮಾಡುವಂತೆ ಪಾಂಡವರಿಂದ ಮಾಡಿಸಿದುದು ನಾರದರು.

7. ಪಾಂಡವರು ವನವಾಸ ಕಾಲದಲ್ಲಿದ್ದಾಗ ಅವರ ಕ್ಷೇಮ ಸಮಾಚಾರವನ್ನು ಆಗಿಂದಾಗ್ಗೆ ನಾರದರು ಯಾದವರಿಗೂ ತಿಳಿಸುತ್ತಿದ್ದರು. ಅಂತೆಯೇ ಕೌರವರಿಗೂ ಅರುಹುತ್ತಿದ್ದರು. ಇದಕ್ಕೆ ಪ್ರಮುಖ ಕಾರಣವೇನೆಂದರೆ ದುರ್ಯೋಧನ ಪಾಂಡವರು ಸುಖವಾಗಿದ್ದಾರೆಂದು ಅಸೂಯೆಗೊಂಡು ದ್ವೇಷ ಮಾಡಿ ದುಷ್ಕೃತ್ಯಗಳಿಂದ ಪಾಪದ ಕೊಡವು ತುಂಬಿಸಿಕೊಳ್ಳಲೆಂದು ತಿಳಿಸುತ್ತಿದ್ದರು.

8. ಒಂದು ರೋಚಕವಾದ ಸಂಗತಿಯೆಂದರೆ ಭಗವಾನ್ ಶ್ರೀ ಕೃಷ್ಣ ದೇವಕಿ, ವಸುದೇವರ ಅಷ್ಟಮ ಗರ್ಭದಲ್ಲಿ ಹುಟ್ಟುವ ಮಗು ಕಂಸನ ಹತ್ಯೆಗೆ ಕಾರಣವಾಗುತ್ತದೆ ಎಂದು ಆಕಾಶವಾಣಿಯಾಯಿತು. ಆ ಕ್ಷಣಕ್ಕೆ ಕೋಪಗೊಂಡರೂ ದೇವಕಿಯಲ್ಲಿ ಜನಿಸಿದ ಪ್ರಥಮ ಶಿಶುವನ್ನು ಕೊಲ್ಲದೆ ಹಾಗೆಯೇ ಕಳುಹಿಸಿದ. ಈ ಸಂದರ್ಭದಲ್ಲಿ ದೇವಕಾರ್ಯವಾಗಬೇಕೆಂದು ತನ್ನ ರಾಜ್ಯದಲ್ಲಿ ಹುಟ್ಟಿದ ಮಕ್ಕಳೆಲ್ಲರನ್ನೂ ಕೊಲ್ಲಬೇಕೆಂದು ನಾರದರು ಹೇಳಿದರು. ಕಾರಣ-ಕಂಸನ ಪಾಪದ ಕೊಡ ತುಂಬ ಬೇಕಿತ್ತು. ಅದಕ್ಕಾಗಿ ಹಾದಿ ಮಾಡಿಕೊಟ್ಟವರು ನಾರದರು.



9. ಐದು ವರುಷದ ಬಾಲಕ ಧ್ರುವನಿಗೆ ಉಪದೇಶಿಸಿದವರು ನಾರದರು.

10. ಪ್ರಹ್ಲಾದನ ತಾಯಿಯ ಗರ್ಭದಲ್ಲಿರುವಾಗಲೇ ತಮ್ಮ ಆಶ್ರಮಕ್ಕೆ ಕಯಾಧುವನ್ನು (ಹಿರಣ್ಯಕಶಿಪುವಿನ ಪತ್ನಿ) ಕರೆತಂದು ಹರಿಸರ್ವೋತ್ತಮತ್ವದ ವಿಚಾರವನ್ನು ಉಪದೇಶಿಸಿದವರು ನಾರದರು.

ಹೀಗೆ ಹತ್ತು ಹಲವು ಸಂಗತಿಗಳಿಗೆ ಕಾರಣ ಕರ್ತರಾದವರು ನಾರದರು ಎಂದರೆ ತಪ್ಪಾಗಲಾರದು . ಹರಿ ಪಾರಮ್ಯವನ್ನು ಸಾರುವುದೇ ಇವರ ಪ್ರಮುಖ ಉದ್ದೇಶವಾಗಿತ್ತು.

## ನಾರದರ ಪೂರ್ವಜನ್ಮ ವೃತ್ತಾಂತ

ಮನುಕುಲದ ಉದ್ಧಾರಕ್ಕಾಗಿ ವೇದವ್ಯಾಸರಿಂದ ರಚಿತವಾಗಿರುವ ಶ್ರೀಮದ್ಭಾಗವತದ ಪ್ರಥಮ ಸ್ಕಂಧದ ನಾಲ್ಕನೆಯ ಅಧ್ಯಾಯದಲ್ಲಿ ಈ ಒಂದು ಕಥೆಯು ವರ್ಣಿತವಾಗಿದೆ.

ದ್ವಾಪರಯುಗದಲ್ಲಿ ಭಗವಂತನಾದ ಶ್ರೀಮನ್ನಾರಾಯಣನು ಪರಾಶರಮಹರ್ಷಿಗಳ ಹಾಗೂ ಸತ್ಯವತೀ ದೇವಿಯ ಮಗನ ರೂಪದಲ್ಲಿ ಆವಿರ್ಭವಿಸಿ **'ವೇದವ್ಯಾಸ'** ಎಂದು ಪ್ರಖ್ಯಾತರಾದರು. ಅವರು ಒಂದು ದಿನ ಪ್ರಾತಃಕಾಲದಲ್ಲಿ ಸರಸ್ವತೀ ನದೀತೀರದಲ್ಲಿ ಸ್ನಾನಾಹ್ನಿಕಗಳನ್ನು ಮುಗಿಸಿಕೊಂಡು ಒಂದು ಏಕಾಂತಸ್ಥಳದಲ್ಲಿ ಯಾಕೋ ಏನೋ ಭಿನ್ನ ಮನಸ್ಕರಾಗಿ ಕುಳಿತಿದ್ದರು. ಆಗ ತ್ರಿಲೋಕ ಸಂಚಾರಿಗಳಾದ ನಾರದರು ಅಲ್ಲಿಗೆ ಬಂದರು. ನಾರದ ಮಹರ್ಷಿಗಳು ಬಂದೊಡನೆ ವ್ಯಾಸರು ಅವರನ್ನು ಸತ್ಕರಿಸಿ ಸುಖಾಸನವನ್ನು ಕೊಟ್ಟು ತಮ್ಮ ಹತ್ತಿರದಲ್ಲಿಯೇ ಕೂಡಿಸಿಕೊಂಡರು. ನಾರದರು ವೇದವ್ಯಾಸರನ್ನು ನೋಡಿ ಹೀಗೆಂದರು ಸ್ವಾಮಿ ತಾವು ಏಕೆ ಸ್ವಲ್ಪ ಖಿನ್ನವಾದ ಮನಸ್ಸಿನವರಂತೆ ಕಾಣುತ್ತಿದ್ದೀರಿ? ತಾವಾದರೋ ಅಮೋಘವಾದ ವೇದ ವಿಭಾಗಗಳನ್ನು ಮಾಡಿ ಮಹಾಭಾರತವನ್ನೂ ರಚಿಸಿ ಈ ಕಲಿಯುಗದ ಜನಗಳಿಗೆ ಮಹೋಪಕಾರವನ್ನು ಮಾಡಿ ಪರಿಪೂರ್ಣರು ಎಂದೆನಿಸಿಕೊಂಡಿರುವಿರಿ. ಹೀಗಿದ್ದರೂ ಯಾಕೋ ಏನೋ ನಿಮ್ಮ ಮುಖವು ಬಾಡಿರುವಂತೆ ಇದೆಯಲ್ಲಾ ಕಾರಣವೇನು? ಎಂದು ಕೇಳಿದರು.

ಅದಕ್ಕೆ ವ್ಯಾಸರು "ಹೌದು ನಾರದರೇ ನೀವು ಹೇಳಿದ ಮಾತು ಶತವಃ ಸತ್ಯ. ನನ್ನಿಂದ ರಚಿತವಾದ ಕೃತಿಗಳನ್ನು ಜನರು ಉಪಯೋಗಿಸುತ್ತಿಲ್ಲ ಎಂದು ಬೇಸರವಾಗಿದೆ. ಹೇಗೆ ತಾಯಿ ಕಷ್ಟಪಟ್ಟು ಮಾಡಿದ ಅಡಿಗೆಯನ್ನು ಮಕ್ಕಳು ಸಂತೋಷದಿಂದ-ಚೆನ್ನಾಗಿದೆ ಎಂದು ಹೇಳುತ್ತಾ ಊಟ ಮಾಡಿದರೆ ಸಂತೃಪ್ತಿ ಸಿಗುತ್ತದೆಯೊ ಹಾಗೆಯೇ ನಾನು ರಚಿಸಿದ ಕೃತಿ ಓದಿ ಸಂತಸಪಟ್ಟರೆ ನನಗೂ ಸಂತೃಪ್ತಿ ಇರುತ್ತದೆ. ಇಲ್ಲವಾದರೆ ಶ್ರಮವೆಲ್ಲಾ ವ್ಯರ್ಥವಾಯಿತಲ್ಲಾ ಎಂದು ಬೇಸರವಾಗುತ್ತದೆ ಎಂದು ಹೇಳಿದರು. ಆಗ ನಾರದರು ವೇದವ್ಯಾಸರನ್ನು ಕುರಿತು ಸ್ವಾಮಿ! ತಾವು ಅಮೋಘವಾದ ಕೃತಿಗಳನ್ನು ರಚಿಸಿದ್ದೀರಿ. ತಮ್ಮಲ್ಲಿ ಒಂದು ವಿಜ್ಞಾಪನೆ ಭಗವಂತನ ಗುಣ ಮಹಿಮೆಗಳನ್ನು ವರ್ಣಿಸುವುದರಲ್ಲಿ ಯಶಸ್ವಿಯಾದ ತಾವು ಶ್ರೀಮದ್ಭಾಗವತವನ್ನು ಭೂಲೋಕದಲ್ಲಿ ಪ್ರಚುರಪಡಿಸಿದರೆ ನಿಮ್ಮ ಪ್ರಯತ್ನ ಯಶಸ್ವಿಯಾಗುತ್ತದೆ ಎಂದರು. ಹೀಗೆ ಹೇಳುತ್ತಾ ನಾರದರು ತಮ್ಮ ಆತ್ಮೋದ್ಧಾರಕ್ಕೆ ಕಾರಣವಾದ ಭಾಗವತದ ಮಹಿಮೆಯನ್ನು ಉದಾಹರಿಸಿದರು. ನಾರದರು ತಮ್ಮ ಆತ್ಮವೃತ್ತಾಂತವನ್ನು ಹೀಗೆ ಹೇಳಿದರು.

**ಅಹಂ ಪುರಾತೀತ ಭವೇಭವಂ ಮುನೇ**
**ದಾಸ್ಯಾಸ್ತು ಕಸ್ಯಾಶ್ಚನ ವೇದವಾದಿನಾಮ್**
**ನಿರೂಪಿತೋ ಬಾಲಕಏವ ಯೋಗಿನಾಂ**
**ಶುಷ್ರೂಷಣೇ ಪ್ರಾವೃಷಿ ನಿರ್ವಿವಿಕ್ಷತಾಮ್**
**(ಭಾಗವತ ಪ್ರ.ಸ್ಕಂ 5 ನೇ ಅ. ಶ್ಲೋಕ. 23)**

ಹಿಂದಿನ ಕಲ್ಪದಲ್ಲಿ ನಾರದರು ಒಬ್ಬ ದಾಸಿಯ ಪುತ್ರರಾಗಿದ್ದರು. ಆಕೆ ವೇದನಾದಿಗಳ ಸೇವೆಯಲ್ಲಿಯೇ ನಿರತಳಾಗಿದ್ದಳು. ಅವಳು ತನ್ನ ಮಗನನ್ನೂ ಯೋಗಿಗಳ ಶುಶ್ರೂಷೆಗೆ ನೇಮಿಸಿದ್ದಳು. ಆ ಶೂದ್ರ ಬಾಲಕನಾದರೋ ಚಾಪಲ್ಯ ರಹಿತನಾಗಿದ್ದು, ಜಿತೇಂದ್ರಿಯನಾಗಿ ಮಿತಭಾಷಿಯಾಗಿ, ಆ ಯೋಗಿಗಳನ್ನು ಅವರ ಆಜ್ಞಾನುಸಾರವಾಗಿಯೇ ಸೇವೆ ಮಾಡುತ್ತಿದ್ದನು. ಚಾತುರ್ಮಾಸ್ಯದ ಅನುಷ್ಠಾನಕ್ಕಾಗಿ ಈ ಬಾಲಕನ ಗ್ರಾಮಕ್ಕೆ ಬಂದ ಯೋಗಿಗಳ ಸೇವೆಯಿಂದ ಆತನ ಪಾಪಗಳು ತೊಳೆದು ಹೋದವು.

**ತತ್ರಾನ್ವಹಂ ಕೃಷ್ಣಕಥಾಃ ಪ್ರಗಾಯತಾ**
**ಮನುಗ್ರಹೇಣಾ ಶೃಣವ ಮನೋಹರಾಃ**
**ತಾಃ ಶ್ರದ್ಧಯಾ ಮೇನುಪದಂ ವಿಶೃಣ್ವತಃ**
**ಪ್ರಿಯತ್ರವಸ್ಯಂಗ ಮಮಾ ಭವದ್ರುಚಿಃ**
**(ಭಾಗವತ ಪ್ರ. ಸ್ಕಂ 5 ನೇ ಅ. ಶ್ಲೋಕ. 26)**

ನಾರದರು ನಿತ್ಯಕರ್ಮಾನುಷ್ಠಾನಗಳನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು. ಯೋಗಿಗಳ ಊಟಮಾಡಿ ಉಳಿಸಿದ ಪದಾರ್ಥಗಳನ್ನು ಮಹಾಪ್ರಸಾದವೆಂದು ಸೇವಿಸುತ್ತಿದ್ದರು. ಅವರು ಮಾಡುವ ಭಜನೆ, ಪೂಜೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಆ ಯೋಗಿಗಳು ಪ್ರತಿನಿತ್ಯವೂ ಸಾಯಂಕಾಲದಲ್ಲಿ ಶ್ರೀಕೃಷ್ಣಪರಮಾತ್ಮನ ಮನೋಹರವಾದ ಕಥೆಗಳನ್ನು ವರ್ಣಿಸುತ್ತಿದ್ದರು. ಇವುಗಳನ್ನು ಕೇಳುತ್ತಾ, ಕೇಳುತ್ತಾ ಬಾಲಕನ ಹೃದಯದಲ್ಲಿ ರಜೋಗುಣ, ತಮೋಗುಣಗಳನ್ನು ನಾಶಮಾಡುವಂತಹ ಭಕ್ತಿಯೂ ಅವರ ಮನದಲ್ಲಿ ಮೂಡಿತು. ಒಮ್ಮೆ ಈ ಬಾಲಕನು ಕಥಾಶ್ರವಣಮಾಡುತ್ತಿದ್ದಾಗ ಆಕಸ್ಮಾತ್ತಾಗಿ ತನ್ನ ತಾಯಿಯು ಹಾವಿನಿಂದ ಕಚ್ಚ

ಲ್ಪಟ್ಟು ಮೃತಳಾದಳು ಎಂಬ ವಾರ್ತೆಯು ಕೇಳಿ ಬಂತು. ಆದರೂ ಆ ಮಹಾಯೋಗಿಗಳ ನಿತ್ಯ ಉಪದೇಶದಿಂದ ಪರಿಪಕ್ವವಾದ ಮನಸ್ಸುಳ್ಳ, ಕೇವಲ ಐದು ವರ್ಷದ ಬಾಲಕನಿಗೆ ಈ ಜಗತ್ತೆಲ್ಲವೂ ನಶ್ವರ ಮತ್ತು ವಿಲ್ಲವೂ ಭಗವಂತನ ಅಧೀನವೆಂಬ ಜ್ಞಾನವು ಈಗಾಗಲೇ ಇದ್ದುದರಿಂದ ತಾಯಿಯ ಮರಣದಿಂದ ವಿಶೇಷವಾದ ದುಃಖವು ಅವರಿಗೆ ಉಂಟಾಗಲಿಲ್ಲ.

ನಂತರ ಆ ಯತಿಗಳು ಚಾತುರ್ಮಾಸ ವ್ರತವನ್ನು ಮುಗಿಸಿ ಮುಂದೆ ಸಂಚಾರ ಮಾಡಿದ ಮೇಲೆ ನಾರದರೂ ಸಹ ತಮ್ಮ ಗ್ರಾಮವನ್ನು ಬಿಟ್ಟು ದಟ್ಟವಾದ ಅರಣ್ಯಗಳನ್ನು ದಾಟಿ ಗಂಗಾನದಿಯ ತೀರಕ್ಕೆ ಬಂದರು. ಅವರ ದೇಹ ಇಂದ್ರಿಯಗಳೆಲ್ಲ ಬಳಲಿ ಹೋಗಿದ್ದವು. ಹೀಗೆ ಇರುವಲ್ಲಿ ಒಮ್ಮೆ ನಾರದರು ಒಂದು ಅರಳಿಯ ಮರದ ಕೆಳಗೆ ಕುಳಿತು ಯೋಗಿಗಳು ಉಪದೇಶಿಸಿದಂತೆಯೇ ಭಗವಂತನನ್ನು ಧ್ಯಾನಿಸತೊಡಗಿದರು. ಆಗ ಹಠಾತ್ತನೆ ಒಂದು ವಿಚಿತ್ರ ಅನುಭವವಾಗಿ ಭಗವಂತನ ಮೂಲರೂಪವನ್ನು ಕಂಡು ಸಂತಸಗೊಂಡರು. ಮತ್ತೆ ಮತ್ತೆ ಅದೇ ದಿವ್ಯರೂಪವನ್ನು ಕಾಣಬೇಕೆಂದು ಹಾತೊರೆದರು. ಪರಮಾತ್ಮನ ರೂಪ ಕಣ್ಮರೆಯಾಯಿತು. ಆದ್ದರಿಂದ ದುಃಖದಿಂದ ತಪ್ತರಾದ ಅವರನ್ನು ಕುರಿತು ಒಂದು ಅಶರೀರವಾಣಿಯು ಹೀಗೆ ಹೇಳಿತು.

**ಸಕೃದ್ ಯದ್ ದರ್ಶಿತಂ ರೂಪಮೇತಕ್ಕಾಮಾಯ ತೇನಘ।**
**ಮತ್ಕಾಮ ಶನಕೈಃ ಸಾಧು ಃ ಸರ್ವಾನ್ ಮುಂಜತಿ ಹೃತ್‌ಚ ಯಾನ್ ॥**
**ಸತ್ಸೇವಯಾ ದೀರ್ಘಯಾ ತೇ ಜಾತಾ ಮಯಿ ದೃಢಾಮತಿಃ**
**ಹಿತ್ವಾವದ್ಯಮಿಮಂ ಲೋಕಂ ಗಂತಾ ಮಜ್ಜನತಾಮಸಿ ॥**
**ಮತಿರ್ಮಯಿ ನಿಬದ್ಧೇಯಂ ನ ವಿಪದ್ಯೇತ ಕರ್ಹಿಚಿತ್।**
**ಪ್ರಜಾಸರ್ಗನಿರೋಧೇಹಿ ಸ್ಮೃತಿಶ್ಚ ಮದನುಗ್ರಹತ್ ॥**

**(ಭಾಗವತ ಪ್ರ.ಸ್ಕಂ. ಅ.6, ಶ್ಲೋಕ 23 ರಿಂದ 25)**

ದೀರ್ಘಕಾಲ ತಪಸ್ಸು ಮಾಡಿದ ಯೋಗಿಗಳಿಗೂ ಕಾಣದ ನನ್ನ ದಿವ್ಯರೂಪವನ್ನು ನೀನು ಈ ಜನ್ಮದಲ್ಲಿಯೇ ಕಂಡಿರುವೆ. ಚಾತುರ್ಮಾಸ್ಯ ವ್ರತಾನುಷ್ಠಾನಿಗಳಾಗಿದ್ದ ಸನ್ಯಾಸಿಗಳ ಸೇವೆ ಮತ್ತು ಉಪದೇಶದ ಬಲದಿಂದ ನಿನಗೆ ಇದು ಲಭ್ಯವಾಗಿದೆ. ಇದೇ ಕ್ರಮದಲ್ಲಿ ನೀನು ಧ್ಯಾನ ಚಿಂತನೆಗಳನ್ನು ಮುಂದುವರಿಸು.

ನಿನಗೆ ಸದ್ಗತಿ ದೊರಕುತ್ತದೆ'' ಎಂದು ಆಶ್ವಾಸನೆ ಕೊಟ್ಟಿತು. ಹೀಗೆಯೇ ಮುಂದೆ ತನ್ನ ಜೀವನ ನಡೆಸಿದ ಆತನು ಕೊನೆಯಲ್ಲಿ ತನ್ನ ದೇಹವನ್ನು ಗಂಗಾ ತೀರದಲ್ಲಿಯೇ ತ್ಯಜಿಸಿ ಬ್ರಹ್ಮದೇವನ ಮಗನಾಗಿ ನಾರದ ಎಂಬ ಹೆಸರಿನಿಂದ ಜನಿಸಿದರು.



ಹೀಗೆ ನಾರದರು ತಮ್ಮ ಆತ್ಮ ಕಥೆಯನ್ನು ವರ್ಣಿಸುತ್ತಾ ಚಾತುರ್ಮಾಸ್ಯ ವ್ರತ ಕಾಲದಲ್ಲಿ ಯತಿಗಳ ಸೇವೆಯ ಫಲವನ್ನು ಮತ್ತು ಭಾಗವತಾ ಕಥಾ ಶ್ರವಣದ ಮಹಿಮೆಯನ್ನು ವರ್ಣಿಸಿದರು. ಅಂತಹ ಶ್ರೀಮದ್ಭಾಗವತವನ್ನು ಭೂಲೋಕದ ಜನರಿಗೆ ಲಭ್ಯವಾಗುವಂತೆ ರಚಿಸಬೇಕೆಂದು ನಾರದರು ವೇದವ್ಯಾಸರ ಬಳಿ ಪ್ರಾರ್ಥಿಸಿದರು. ಅದರಂತೆಯೇ ವ್ಯಾಸ ಮಹರ್ಷಿಗಳು ಶಮ್ಯಾಪ್ರಾಸ' ಎಂಬ ಆಶ್ರಮದಲ್ಲಿ ಕುಳಿತು ಭಾಗವತವನ್ನು ರಚಿಸಿ ತಮ್ಮ ಮಗನಾದ ಶುಕಮಹರ್ಷಿಗಳಿಗೆ ಅದನ್ನು ಉಪದೇಶಿಸಿದರು.

ನಾರದರ ದಿವ್ಯ ಜೀವನದಿಂದ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ :-

1. ಭಗವದ್ಭಕ್ತರನ್ನು ಸೇವಿಸುವುದು. ಅವರ ಹಿತನುಡಿಗಳಂತೆ ನಡೆಯುವುದು.

2. ಭಗವಂತನ ದಿವ್ಯಾನುಗ್ರಹ ಪಡೆಯಲು ಜಾತಿ ಮುಖ್ಯವಲ್ಲ. ಶ್ರದ್ಧೆ, ಭಕ್ತಿ, ಏಕಾಗ್ರತೆ ಬಹಳ ಮುಖ್ಯ.

3. ಐಹಿಕ ಸುಖಗಳು ಎಂದೆಂದಿಗೂ ಶಾಶ್ವತವಲ್ಲ. ಮುಕ್ತಿಮಾರ್ಗ ಪಥದತ್ತ ಪ್ರತಿಯೊಬ್ಬರು ಮುನ್ನಡೆಯಬೇಕು.

ಎಲ್ಲವನ್ನು ಎಲ್ಲರನ್ನೂ ಕೃಷ್ಣಾನುಗ್ರಹವೆಂದು ಪರಿಗಣಿಸಬೇಕು.





# ದುದ್ದದ ಶ್ರೀ ಲಕ್ಷ್ಮೀನರಸಿಂಹ ದೇವಾಲಯ

– ಕೆಂಗೇರಿ ಚಕ್ರಪಾಣಿ
94483 86886

ಮಂಡ್ಯ ಜಿಲ್ಲೆಯ ಅದೇ ತಾಲೂಕಿನ,ಮಂಡ್ಯ ನಗರದಿಂದ 15 ಕಿ.ಮೀ.ದೂರದಲ್ಲಿರುವ ಗ್ರಾಮ ದುದ್ದ. ದುದ್ದ ಗ್ರಾಮದ ಊರಿನ ನಡುವೆ ಹೊಯ್ಸಳರ ಕಾಲದ ಸುಂದರವಾದ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯ ದೇವಾಲಯವಿದೆ. ಶಾಸನದಲ್ಲಿ ಕೋಟೆ ನರಸಿಂಹ ಎಂದು ಕರೆದಿರುವ ಲಕ್ಷ್ಮೀ ನರಸಿಂಹ ದೇವಾಲಯವು ಊರ ಮಧ್ಯೆ ಇರುವುದರಿಂದ ನಡುಕೇರಿ ನರಸಿಂಹ ಎಂದು ಪ್ರಸ್ತುತ ದೇವಾಲಯವನ್ನು ಸ್ಥಳೀಯರು ಕರೆಯುವರು. ಮೂಲತಃ ಹೊಯ್ಸಳರ ಕಾಲದ ದೇವಾಲಯವಿದಾಗಿದ್ದು ನಂತರ ಕಾಲದಲ್ಲಿ ಸಾಕಷ್ಟು ಬದಲಾವಣೆ ಕಂಡರೂ ಮೂಲಸ್ವರೂಪಕ್ಕೆ ಧಕ್ಕೆಯಾಗದಂತೆ ನವೀಕರಿಸಲಾಗಿದೆ. ದೇವಾಲಯವು ಮುಖಮಂಟಪ, ನವರಂಗ, ಅಂತರಾಳ, ಗರ್ಭಗುಡಿಗಳನ್ನು ಹೊಂದಿವೆ. ದೇವಾಲಯದ ಗೋಡೆಗೆ ಹೊಂದಿಕೊಂಡಂತೆ ಅರೆ ಕಂಬಗಳಿವೆ. ನವರಂಗದಲ್ಲಿ ರುದ್ರಕಾಂತ ಮಾದರಿಯ ನಾಲ್ಕು ಸ್ತಂಭಗಳಿವೆ.

ದುದ್ದದ ಲಕ್ಷ್ಮೀನರಸಿಂಹ ದೇವಾಲಯದ ಗರ್ಭಗುಡಿಯಲ್ಲಿರುವ ಲಕ್ಷ್ಮೀನರಸಿಂಹಸ್ವಾಮಿಯು ಹೊಯ್ಸಳರ ಕಾಲದ ಸುಂದರ ಕಲಾಕೃತಿ. ಐದು ಅಡಿ ಎತ್ತರವಿರುವ ಮೂರ್ತಿಯು ಸಿರಿ ಲಕ್ಷ್ಮೀಯನ್ನು ತನ್ನ ವಾಮ ಭಾಗದಲ್ಲಿ ಕುಳ್ಳಿರಿಸಿಕೊಂಡಿರುವ ಸುಂದರವಾದ ನರಸಿಂಹನ ಮೂರ್ತಿ ಸ್ವಾಮಿಯ ಮೇಲಿನ ಕೈಗಳಲ್ಲಿ ಚಕ್ರ, ಶಂಖವನ್ನು ಹಿಡಿದಿದ್ದು, ಕೆಳಗಿನ ಬಲಗೈ ಅಭಯ ಹಸ್ತದಲ್ಲಿದೆ, ದೇವನ ಎಡಗೈ ದೇವಿಯನ್ನು ಬಳಸಿದೆ. ಅಮೃತ ಕಳಶವನ್ನು ಹಿಡಿದಿರುವ ದೇವಿಯ ಮುಖಾರವಿಂದವು ತನ್ನ ಸ್ವಾಮಿಯ ಕಡೆಗೆ ತಿರುಗಿದೆ. ದೇವಿಯ ಒಂದು ಕಣ್ಣು ತನ್ನ ದೇವನೆಡೆಗೆ ನೋಡುತ್ತಿರುವಂತೆ ಹಾಗೂ ಮತ್ತೊಂದು ಕಣ್ಣು ಭಕ್ತರೆಡೆಗೆ ನೋಡಿ ಅನುಗ್ರಹಿಸುತ್ತಿರುವಂತೆ ಚಿತ್ರವಾಗಿದೆ. ಕಿರೀಟ ಮಕುಟವನ್ನು ಧರಿಸಿರುವ ಮೂರ್ತಿಯ ಸುತ್ತಲೂ ಅರ್ಧ ವೃತ್ತಾಕಾರದ ಎರಡು ಹಂತದ ರಚನೆಗಳನ್ನೊಳಗೊಂಡ ಪ್ರಭಾವಳಿಯಿದೆ. ಒಳಗಿನ ಹಂತದಲ್ಲಿ ಕ್ರಮವಾಗಿ ಪದ್ಮ ವಜ್ರಶಾಖೆಗಳಿದ್ದರೆ, ಮೇಲಿನ ಹಂತದಲ್ಲಿ ಮತ್ಸ್ಯ, ಕೂರ್ಮಾದಿಯಾಗಿ ಮಹಾವಿಷ್ಣುವಿನ ದಶಾವತಾರದ ಕಿರು ಶಿಲ್ಪಗಳಿವೆ.

ದುದ್ದದ ಲಕ್ಷ್ಮೀನರಸಿಂಹ ದೇವಾಲಯವು ನರಸಿಂಹನ ಜಾಗೃತ ಸ್ಥಳವಾಗಿದ್ದು ಅನೇಕ ಸಂಖ್ಯೆಯ ಭಕ್ತಾದಿಗಳನ್ನು ಹೊಂದಿದೆ. ಪ್ರತೀ ತಿಂಗಳು ಸ್ವಾತಿ ನಕ್ಷತ್ರದಲ್ಲಿ ಸ್ವಾಮಿಗೆ ವಿಶೇಷ ಸೇವಾಕೈಂಕರ್ಯಗಳು ಬಹು ಹಾಂಗಿತವಾಗಿ ಜರುಗುತ್ತದೆ. ಆಗ ಅಧಿಕ ಸಂಖ್ಯೆಯಲ್ಲಿ ಭಕ್ತಾದಿಗಳೂ ಆಗಮಿಸಿ

ಲಕ್ಷ್ಮೀನರಸಿಂಹ ಸ್ವಾಮಿಯ ಕೃಪೆಗೆ ಪಾತ್ರರಾಗುವರು. ನರಸಿಂಹ ಜಯಂತಿಯ ದಿನ ಕ್ಷೇತ್ರದಲ್ಲಿ ಕಲ್ಯಾಣೋತ್ಸವ ಮುಂತಾದ ಸೇವಾಕೈಂಕರ್ಯಗಳು ಬಹಳ ವೈಭವವಾಗಿ ನೆರವೇರುತ್ತದೆ. ದುದ್ದ ಗ್ರಾಮದಲ್ಲಿ ಎಲ್ಲ ಪ್ರಾಚೀನ ಅಗ್ರಹಾರಗಳಲ್ಲಿರುವಂತೆ ಊರ ನಡುವೆ ವಿಷ್ಣು ದೇವಾಲಯವಿದ್ದರೆ ಊರ ಹೊರವಲಯದಲ್ಲಿ ಶಾಸನೋಕ್ತ ಕೆರೆಯ ಅಂಚಿನಲ್ಲಿ ಈಶಾನ್ಯ ದಿಕ್ಕಿನಲ್ಲಿ ಈಶ್ವರ ದೇವಾಲಯವಿದೆ. ಹೊಯ್ಸಳರ ಕಾಲದ ದೇವಾಲಯವಿದಾಗಿದ್ದು ಶಿಥಿಲ ಹಂತವನ್ನು ತಲುಪಿದೆ. ಈ ದೇವಾಲಯವನ್ನು ಮೂಲ ಸ್ವರೂಪದಂತೆ ಸಂರಕ್ಷಿಸುವ ಕಾರ್ಯ ತುರ್ತಾಗಿ ಆಗಬೇಕಿದೆ. ಲಕ್ಷ್ಮೀ ನರಸಿಂಹ ದೇವಾಲಯಕ್ಕೆ ತಿರುಗುವ ರಸ್ತೆಯ ಬಳಿ ಒಂದು ಹೊಯ್ಸಳ ಕಾಲದ ತೋರಣ ಸ್ತಂಭವು ಗಮನ ಸೆಳೆಯುತ್ತದೆ. ಗ್ರಾಮದಲ್ಲಿ ಗ್ರಾಮದೇವತೆ ಚೌಡೇಶ್ವರಿಯ ದೇವಾಲಯವಿದೆ.

**ದೇಶಿಕರ ಸೌಟು -**

ದುದ್ದವು ಹಿಂದೆ 24 ಹಳ್ಳಿಗಳ ಮೇಲೆ ಹಿಡಿತ ಹೊಂದಿದ್ದ ಸ್ಥಳವಾಗಿತ್ತು. ಇಲ್ಲಿ ವೆಂಕಟನರಸಯ್ಯ ಶೆಟ್ಟರ ಮನೆಯಲ್ಲಿರುವ 24 ಅಂಗುಲ ಉದ್ದದ ದೇಶಿಕರ ಸೌಟು ಆಕರ್ಷಕವಾಗಿದೆ. ಹಿಂದೆ ಈ ಸೌಟಿಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವೃತ್ತಿ ಮಾಡುತ್ತಿದ್ದ ಜನರ ಸಂಪರ್ಕವಿದ್ದು ಜಾತ್ರೆಯ ಸಂದರ್ಭಗಳಲ್ಲಿ ಪ್ರಸ್ತುತ ಸೌಟಿನಿಂದ ಪಡಿ ಸಂಗ್ರಹಿಸಲಾಗುತ್ತಿತ್ತು. ಕಲಾತ್ಮಕವಾದ ಸೌಟಿನ ಹಿಡಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ವೃತ್ತಿಯನ್ನು ಮಾಡುವ ಕಸುಬುದಾರರ ಚಿಹ್ನೆಗಳನ್ನು ಸಾಂಕೇತಿಕವಾಗಿ ಬಿಂಬಿಸಲಾಗಿದೆ.

ಉಬ್ಬು ಕೆತ್ತನೆಯ ರೀತಿಯಲ್ಲಿ ಬಿಂಬಿಸಿರುವ ನಾಗರ ಹೆಡೆಯನ್ನು ಧರಿಸಿರುವ ಸೋಮಲಿಂಗೇಶ್ವರ, ನಂದಿ, ರಾಜತ್ವ ಸಂಕೇತದ ಕುದುರೆ, ತಕ್ಕಡಿ, ನೇಗಿಲು, ಜನಿವಾರ, ಅಡಿಗಲ್ಲು, ಕತ್ತರಿ, ಬಲೆ, ಚಕ್ರ ಹೀಗೆ ಹಲವಾರು ಜಾತಿಯವರ ವೃತ್ತಿ ಲಾಂಛನಗಳನ್ನು ಸಾಂಕೇತಿಕವಾಗಿ ಎರಕ ಹೊಯ್ಯಲಾಗಿದೆ.

ಇದು ಒಂದು ಅಪರೂಪದ ಸಂಗ್ರಹ ಯೋಗ್ಯವಾದ ವಸ್ತುವಾಗಿದ್ದು. ದುದ್ದಕ್ಕೆ ಆಗಮಿ







ಸುವ ಪ್ರವಾಸಿಗರು ಶ್ರೀವೆಂಕಟನರಸಯ್ಯ ಶೆಟ್ಟರು ವಂಶಸ್ಥರ ಮನೆಗೆ ಹೋಗಿ ನೋಡಿ ಬರಬಹುದು.

**ಹೀಗೆ ಬನ್ನಿ :**

ಮಂಡ್ಯ ಜಿಲ್ಲೆಯ ಅದೇ ತಾಲೂಕಿನಲ್ಲಿರುವ ದುದ್ದ ಗ್ರಾಮವು ಮಂಡ್ಯ ಮೇಲುಕೋಟೆ ರಸ್ತೆಯಲ್ಲಿ ಜಿಲ್ಲಾ ಕೇಂದ್ರದಿಂದ 15 ಕಿ.ಮೀ. ದೂರದಲ್ಲಿದೆ. ಮಂಡ್ಯ ನಗರದ ನಂತರ ಸಿಗುವ ಮೇಲುಕೋಟೆ ತಿರುವಿನಲ್ಲಿ ಬಲಕ್ಕೆ ತಿರುಗಿ ಸುಮಾರು 12 ಕಿ.ಮೀ. ದೂರದಲ್ಲಿರುವ ದುದ್ದ ಗ್ರಾಮವನ್ನು ಸೇರಬಹುದು. ದುದ್ದಕ್ಕೆ ಸಮೀಪದಲ್ಲಿ ಬಸರಾಳು ಗ್ರಾಮವಿದ್ದು. ಇಲ್ಲಿ ಕಲಾತ್ಮಕ ಕೆತ್ತನೆಗಳಿಂದ ಕೂಡಿರುವ ಹೊಯ್ಸಳರ ಕಾಲದ ಮಲ್ಲಿಕಾರ್ಜುನ ದೇವಾಲಯವಿದೆ.



# ಆಳ್ವಾರರ ನಾಯಕಮಣಿ ನಮ್ಮಾಳ್ವಾರ್

**ಡಾ॥ ಎನ್.ಕೆ. ರಾಮಶೇಷನ್**
**82771 46110**

ದಕ್ಷಿಣ ಭಾರತದ ಶ್ರೀವೈಷ್ಣವ ಸಂತರು 12 ಜನ ಆಳ್ವಾರರು ಎಲ್ಲರೂ ಶ್ರೀಹರಿ ಭಕ್ತಿ ಪಾರಮ್ಯ ಪ್ರತಿಪಾದಿಸಿ ಸಾರಿದವರೇ. ಇವರೆಲ್ಲರೂ ಒಟ್ಟು ರಚಿಸಿ ಹಾಡಿದ ಶ್ರೀಹರಿಭಕ್ತಿ ಗೀತೆಗಳನ್ನು ದಿವ್ಯ ಪ್ರಬಂಧ, ನಾಲಾಯಿರಂ, ದ್ರಾವಿಡ ವೇದ ಎಂದೆಲ್ಲ ಕೊಂಡಾಡುತ್ತಾರೆ. ಆಳ್ವಾರರುಗಳು ಮಹಾಯೋಗಿಗಳು. ಭಕ್ತಿಯೋಗದಲ್ಲಿ ಸದಾ ಮುಳುಗಿದ್ದರಿಂದ ಇವರಿಗೆ ಆಳ್ವಾರ್ ಅಂದರೆ ಭಕ್ತಿ ಸಾಮ್ರಾಜ್ಯವನ್ನು ಆಳುವವರು ಎಂದೆಲ್ಲಾ ಹೆಸರಾಯಿತು. ಆದರೆ ಒಬ್ಬೊಬ್ಬರ ಬದುಕು ಪ್ರಬಂಧ ಕುರಿತಂತೆ ಕಿರಿದಾಗಿ ಅಭಿವ್ಯಕ್ತಿಸುವ ನಮ್ಮ ಪ್ರಯತ್ನ ಇಲ್ಲಿದೆ. ದ್ರಾವಿಡ ಎಂದರೆ ಆಳ್ವಾರರ ಆಡು ಭಾಷೆ ತಮಿಳು, ಅದು ಶೆಂದಮಿಳ್ ಅರ್ಥ ಆಗುವುದು ಈಗಿನ ಪರಿಸರದಲ್ಲಿ ದುಸ್ತರವೇ ಆದರೂ ತಿಳಿಗನ್ನಡದಲ್ಲಿ ಒಬ್ಬೊಬ್ಬರ ಕೃತಿ ಕುರಿತು ಕೆಲವು ಸಾಲು ಸಾದರ ಪಡಿಸುತ್ತಿದ್ದೇವೆ.

ಪೊಯ್ ಗೈ ಆಳ್ವಾರ್, ಪೂದತ್ತಾಳ್ವಾರ್, ಪೇಯಾಳ್ವಾರ್ ಮೂವರನ್ನು ಮೂವರು ಆಳ್ವಾರ್ ಎಂದೆ ಕರೆಯುವುದು ಹಾಗೂ ಇವರ ಪದ್ಯಗಳನ್ನು ತಿರುವಂದಾದಿ ಎಂದೇ ಕರೆಯುವುದು ರೂಢಿಯಲ್ಲಿದೆ. ಶ್ರೀ ಮಹಾವಿಷ್ಣುವಿನ ಪರಮಭಕ್ತರಾದ ನಮ್ಮಾಳ್ವಾರರು ಸೇನಾನಾಥ ಅಂಶ ಅಥವಾ ವಿಶ್ವಕ್‌ಸೇನಾ ಅಂಶರೆಂದೇ ಪ್ರಸಿದ್ಧರಾದವರು. ಶಠಕೋಪರು ಎಂದು ಕರೆಯುತ್ತಾರೆ, ಎಂದರೆ ಕೋಪವನ್ನು ಜಯಿಸಿದವರು ಎಂಬ ಅರ್ಥ. ಇವರ ಹೆಸರಿನಲ್ಲಿಯೇ ಈಗಲೂ ಪ್ರತಿಯೊಂದು ಶ್ರೀ ವೈಷ್ಣವ ಆಲಯಗಳಲ್ಲಿಯೂ ಶಠಾರಿ ಎಂಬುದನ್ನು ನಮಗೆ ಪೂಜೆ ಆದ ಮೇಲೆ ಮಂಗಳಾರತಿ ಇತ್ಯಾದಿ ಮುಗಿದ ನಂತರ ನೀಡಿ ನಮ್ಮ ತಲೆಯ ಮೇಲೆ ಆ ಶಠಾರಿಯನ್ನು ಇರಿಸುವುದು ಇದು ಬೆಳೆದು ಬಂದಿರುವ ಪದ್ಧತಿ. ಇದು ನಮ್ಮಾಳ್ವಾರ್ ಸಂಕೇತವೇ ಆಗಿದೆ. ಹಾಗೂ ದೇವರ ಆರಾಧನೆಯ ಕ್ರಮ ಎಲ್ಲವೂ ನಮ್ಮಾಳ್ವಾರಿಗೂ ಮರ್ಯಾದೆಯಾಗಿ ನಡೆಯುತ್ತದೆ. ಈ ಸಂಪ್ರದಾಯ ಸಾವಿರಾರು ವರ್ಷಗಳಿಂದ ಬೆಳೆದು ಕೊಂಡು ಬಂದಿದೆ.

ವೃಷಭ ಮಾಸ (ವಿಶ್ವಕ್ ಸೇನ) ಶುಕ್ರವಾರ ವಿಶಾಖ ನಕ್ಷತ್ರದಲ್ಲಿ ಬಹು ಹಿಂದೆ ಪ್ರಸಿದ್ಧ ವಾಗಿದ್ದ ತಾಮ್ರಪರ್ಣಿ ನದಿ ತೀರದ ಆಳ್ವಾರ್ ತಿರುನಗರಿ/ಕುರುಕಾಪುರಿ ಎಂಬ ದಿವ್ಯ ಕ್ಷೇತ್ರ ಆಳ್ವಾರರು ಜನಿಸಿದ ಪುಣ್ಯಕ್ಷೇತ್ರ. ಈಗಲೂ ಪ್ರಸಿದ್ಧ ಆದದ್ದು. ಅವರು ಅವತರಿಸಿ ಇದ್ದ ಬಹುದೊಡ್ಡ ಹುಣಸೇಮರದ ದೊಡ್ಡ ಪೊಟರೆಯಲ್ಲಿ ಅವರು ನೆಲೆಸಿದರೆಂದೇ ಐತಿಹ್ಯ.

ಈಗಲೂ ಅದೇ ಗುರುತು ಹುಣಸೆ ಮರದ ದೊಡ್ಡ ಪೊಟರೆಯಲ್ಲಿ ಅವರು ನೆಲೆಸಿದರೆಂದು ಇತಿಹ್ಯ. ದೈವ ಪ್ರಸಾದಿತ ಶಿಶು ಶಠ ಅಥವಾ ಕೋಪವನ್ನು ಜನ್ಮತಃಜಯಿಸಿತ್ತಂತೆ. ಮಗುವಿಗೆ ಶಠಕೋಪ ಎಂಬ ಹೆಸರು. ಇವರಿಗೆ ಮಾರನ್ ಎಂದು ಹೆಸರು. ಅಂದರೆ ಯಾವುದೇ ಲೌಕಿಕಕ್ಕೂ ಬದಲಾಗದ ಸ್ಥಿರಯೋಗಿ ಈ ಹೆಸರು ಪ್ರಚಾರದಲ್ಲಿದೆ. ಭಕ್ತರಿಗೆ ಅವರ ಭಕ್ತಿ ಸಾಧನೆ ಮುಖ್ಯ. ಮನುಷ್ಯ ನಿರ್ಮಿತ ಜಾತಿ ಅಲ್ಲ ತಂದೆ ವೆಳ್ಳಾಲ ಎಂಬ ಪಂಗಡದ ಕಾರ್ಯಾರ್ ಹೆಸರು. ತಾಯಿ ಉಡೈನಂಗೈಯಾರ್. ಎಲ್ಲಾ ಸಾಮಾನ್ಯ ಶಿಶುಗಳಂತೆ ಹುಟ್ಟಿದ ಮಗು ಸ್ತನ್ಯಪಾನ ಮಾಡಅಲ್ಲ. ಆಹಾರ ಇರದಿದ್ದರೂ ವಿಲಕ್ಷಣ ಯೌಗಿಕ ಬೆಳವಣಿಗೆ. ತಾಯಿ ತಂದೆ ಮಗುವನ್ನು ದೇವಾಲಯಕ್ಕೆ ಕರೆದೊಯ್ದರು. ಮೊದಲ ಬಾರಿ ಕಣ್ಣು ತೆರೆದ ಮಗು ಆದಿನಾಥನ ದಿವ್ಯ ಮೂರ್ತಿಯನ್ನು ಹಾಗೆಯೇ ನೋಡಿ ಮತ್ತೆ ಕಣ್ತೆರೆಯ ಅಲ್ಲ. ಅದೇನು ದಿವ್ಯ ಆಂತರಿಕ ಭಕ್ತಿಯೋ ಇವರಿಗೆ ಸರ್ವಚೈತನ್ಯವನ್ನು ಪರಮಾತ್ಮ ಶ್ರೀನಾರಾಯಣನೇ ಅನುಗ್ರಹಿಸಿದನಂತೆ. ತಾಯಿಯ ಮಡಿಲಿಂದ ಇಳಿದು ಅಂಬೆಗಾಲು ಇಡುತ್ತಾ ಮಗು ಹುಣಸೆ ಮರದ ದೊಡ್ಡ ಪೊಟರೆಯೊಳಗೆ ನುಸುಳಿ ಆಶ್ಚರ್ಯಕರ ರೀತಿಯಲ್ಲಿ ಕುಳಿತದಷ್ಟೇ. 16 ವರ್ಷ ಹಾಗೆಯೇ ಇದ್ದಿತು. ಏನೂ ಆಹಾರವಿಲ್ಲ ಅಚ್ಚರಿ ಆದರೆ ಮಗು ಮಾತ್ರ ಕಳೆಯೊಡಗೂಡಿ ಬೆಳೆಯ

ತೊಡಗಿದ್ದು ಅದ್ಭುತ. ಧ್ಯಾನಸತ್ತ ಆಗಿತ್ತು.

ಇವರನ್ನು ಬಹಿರ್ಮುಖ ಆಗುವಂತೆ ಮಾಡಿ, ದಿವ್ಯ ಪ್ರಬಂಧ ಉಪದೇಶ ಪಡೆದ ಕೀರ್ತಿ ಮಧುರಕವಿ ಆಳ್ವಾರರಿಗೆ ಸೇರಿದ್ದು. ಯಾತ್ರಾ ಪ್ರವಾಸದಲ್ಲಿ ಇದ್ದ ಮಧುರಕವಿಗೆ ದಕ್ಷಿಣದ ಕಡೆ ಒಂದು ಬೆಳಗ್ಗೆ ಬೆಳಗುವ ಜ್ಯೋತಿ ಕಂಡಿತು. ಅದನ್ನೇ ಹುಡುಕುತ್ತಾ ಹುಡುಕುತ್ತಾ ಮೈಲಿಗಟ್ಟಲೆ ನಡೆದು ಬಂದು ಆಳ್ವಾರರಿದ್ದ ಹುಣಸೆ ಮರದ ಕಡೆಗೆ ಬಂದರು. ನಮ್ಮಾಳ್ವಾರರನ್ನು ಕಂಡರು.

ಮಗುವಿನ ಗಮನವನ್ನು ಸೆಳೆಯಲು ಒಂದು ದಪ್ಪ ಕಲ್ಲನ್ನು ದೊಪ್ಪೆಂದು ಎತ್ತಿ ಹಾಕಿದಾಗ ಕಣ್ತೆರೆದ ಮಗುವನ್ನು ಭಕ್ತಿಯಿಂದ ಮಧುರ ಕವಿ "ಅಚೇತನವಾದ ಶರೀರ, ಅಣುಚೇತನ ಜೀವಾತ್ಮ ಪ್ರಾಕೃತ ಈ ಶರೀರದಲ್ಲಿ ಜನಿಸಿ ಯಾವುದನ್ನು ತಿಂದು ಎಲ್ಲಿ ಜೀವಿಸುತ್ತಾನೆ ಎಂದು ಕೇಳಿದರು. ಕೂಡಲೇ ಉತ್ತರ "ಪ್ರಾಕೃತ ಅನ್ನ ತಿಂದು ಪ್ರಾಕೃತ ಸುಖ ದುಃಖ ಅನುಭವಿಸಿ ಶರೀರ ರೂಪ ಈ ಪ್ರಕೃತಿಯಲ್ಲಿ ವಾಸಿಸುತ್ತಾನೆ.

ಇದು ಬಹು ದೊಡ್ಡ ಪ್ರಶ್ನೆ ಅಂದರೆ ಮನುಷ್ಯನು ತನ್ನ ಕರ್ಮಾನುಸಾರ ಹುಟ್ಟಿ ಹೋಗುತ್ತಾನೆ. ಅಷ್ಟರಲ್ಲಿ ಭಗವಂತನ ಧ್ಯಾನ, ಭಕ್ತಿ, ಪ್ರಪತ್ತಿ ಮಾಡಬೇಕು. ಮರು ಹುಟ್ಟು ಬೇಡ ಎಂಬುದು ಆಗಬೇಕು. ಮಧುರ ಕವಿಗಳು ನಮ್ಮಾಳ್ವಾರರಿಂದ ಶಿಷ್ಯ ವೃತ್ತಿ ಸ್ವೀಕರಿಸಿ ಉಪದೇಶ ಪಡೆದರು.

ನಮ್ಮಾಳ್ವಾರರು ಬಹುದೊಡ್ಡ ಕೊಡುಗೆ ದಿವ್ಯ ಪ್ರಬಂಧಗಳ ಮೂಲಕ ಚಿಂತನದ ಹೊನಲು ಹರಿಸಿದ್ದಾರೆ. ಇಲ್ಲಿ ಎಲ್ಲಾ ವಿವರಿಸಲು ಆಗದು ಅವರ ಪ್ರಬಂಧಗಳು: ತಿರುವಿರುತಂ (ಶ್ರೇಷ್ಠವಾದ ವೃತ್ತ) 100 ಪದ್ಯಗಳು ತಿರುವಾಶಿರಿಯಂ 7 ಪದ್ಯ, ಪೆರಿಯತಿರುವಂದಾದಿ 87 ಪದ್ಯ, ತಿರುವಾಯ್‌ಮೊಳಿ 1102 ಪದ್ಯಗಳು, ಒಟ್ಟು 1296ಪದ್ಯಗಳು ವೇದಂತಮಿಳ್ ಶೈಯ್ದ ಮಾರನ್ ಎಂದೇ ಪ್ರಸಿದ್ಧರಾದರು. ತಿರುವಿರುತ್ತಂ- ಋಗ್ವೇದ ಸಾರ. ಪ್ರಕೃತಿ ಸಂಬಂಧ ನಾಶ ಕುರಿತ ವಿವರ-ಅಲೌಕಿಕ ಬೆಡಗಿನ ಪ್ರಬಂಧ. ತಿರುವಾಶಿರಿಯಂ ಒಂದು ವಿಶೇಷ ಛಂದಸ್ಸಿನ ಕಾವ್ಯ. ಶ್ರೀಮನ್ನಾರಾಯಣನ ದಿವ್ಯ ಸೌಂದರ್ಯದ ಅನುಭವ. ಯಜುರ್ವೇದದ ಸಾರ ಎಂದು ವಿದ್ವಾಂಸರು ಕರೆದಿದ್ದಾರೆ. ಪೆರಿಯತಿರುವಂದಾದಿ ಅಥರ್ವ ವೇದದ ಸಾರ ಉತ್ಕಟ ಪ್ರೀತಿ ಭಕ್ತಿ ಒಳಗೊಂಡ ದಿವ್ಯವಾದ ರಚನೆ, ತಿರುವಾಯ್‌ಮೊಳಿ ಸಾಮವೇದದ ಸಂಗ್ರಹ. ಇಲ್ಲಿ ಆಳ್ವಾರರು ಪರಭಕ್ತಿ, ಪರಜ್ಞಾನ, ಪರಮಭಕ್ತಿ ಪೂರ್ವಕವಾದ ಮೋಕ್ಷ ಸ್ವರೂಪ ನಿರತಿಶಯ ಆನಂದ ಫಲಪ್ರಾಪ್ತಿಯನ್ನು ವಿಶದಪಡಿಸುತ್ತಾರೆ. ಇವೆಲ್ಲವೂ ಗುರುಮುಖೇನ ಅರಿಯಬೇಕು ಅಷ್ಟೇ ವಿನಃ ಜೇನಿನ ಆಸ್ವಾದ ಅನುಭವಕ್ಕೆ ತಾನೇ ಬರುತ್ತದೆ ಹಾಗೆಯೇ ನಮ್ಮಾಳ್ವಾರರ ವಚನಾಮೃತ ಆರದ ಜೇನು ಇದ್ದ ಹಾಗೆ. ಶರಣಾಗತಿ ಜೀವನ ಲಕ್ಷ್ಯ ಬದುಕು ಇಲ್ಲಿನದು ಸ್ವೀಕರಣೀಯ ನಿರಾಕರಣೀಯ ಅಲ್ಲ. ಆದರೆ ಭಕ್ತಿ ಅಕೃತ್ರಿಮ ಸ್ವಭಾವ, ಮೌಲ್ಯವುಳ್ಳ ಚಾರಿತ್ರ್ಯಧ್ಯೇಯ ಆದರೆ ಒಳ್ಳೆಯದಲ್ಲವೇ. ಯಾವುದೇ ರೀತಿಯ ಮನುಷ್ಯ ನಿರ್ಮಿತ ಜಾತಿ ಮುಖ್ಯ.

ಅಲ್ಲಿ ಪರಮಭಕ್ತಿ, ಆಂತರಿಕ ಸಾಧನೆ ಬದುಕನ್ನು ಯಾವಾಗಲೂ ಹಿತದಿಂದ ಇರಿಸುತ್ತದೆ. ವೇದೋಪನಿಷತ್ತು, ರಾಮಾಯಣ, ಭಾರತ, ಭಾಗವತ, ಗೀತೆ, ಉಪನಿಷತ್ತುಗಳ ಎಲ್ಲದರ ಸಾರ ಆಳ್ವಾರರ ದಿವ್ಯ ಪ್ರಬಂಧಗಳು. ಇವು ಕಾವ್ಯವೇ ಆಗಿ ಜನರ ಮನಸ್ಸುಗಳಲ್ಲಿ ಬೆಳಗುತ್ತಿವೆ ಸಾವಿರಾರು ವರ್ಷಗಳು ಆದಮೇಲೆ ಕೂಡ. ಈ ವಿಚಾರದಲ್ಲಿ ಇನ್ನೂ ಜನರಲ್ಲಿ ಆಸಕ್ತಿ ಬೆಳೆಸುವ ಆಸ್ಥೆ ಬೆಳೆಯಬೇಕು. ಇಲ್ಲಿ ಆಂತರಿಕ ಸಾಧನೆಗೆ ಪ್ರಾಮುಖ್ಯತೆ. ನಮ್ಮಾಳ್ವಾರರು ತಾನು ನಾಯಕಿಯಾಗಿ ದೇವರನ್ನು ತನ್ನ ಮನವೊಲಿದ ನಾಯಕನಾಗಿ ಅನುಭವಿಸುತ್ತಾರೆ. ಮುಂದೆ 12 ನೇ ಶತಮಾನದಲ್ಲಿ ಶಿವಶರಣರು, ತಮ್ಮ ವಚನಗಳಲ್ಲಿ ಶರಣಸತಿ ಲಿಂಗಪತಿ ಎಂದು ಅನುಭವಿಸಿದ್ದಾರೆ ಎಂಬುದು ಇಲ್ಲಿ ಮನನೀಯ ಏಕೆಂದರೆ ಧರ್ಮದ ಸಾರ ಒಂದೇ ಆಗಿರುತ್ತದೆ.

ನಮ್ಮಾಳ್ವಾರರಿಗೆ ಶ್ರೀಮನ್ನಾರಾಯಣನ ದರ್ಶನವು ಆಯಿತೆಂದೇ ಅವರ ಪ್ರಬಂಧಗಳ ಸ್ಪಷ್ಟಪಡಿಸುತ್ತವೆ. ಎಷ್ಟು ವರ್ಷ ಇದ್ದರೋ ಆ ಯೋಗಿ ಆದರೆ ತನ್ನ ಇಡೀ ಬದುಕನ್ನು ಶ್ರೀಕೃಷ್ಣಾರ್ಪಣವೆಂದೇ ಮಾಡಿಕೊಂಡರು ನಮ್ಮಾಳ್ವಾರರು.

ಈ ಹೊತ್ತು ನಮ್ಮಾಳ್ವಾರರು ಮೋಕ್ಷ ಪಡೆದು ವೈಕುಂಠಕ್ಕೆ ಆಗಮಿಸಿದ ದಿನವನ್ನು "ಆಳ್ವಾರ್ ಮೋಕ್ಷ" ಎಂಬ ವಿಶೇಷ ಉತ್ಸವವಾಗಿ ಶ್ರೀವೈಷ್ಣವ ಆಲಯ ಮಠಗಳಲ್ಲಿ ಆಚರಿಸವುದು ಸಂಪ್ರದಾಯವಾಗಿದೆ.

**ವೈಶಾಖೇ ತು ವಿಶಾಖಾಯಾಮ್**
**ಕುರುಕಾಪುರಿ ಕಾರಿಜಂ।**
**ಪಾಂಡ್ಯದೇಶೇ ಕಲೇಹೆ ಆದವು**
**ಶಠಾರಿ ಸೈನ್ಯಪಂ ಭಜೇ॥**

**ವೃಕ್ಷೋ ರಕ್ಷತಿ ರಕ್ಷಿತಃ**

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**

# ಗಂಗೆಯೆನ್ನು ಸಾಕ್ಷಾತ್ಕರಿಸಿಕೊಂಡ ಶ್ರೀ ಸತ್ಯಸಂಧ ತೀರ್ಥರು

– ಶ್ರೀಧರ ರಾಯಸಂ

ವೈಷ್ಣವ ಸಿದ್ಧಾಂತ ಪ್ರಚಾರ ಆಸೇತು ಹಿಮಾಚಲ ಮಾಡಿ ಉತ್ತರಾಧಿಮಠದ ಮಹಾನ್ ಗುರುಗಳಾಗಿದ್ದ ಶ್ರೀ ಸತ್ಯಬೋಧ ತೀರ್ಥರಲ್ಲಿ ಸಮಗ್ರಶಾಸ್ತ್ರದ ಅಧ್ಯಯನ ಮಾಡಿ ಅವರಿಂದಲೇ ಸನ್ಯಾಸ ಸ್ವೀಕರಿಸಿ, ಉತ್ತರಾಧಿಕಾರಿಯಾಗಿ ಸರ್ವಜ್ಞಪೀಠ ಅಲಂಕರಿಸಿದ ಮಹಾನ್ ಗುರುಗಳು ಶ್ರೀ ಸತ್ಯಸಂಧತೀರ್ಥರು. ಶ್ರೀ ಸತ್ಯಬೋಧ ತೀರ್ಥರಿಂದ ಆಯುಷ್ಯ ಪಡೆದು ಗಂಗೆಯನ್ನು ಇವರು ಸಾಕ್ಷಾತ್ಕರಿಸಿಕೊಂಡು ಗಂಗೆಗೆ ಮರದ ಬಾಗಿಣ ನೀಡಿದ ಮಹಾನುಭಾವರು! ಗಯಾದಲ್ಲಿ ವಿಷ್ಣುಪಾದ ಮಂದಿರದ ಬೀಗವನ್ನು ತಮ್ಮ ದಿವ್ಯದೃಷ್ಟಿಯಿಂದಲೇ ಮುರಿದ ಮಹಿಮಾಪುರುಷರು. ಅದೇ ರೀತಿ ಪಂಢರಾಪುರದ ವಿಠಲ, ವೃದ್ಧ ವೇಷದ ಬ್ರಾಹ್ಮಣನಾಗಿ ಬಂದು, ಇವರಿಂದ ತಪ್ತ ಮುದ್ರಾಧಾರಣೆ ಸಹ ಮಾಡಿಸಿಕೊಂಡಿದ್ದು ಈಗ ಇತಿಹಾಸ. ಸಾರ್ವಕಾಲಿಕವಾದ ಮಠದ ಪಂಚಮುದ್ರಾಧಿಕಾರವನ್ನು ಸಹ ತಿಳಿಸಿದರು. ವಿಠಲದೇವರ ಮಹಿಮೆ ಯನ್ನು ತಿಳಿಸಿ ಉಡುಪಿಯಲ್ಲಿ ಕೋಟಿ ತುಳಸಿಯನ್ನು ಅರ್ಪಿಸಿ. ಶ್ರೀಕೃಷ್ಣನನ್ನು ಪೂಜಿಸಿ ಶ್ರೀಸತ್ಯಸಂಧರು ಅಷ್ಟ ಸಿದ್ಧಿ ಪಡೆದ ಮಹಾನ್ ಯತಿಗಳು.



ಭಾರತದೇಶವನ್ನು ಉದ್ದಗಲ ಸಂಚರಿಸಿ, ನೂರಾರು ಮಹಿಮೆಗಳನ್ನು ಪ್ರದರ್ಶಿಸಿ, ಸರ್ವ ವಿಧದ ಸಂಪತ್ತನ್ನು ಪಡೆದು, ಸಾವಿರಾರು ಸಾಧನ ಜೀವಿಗಳಿಗೆ ಅನು ಗ್ರಹವನ್ನು ಮಹಿಷಿಯಲ್ಲಿ ಮಾಡುತ್ತಿರುವ ಮಹಾನುಭಾವರು. ಹಾವೇರಿ ಮೊದಲಿನಿಂದಲೂ ಧಾರ್ಮಿಕ ವಾತಾವರಣದ ತಾಣ. ಸುತ್ತಲೂ ವರದಾ ನದಿ, ಆದಿಕೇಶವ ಮುಖ್ಯ ಪ್ರಾಣ ದೇವರ ಮತ್ತು ಅನೇಕ ಗುರುವರ್ಯರ ವಾಸ ಸ್ಥಾನವಾಗಿದೆ.

ಸುಂದರ ಪ್ರಕೃತಿ ಪರಿಸರದಲ್ಲಿ, ಹಾವೇರಿಯಲ್ಲಿ ವಾಸಿಸುತ್ತಿದ್ದ ಸಾತ್ವಿಕ ವಿದ್ವಾಂಸರಾಗಿದ್ದ ವೆಂಕಟಾಚಾರ್ಯರಿಗೆ ಮೂರು ಪುತ್ರರಿದ್ದರು. ಶ್ರೀನಿವಾಸಾಚಾರ್ಯರು, ಮಧ್ವಾಚಾರ್ಯರು, ಸುಬ್ಬಣ್ಣ ಆಚಾರ್ಯರು. ಮಧ್ಯ ಮಕ್ಕಳಾಗಿದ್ದ ಮಧ್ವಾಚಾರ್ಯರು, ತುಂಬಾ ಹರಿಭಕ್ತರು ತಪಸ್ವಿಗಳಾಗಿದ್ದರು.

ಮಧ್ವಾಚಾರ್ಯರ ಪತ್ನಿ ಭಾರತೀ ದೇವಿ, ಸಾಧನೆ ಮಾಡುತ್ತಾ ವೈಷ್ಣವ ಸಾಧ್ವಿಯಾಗಿದ್ದಳು. ಪುತ್ರ ಸಂತಾನವಾಗಲಿಲ್ಲವೆಂಬುದು ಆ ದಂಪತಿಗಳ ಕೊರಗಾಗಿತ್ತು. ಹರಿವಾಯುಗಳನ್ನು ಪ್ರಾರ್ಥಿಸಿ,ಅನೇಕ ವಿಧದ ಸೇವೆಯನ್ನು ಬಿಡದೇ ಮಾಡಿದರು. ಒಂದು ದಿನ ಬೆಳಗಿನ ಜಾವ, ಶ್ರೀ ನರಸಿಂಹ ದೇವರು ಇವರ ಸ್ವಪ್ನದಲ್ಲಿ ಕಾಣಿಸಿಕೊಂಡು ಗಂಗಾ ನದಿ ಸನ್ನಿಧಾನ ಕಾಶಿ, ಪ್ರಯಾಗ ಪುಷ್ಕರ, ಬದರಿ ಕ್ಷೇತ್ರಗಳ ಸನ್ನಿಧಾನ ಬಿದರಹಳ್ಳಿ ಅಶ್ವತ್ಥವೃಕ್ಷ (ಗದಗ ಜಿಲ್ಲೆ) ದೇವರ ಸೇವೆಯನ್ನು ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಿ, ಸೇವೆ ಮಾಡಿದರೆ ಪುತ್ರ ಸಂತಾನ ಆಗುವುದೆಂದು ಆದೇಶವಾಯಿತು. ಶ್ರೀ ವಾದಿರಾಜರು ತಮ್ಮ ತೀರ್ಥ ಪ್ರಬಂಧ ಕೃತಿಯಲ್ಲಿ ಬಿದರಹಳ್ಳಿ ಅಶ್ವತ್ಥನಾರಾಯಣನನ್ನು ಭಕ್ತಿಯಿಂದ ಸ್ತುತಿಸಿದ್ದಾರೆ.

ಸ್ವಪ್ನಾದೇಶದಂತೆ, ದಂಪತಿಗಳು ಪಿಪ್ಪಲ ವೃಕ್ಷದಲ್ಲಿರುವ ಶ್ರೀ ನರಸಿಂಹ ದೇವರನ್ನು ಉಪಾಸನೆ ಮಾಡಿದರು.

ಕೆಲವು ದಿನಗಳ ನಂತರ ದಂಪತಿಗಳ ಸ್ವಪ್ನ ದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳು ಇವರಿಗೆ ಮಂತ್ರಾಕ್ಷತೆ, ಮಾವಿನ ಹಣ್ಣು ನೀಡಿ ಅನುಗ್ರಹಿಸಿದರು. ಮಹಾಸುಪುತ್ರ ಜನಿಸುವನೆಂದು ತಿಳಿಸಿದರು. ಹಾವೇರಿಗೆ ವಾಪಸ್ ಬಂದ ಈ ದಂಪತಿಗಳು, ನಿರಂತರ ಶ್ರೀರಾಮಚಂದ್ರ ದೇವರ ಸೇವೆಯನ್ನು ಮಾಡಿದರು.

ಭಾರತೀದೇವಿ ಸ್ವಲ್ಪ ಕಾಲದ ನಂತರ ಗರ್ಭಿಣಿಯಾಗಿ, ಉತ್ತಮ ಮುಹೂರ್ತದಲ್ಲಿ ಸುಪುತ್ರನಿಗೆ ಜನ್ಮ ವಿತ್ತಳು. ಮಗನಿಗೆ ಸಂತೋಷದಿಂದ ಜಾತ ಕರ್ಮ, ನಾಮಕರಣ ಮಾಡಿ "ರಾಮ ಚಂದ್ರ" ಎಂದು ಹೆಸರಿಟ್ಟರು. ನಂತರ 7 ವರ್ಷಕ್ಕೆ ಉಪನಯನ ಸಂಸ್ಕಾರ ಮಾಡಿ, "ರಾಮಚಂದ್ರನಿಗೆ ವೈಷ್ಣದ ದೀಕ್ಷೆ ನೀಡಿದ ಸಂದರ್ಭ ಅಮೋಘವಾಗಿತ್ತು! ಕಾವ್ಯ, ವ್ಯಾಕರಣ, ನ್ಯಾಯಶಾಸ್ತ್ರದ ಅಧ್ಯಯನ ಪ್ರಾರಂಭಿಸಿದ ರಾಮಚಂದ್ರ ಶೀಘ್ರದಲ್ಲೇ ತನ್ನ ಪ್ರೌಢಿಮೆಯನ್ನು ತೋರಿಸತೊಡಗಿದ.

ವೇದಾಂತಾದಿಗಳ ಅಧ್ಯಯನಕ್ಕೆ ಹತ್ತಿರದ ಸವಣೂರಿನಲ್ಲಿ ಶ್ರೀಸತ್ಯಬೋಧ ತೀರ್ಥರಿಗೆ ರಾಮಚಂದ್ರನನ್ನು ಒಪ್ಪಿಸಲು ಇವರ ತಂದೆ ಬಂದರು. ಶ್ರೀಸತ್ಯಬೋಧ ತೀರ್ಥರ ಸನ್ನಿಧಿಯಲ್ಲಿ ರಾಮಚಂದ್ರ ಶ್ರೀಮನ್ನ್ಯಾಯಸುಧಾದಿ ಗ್ರಂಥಗಳನ್ನು ಪೂರ್ತಿ ಅಧ್ಯಯನ ಮಾಡಿದರು.

ಶಿಷ್ಯನ ಪ್ರತಿಭೆ,ಪಾಂಡಿತ್ಯ ನಯ, ವಿನಯ, ತೇಜಸ್ಸು, ಪರಿಶ್ರಮವನ್ನು ಕಂಡು ಗುರುಗಳು ಆನಂದಪಟ್ಟರು. ರಾಮಚಂದ್ರನಿಗೆ ಸೇತುನಾರಾಯಣಾಚಾರ್ಯರ ಮಗಳಾದ ಸುಕನ್ಯಾ ಎಂಬ ಕನ್ಯಾಮಣಿಯನ್ನು ಕೊಟ್ಟು ಇವರ ತಂದೆ, ತಾಯಿ ವಿವಾಹ ಮಾಡಿಸಿದರು. ಶ್ರೀಸತ್ಯಬೋಧ ತೀರ್ಥರ ದಿವ್ಯ ಕೃಪೆಗೆ ಪಾತ್ರರಾದ ರಾಮ ಚಂದ್ರ, ಅನೇಕ ಶಾಸ್ತ್ರಗಳ ಅಧ್ಯಯನ, ಪಾಂಡಿತ್ಯದ ಪ್ರಸಿದ್ಧಿ ಹೊಂದಿ, ಸರ್ವಜ್ಞ ಪೀಠ ಮಹಾಸಂಸ್ಥಾನ ಆಳಲು ಸಮರ್ಥ ಎಂದು ಗುರುಗಳು ನಿರ್ಧರಿಸಿದರು.

ಆದರೇ ರಾಮಚಂದ್ರನಿಗೆ ಆಯುಷ್ಯ ಅಲ್ಪವಾಗಿತ್ತು! ಶ್ರೀಸತ್ಯಬೋಧತೀರ್ಥರು, ಆಯುರ್ಧಾನವನ್ನು ಮಾಡಿ ರಾಮಚಂದ್ರನಿಗೆ ಸನ್ಯಾಸಾಶ್ರಮ ನೀಡಿ,ಶುಭ ಮುಹೂರ್ತದಲ್ಲಿ ಸತ್ಯಸಂಧತೀರ್ಥ ಎಂದು ನಾಮಕರಣ ಮಾಡಿದರು. ದಿನೇ ದಿನೇ ಸತ್ಯಸಂಧತೀರ್ಥರ ಪ್ರತಿಭೆ, ಪ್ರಕಾಂಡ ಪಾಂಡಿತ್ಯ, ಪೂಜೆ, ಪಾಠ, ಪ್ರವಚನ, ವಾಕ್ಯಾರ್ಥ ಅಸಾಧಾರಣವಾಗಿತ್ತು.

ಶ್ರೀಸತ್ಯಬೋಧತೀರ್ಥರು ಸಂಪೂರ್ಣ ಸಂಸ್ಥಾನವನ್ನು ಶ್ರೀಸತ್ಯಸಂಧ ತೀರ್ಥರಿಗೆ ವಹಿಸಿ ಕೊಟ್ಟು, ಸವಣೂರಿನಲ್ಲಿ ಶೋಭನಕೃತ್ ಸಂವತ್ಸರ ಫಾಲ್ಗುಣ ಮಾಸ ಕೃಷ್ಣ ಪಕ್ಷ ಪಾಡ್ಯ ಸೋಮವಾರ ಉತ್ತರಾ ನಕ್ಷತ್ರದಲ್ಲಿ ಬೃಂದಾವನಸ್ಥರಾದರು. ನಂತರ ಶ್ರೀ ಸತ್ಯಸಂಧ ತೀರ್ಥರು ಬಹು ವೈಭವದಿಂದ ತಮ್ಮ ಗುರುಗಳ ಆರಾಧನೆ ನೆರವೇರಿಸಿದರು.

ಸವಣೂರಿನಿಂದ ಶ್ರೀಸತ್ಯಸಂಧ ತೀರ್ಥರು, ದಿಗ್ವಿಜಯ ಮಾಡಿ ಅನೇಕ ಭಕ್ತರನ್ನು ಉದ್ಧರಿಸಿ, ತಮ್ಮ ಮಹಿಮೆಗಳನ್ನು ಪ್ರದರ್ಶಿಸಿ ವೈಷ್ಣವ ಸಿದ್ಧಾಂತ ಪ್ರಚಾರ ಮಾಡಿದ ಮಹಾನುಭಾವರು. ಅಖಿಲ ಭಾರತ ಸಂಚಾರ ಮಾಡಿ ಮಧ್ವ ಸಿದ್ಧಾಂತದ ಪ್ರಚಾರದ ಜೊತೆಗೆ ಶಿಷ್ಯ. ಸಂಪತ್ತು ಪಡೆದ ಮಹನೀಯರು.

ವರಾಹರೂಪಿ ಪರಮಾತ್ಮನಿಂದ ಹುಟ್ಟಿದ ತುಂಗಾ ನದಿಯ ಪಶ್ಚಿಮವಾಹಿನಿಯ ತೀರ ಪ್ರದೇಶದ ಪವಿತ್ರ ಕ್ಷೇತ್ರ **"ಮಹಿಷಿ"** (ತೀರ್ಥಹಳ್ಳಿ ಹತ್ತಿರ) ಅಶ್ವತ್ಥ ನಾರಾಯಣ ಸನ್ನಿಧಾನದಲ್ಲಿ ಸೃಷ್ಟಿ ಸೌಂದರ್ಯಗಳ ಸುಂದರ ತಾಣವಾಗಿದೆ. ಶ್ರೀಸತ್ಯಸಂಧರು, ಉಡುಪಿಯಲ್ಲಿ ಶ್ರೀಕೃಷ್ಣನನ್ನು ಪೂಜೆ ಮಾಡಿ ಅಷ್ಟ ಮಠಾಧೀಶರಿಂದ ಗೌರವ ಸ್ವೀಕರಿಸಿ, ಶ್ರೀಕೃಷ್ಣನಿಗೆ ಕೋಟಿ ತುಳಸಿಯನ್ನು ಅರ್ಪಿಸಿದ ಮಹಾನ್ ಯತಿ ಶ್ರೇಷ್ಠರು.

ಹಾವೇರಿ ಕೃಷ್ಣಾಚಾರ್ಯರಿಗೆ ತಮ್ಮ ಉತ್ತರಾಧಿಕಾರಿಯಾಗಿ ಸನ್ಯಾಸ ಆಶ್ರಮ ನೀಡಿ ಶ್ರೀಸತ್ಯಸಂಧರು, ಅವರಿಗೆ ಸತ್ಯವರ ತೀರ್ಥ ಎಂದು ನಾಮಾಂಕಿತ ಮಾಡಿ, ತಮ್ಮ ಪ್ರಯಾಣ ಮಹಿಷಿಗೆ ಮಾಡಿದರು.

ದಾರಿಯಲ್ಲಿ ಶ್ರೀ ಸತ್ಯಸಂಧರು ಅನೇಕ ಭಕ್ತರಿಗೆ ತಮ್ಮ ಮಹಿಮೆ ತೋರಿಸುತ್ತಾ ತುಂಗಾ ನದಿ ತೀರದ ಮಹಿಷಿಗೆ ಬಂದರು. ಅನೇಕ ಕಾಲ ಪೂಜೆ ನೆರವೇರಿಸಿ, ಯೋಗ ಧ್ಯಾನದಿಂದ ಶ್ರೀ ಸತ್ಯಸಂಧತೀರ್ಥರು, ಕ್ರಿ.ಶ. 1794 ಆನಂದನಾಮಸಂವತ್ಸರ, ಜೇಷ್ಠ ಶುದ್ಧ ಬಿದಿಗೆ ವೃಂದಾವನ ಪ್ರವೇಶ ಮಾಡಿದ ಮಹಾನ್‌ಯತಿಗಳು.

ಶ್ರೀಸತ್ಯವರತೀರ್ಥರು, ತಮ್ಮ ಗುರುಗಳಾದ ಶ್ರೀಸತ್ಯಸಂಧತೀರ್ಥರ ಆರಾಧನೆ ಮೂರು ದಿನಗಳವರೆಗೆ ನೆರವೇರಿಸಿದರು. ಶ್ರೀಸತ್ಯಸಂಧತೀರ್ಥರ ದಿವ್ಯತೇಜಸ್ಸು, ಸನ್ನಿಧಾನ, ಭಕ್ತರಿಗೆ ಕಲ್ಪವೃಕ್ಷ ಕಾಮಧೇನುವಾಗಿದೆ.

### ಶ್ರೀ ಸತ್ಯಸಂಧತೀರ್ಥರ ಕೃತಿಗಳು :

ಪುರುಷಸೂಕ್ತ ವ್ಯಾಖ್ಯಾನ, ಘಮಕ ಸೂಕ್ತ ವ್ಯಾಖ್ಯಾನ, ವಿಷ್ಣುಸಹಸ್ರನಾಮ ವ್ಯಾಖ್ಯಾನ ಪ್ರಮುಖ ಕೃತಿಗಳು, ಸಂಸ್ಕೃತದಲ್ಲಿ ಆನಂದತೀರ್ಥಾಚಾರ್ಯರು ಬರೆದ **"ಶ್ರೀ ಸತ್ಯಸಂಧ ವಿಜಯ"** ಕಾವ್ಯವಿದೆ.

ಶ್ರೀ ಸತ್ಯಸಂಧತೀರ್ಥರನ್ನು ಕುರಿತು ಜಗನ್ನಾಥದಾಸರು, ಖಗವರ ಧ್ವಜದಾಸರು, ಗುರುಗೋವಿಂದದಾಸರು, ಮುಂತಾದವರು ಕೀರ್ತನೆ ರಚಿಸಿ ಭಕ್ತಿಯಿಂದ ಕೊಂಡಾಡಿದ್ದಾರೆ.



# ಸರಸ್ವತಿ ಪುಷ್ಕರ ಪರ್ವಕಾಲ

– ಡಾ|| ಸುಮನ ಬದರೀನಾಥ್
94820 94855

ಸನಾತನ ಹಿಂದೂ ಸಂಸ್ಕೃತಿಯಲ್ಲಿ, ಪರಂಪರೆಯಲ್ಲಿ ನದೀ ಸ್ನಾನಕ್ಕೂ, ನದೀಪೂಜೆಗೂ ಬಹು ಮಹತ್ವವಿದೆ. ಅದರ ಫಲವೇ ನದೀ ಉತ್ಸವಗಳು. ನದಿಗಳನ್ನು ಜಲದೇವತೆ ಎಂದೇ ಭಾವಿಸಲಾಗಿದೆ. ಇಂತಹ ನದೀ ಉತ್ಸವಗಳಲ್ಲಿ ಪುಷ್ಕರ ಪರ್ವಕಾಲವು ಪ್ರಸಿದ್ಧವೂ, ಪ್ರಾಚೀನವೂ ಆದದು. ಈ ಪುಷ್ಕರ ಪರ್ವಕಾಲ ರಾಶಿಚಕ್ರದಲ್ಲಿ ಗುರು ಗ್ರಹದ ಚಲನೆಯನ್ನು ಅವಲಂಬಿಸಿದೆ. ರಾಶಿಚಕ್ರದಲ್ಲಿ ಹನ್ನೆರಡು ರಾಶಿ ಗಳಿವೆ. ಗುರುಗ್ರಹ ಭಾರತದ ಹನ್ನೆರಡು ಪುಣ್ಯ ನದಿಗಳಲ್ಲಿ ಒಂದೊಂದು ರಾಶಿಯಲ್ಲಿದ್ದಾಗ ಒಂದೊಂದು ಪುಣ್ಯನದಿಗೆ ಪುಷ್ಕರ ಪರ್ವಕಾಲ ಉಂಟಾಗುತ್ತದೆ. ಮೇಷದಲ್ಲಿ ಗಂಗೆ, ಸಿಂಹದಲ್ಲಿ ಗೋದಾವರಿ, ತುಲಾ ದಲ್ಲಿ ಕಾವೇರಿ ಮುಂತಾಗಿ ಗುರುಗ್ರಹದೊಡನೆ ಪುಷ್ಕರ ಎಂಬ ಜಲ ದೇವ ತೆಯೂ ಅದೇ ರಾಶಿಯನ್ನು ಪ್ರವೇಶಿಸುತ್ತಾನೆ. ಇದೇ ಪುಷ್ಕರ ಪರ್ವ ಕಾಲ. ಗುರುಗ್ರಹ ಒಂದು ರಾಶಿಯಲ್ಲಿ ಒಂದು ವರ್ಷವಿರುತ್ತಾನೆ. ಹೀಗಾಗಿ ಪುಷ್ಕರ ಪರ್ವಕಾಲ ಆ ಪವಿತ್ರ ನದಿಗೆ ಒಂದು ವರ್ಷಕಾಲ ವಿರುತ್ತದೆ. ಇದೀಗ ಮೇ 15 ರಂದು ಗುರುಗ್ರಹ ಮತ್ತು ಪುಷ್ಕರರು ಮಿಥುನ ರಾಶಿಯನ್ನು ಪ್ರವೇಶಿಸುವುದರಿಂದ ಸರಸ್ವತೀ ನದಿಗೆ ಪುಷ್ಕರ ಪರ್ವಕಾಲ ಬಂದೊದಗಿದೆ.

ಸರಸ್ವತೀ ನದಿ ವೇದಕಾಲದ ನದಿ. ವೈದಿಕ ಋಷಿಮುನಿಗಳು ಸರ ಸ್ವತಿಗೆ ಎಲ್ಲ ನದೀ ದೇವತೆಗಳಿಗಿಂತ ಉನ್ನತಸ್ಥಾನ ಕೊಟ್ಟಿದ್ದಾರೆ. ಋಗ್ವೇದದಲ್ಲಿ 99 ಬಾರಿ ನದಿಗಳ ಉಲ್ಲೇಖ ಬರುತ್ತದೆ. ಅದರಲ್ಲಿ 65 ಸಲ ಸರಸ್ವತಿಯ ಉಲ್ಲೇಖವಿದೆ. ಇಷ್ಟೊಂದು ಸಲ ಇಷ್ಟೊಂದು ವ್ಯಾಪಕ ವಾಗಿ ಉಲ್ಲೇಖಗೊಂಡ ಬೇರೊಂದು ನದಿ ವೇದಗಳಲ್ಲಿ ಇಲ್ಲ. ಅಂಬಿ ತಮೇ, ನದೀತಮೇದೇವೀತಮೇ ಎಂದು ವೇದಗಳಲ್ಲಿ ಸರಸ್ವತಿ ನದಿ ಪ್ರಶಂಸಿಸಲ್ಪಟ್ಟಿದ್ದಾಳೆ. ಸರಸ್ವತೀ ನದೀ ತಟದಲ್ಲಿ ಹಲವಾರು ಪವಿತ್ರ ಪುಣ್ಯಕ್ಷೇತ್ರಗಳಿದ್ದವು. ಅವುಗಳು ಸ್ಕಂಧಪುರಾಣ,ಪದ್ಮಪುರಾಣ, ಮಹಾ ಭಾರತ, ದೇವೀಭಾಗವತ, ಸರಸ್ವತೀಪುರಾಣ ಮುಂತಾದ ಪ್ರಾಚೀನ ಗ್ರಂಥಗಳಲ್ಲಿ ಬಹುವಾಗಿ ವರ್ಣಿಸಲ್ಪಟ್ಟಿವೆ. ಸರಸ್ವತೀ ನದೀ ತೀರದಲ್ಲಿ ವಸಿಷ್ಠ ವಿಶ್ವಾಮಿತ್ರರಂತಹ ಮಹಾ ಋಷಿಗಳ ಆಶ್ರಮಗಳಿದ್ದವು. ಬಹು ಸಂಖ್ಯಾಕವಾಗಿ ಯಜ್ಞಗಳು ಆಚರಿಸಲ್ಪಡುತ್ತಿದ್ದವು ಸರಸ್ವತೀ ನದೀ ತೀರ ದಲ್ಲಿ ವಾಸಮಾಡುವುದರಿಂದ ವಿದ್ಯೆ, ತಪಸ್ಸು, ಯಶಸ್ಸು, ಜ್ಞಾನ ದೊರೆ ಯುತ್ತವೆ ಎಂದು ಹೇಳಲಾಗಿದೆ. ಹೀಗೆ ಸರಸ್ವತಿ ಅತ್ಯಂತ ಪವಿತ್ರನದಿ ಎಂದು ಪ್ರಾಚೀನ ಗ್ರಂಥಗಳು ಸಾರುತ್ತಿವೆ.

ಸರಸ್ವತೀ ನದಿ ಬ್ರಹ್ಮನ ಕಮಂಡಲದಿಂದ ಜನಿಸಿದಳೆಂದು ಪುರಾಣಗಳಲ್ಲಿ ಉಲ್ಲೇಖವಿದೆ. ಸರಸ್ವತೀ ನದಿಯ ಉಗಮಸ್ಥಾನ ಹಿಮಾ ಲಯ ಪರ್ವತದ ಪ್ಲಕ್ಷ ಪ್ರಸ್ರವಣ ಎಂದು ಹೇಳುತ್ತಾರೆ. ಬಹು ವಿಶಾಲ ವಾಗಿ ಹರಿದು ಸಮುದ್ರ ಸಂಗಮಿಸುತ್ತಿದ್ದ ಸರಸ್ವತೀನದೀ ಇದೀಗ ಬದರೀ ಕ್ಷೇತ್ರದಿಂದ 3 ಕಿ.ಮೀ. ದೂರದಲ್ಲಿರುವ ಮಾನಾ ಗ್ರಾಮದಲ್ಲಿ ಹಿಮಾಲಯದ ಹೆಬ್ಬಂಡೆಗಳ ನಡುವಿನಿಂದ ಉಕ್ಕಿ ಹರಿಯುತ್ತಾಳೆ. ಮಾನಾ ಭಾರತದೇಶದ ಮೊದಲ ಹಾಗೂ ಕೊನೆಯ ಗ್ರಾಮ. ಪೂರ್ವ ದಲ್ಲಿ ಇದಕ್ಕೆ ಮಣಿಭದ್ರಪುರ ಎಂಬ ಹೆಸರಿತ್ತು. ಇದೇ ಸರಸ್ವತೀಯ ಉಗಮ ಸ್ಥಾನ. ಬಹು ರಭಸದಿಂದ ಚಿಮ್ಮಿ ಹರಿಯುವ ಸರಸ್ವತಿ, ಸ್ವಲ್ಪ ದೂರವೇ ಹರಿದು ಕೇಶವ ಪ್ರಯಾಗ ಎಂಬಲ್ಲಿ ಅಲಕನಂದೆಯೊಡನೆ ಸಂಗಮಿಸುತ್ತಾಳೆ. ಗಂಗೋತ್ರಿ, ಯಮುನೋತ್ರಿಗಳಂತೆ ಸರಸ್ವತೀ ನದಿಯ ಉಗಮ.

ಸ್ಥಾನವೂ ಅತಿ ಪವಿತ್ರ ಇಲ್ಲಿ ಸರಸ್ವತೀ ದೇವಿಯ ಸುಂದರವಾದ ಸಣ್ಣ ದೇಗುಲವೊಂದಿದೆ. ಹನ್ನೆರಡು ವರ್ಷಗಳಿಗೊಮ್ಮೆ ಗುರುಗ್ರಹ ಮಿಥುನರಾಶಿಗೆ ಬಂದಾಗ ಇಲ್ಲಿ ಸರಸ್ವತೀಪುಷ್ಕರ ವಿಜೃಂಭಣೆಯಿಂದ ನಡೆಯುತ್ತದೆ. ಭಾರತದಲ್ಲಿ ಬೇರೆಲ್ಲೂ ಸರಸ್ವತೀ ನದಿ ಪ್ರಕಟವಾಗಿ ಹರಿಯುವುದಿಲ್ಲ. ಅದಕ್ಕಾಗಿ ಈ ಪ್ರದೇಶಕ್ಕೆ ಬಹು ಮಹತ್ವ. ಇಲ್ಲಿ ಭೀಮ ಪೂಲ್, ವ್ಯಾಸಗುಹ, ಗಣೇಶಗುಹ, ಸ್ವರ್ಗಾರೋಹಿಣಿ ಮುಂತಾದ ಪವಿತ್ರ ಸ್ಥಳಗಳಿವೆ.

ಸರಸ್ವತಿ ಗುಪ್ತಗಾಮಿನಿ ಎಂದೇ ಪ್ರಸಿದ್ಧರಾಗಿದ್ದಾಳೆ. ಪ್ರತಿ ದಿನವೂ ಸ್ನಾನ ಸಮಯದಲ್ಲಿ ಸ್ಮರಿಸಲ್ಪಡುವ ಸಪ್ತಗಂಗೆಯರಲ್ಲಿ ಇವಳೂ ಒಬ್ಬಳು. ವೇದಗಳ ಕಾಲದಲ್ಲಿ ಬಹು ರಭಸದಿಂದ ತುಂಬಿ ಹರಿಯುತ್ತಿದ್ದ ಈ ನದಿ ಪುರಾಣಗಳ ರಚನೆಯ ವೇಳೆಗೆ ಅಲ್ಲಲ್ಲಿ ಅದೃಶ್ಯಗಳಾಗಿ ಗುಪ್ತಗಾಮಿನಿಯಾಗಿ ಕಾರಣಾಂತರಗಳಿಂದ ಹರಿಯಲಾರಂಭಿಸಿದಳು. ಇದೀಗ ಬದರಿಯ ಬಳಿಯ ಮಾನಾಗ್ರಾಮದಲ್ಲಿ ಮಾತ್ರ ಪ್ರಕಟವಾಗಿ ಹರಿಯುತ್ತಾಳೆ. ಹಿಮಾಲಯದಲ್ಲಿ ತನ್ನ ಉಗಮಸ್ಥಾನದಲ್ಲಿ ಬಹು ರಭಸದಿಂದ ಹರಿಯುವ ನದಿ ಬಹು ಶಬ್ದ ಮಾಡುತ್ತಿತ್ತು. ಅಲ್ಲಿ ವ್ಯಾಸಗುಹ, ಗಣೇಶ ಗುಹೆಗಳಲ್ಲಿ ಮಹಾಭಾರತ ಲೇಖನ ನಡೆಯುತ್ತಿತ್ತು. ಸರಸ್ವತೀಯ ಶಬ್ದದಿಂದಾಗಿ ವ್ಯಾಸರು ಹೇಳಿದುದು ಗಣೇಶನಿಗೆ ಸರಿಯಾಗಿ ಕೇಳಿಸುತ್ತಿರಲಿಲ್ಲ. ಎಷ್ಟು ಪ್ರಾರ್ಥಿಸಿದರೂ ಸರಸ್ವತೀ ಶಬ್ದ ಕಡಿಮೆ ಮಾಡಲಿಲ್ಲ. ಆದರಿಂದ ವ್ಯಾಸರು ಕುಪಿತರಾಗಿ ಸರಸ್ವತಿಗೆ ಗುಪ್ತಗಾಮಿನಿಯಾಗೆಂದು ಶಪಿಸಿದರು. ಸರಸ್ವತಿ ಅದೃಶ್ಯಳಾಗಿ ಗುಪ್ತಗಾಮಿನಿಯಾಗಿ ಹರಿಯಲಾರಂಭಿಸಿದಳು ಎಂದು ಗ್ರಂಥಗಳಲ್ಲಿ ಉಲ್ಲೇಖವಿದೆ.

ಸರಸ್ವತೀ ಪುಷ್ಕರದ ಸಮಯದಲ್ಲಿ ಸ್ನಾನಮಾಡಬಹುದಾದ ಮತ್ತೊಂದು ಕ್ಷೇತ್ರವೆಂದರೆ ಉತ್ತರ ಪ್ರದೇಶದಲ್ಲಿರುವ ಪ್ರಯಾಗ. ಇಲ್ಲಿ ಸರಸ್ವತಿ ಗುಪ್ತಗಾಮಿನಿಯಾಗಿ ಗಂಗೆಯಮುನೆಯರೊಡನೆ ಸಂಗಮಿಸುತ್ತಾಳೆ. ಇದೇ ಪರಮ ಪವಿತ್ರ ತ್ರಿವೇಣೀ ಸಂಗಮ. ಎಲ್ಲರಿಗೂ ಬಹು ದೂರದ ಬದರಿಯ ಬಳಿಯ ಮಾನಾಗ್ರಾಮಕ್ಕೆ ಹೋಗಲು ಸಾಧ್ಯವಿಲ್ಲ. ಅಂತಹವರು ಪ್ರಯಾಗಕ್ಷೇತ್ರದಲ್ಲಿ ಸ್ನಾನಮಾಡಿ ಸರಸ್ವತೀ ಸ್ನಾನ ಮಾಡಿದೆವೆಂದು ತೃಪ್ತಿಪಡಬಹುದು.

ತಿರುಪತಿ ಬೆಟ್ಟದ ಮೇಲಿರುವ ಸ್ವಾಮಿ ಪುಷ್ಕರಣಿ ತೀರ್ಥ ರಾಜದಲ್ಲಿ ಸದಾಕಾಲದಲ್ಲಿಯೂ ಸರಸ್ವತಿ ನದಿಯ ಸನ್ನಿಧಾನವಿದೆ. ಶ್ರೀ ಮದ್ಭಾಗವತದಲ್ಲಿ ಇದರ ಬಗ್ಗೆ ಉಲ್ಲೇಖವಿದೆ ಒಮ್ಮೆ ಪುಲಸ್ತ್ಯ ಋಷಿಗಳು ಸರಸ್ವತೀ ನದೀತೀರದಲ್ಲಿ ತಪಸ್ಸು ಮಾಡುತ್ತಿದ್ದರು. ಆ ಸಮಯದಲ್ಲಿ ಸರಸ್ವತೀ ನದಿ ಉಕ್ಕಿ ಹರಿದು ಪುಲಸ್ತ್ಯರು ಮಾಡುತ್ತಿದ್ದ ತಪಸ್ಸಿಗೆ ಭಂಗ ಬಂದು ಋಷಿಗಳು ಸರಸ್ವತೀ ನದಿಗೆ ಸಾಮಾನ್ಯ ನದಿಯಾಗುವಂತೆ ಶಪಿಸಿದರು. ಅವರನ್ನು ಸರಸ್ವತಿ ದೇವಿ ಬಂದು ಅನೇಕ ಬಾರಿ ಪ್ರಾರ್ಥಿಸಿದರೂ ಉಪಯೋಗವಾಗಲಿಲ್ಲ. ಕೊನೆಗೆ ಸರಸ್ವತೀ ದೇವಿ ತಪಸ್ವಿಗಳಿಗೆ ಮುಖ್ಯವಾದ ಸಹನಾಗುಣ ಇಲ್ಲದೆ ಆಸುರೀ ಸ್ವಭಾವದಿಂದ ನನಗೆ ಶಾಪ ಕೊಟ್ಟಿದ್ದರಿಂದ ನಿಮಗೆ ಆಸುರೀ ಮಕ್ಕಳು ಹುಟ್ಟಲಿ ಎಂದು ಶಾಪವಿತ್ತಳು. ಮತ್ತೆ ಅವರ ಪ್ರಾರ್ಥನೆಯಿಂದ ಶಾಂತಳಾಗಿ ಮೂರನೇ ಮಗ ದೇವ ಸ್ವಭಾವದವನಾಗಲಿ ಎಂದು ಉಪಶಾಪವಿತ್ತಳು. ಅದರ ಫಲವೇ ರಾವಣ, ಕುಂಭಕರ್ಣ, ವಿಭೀಷಣರ ಜನನ. ನಂತರ ಸರಸ್ವತಿ ಈ ಎಲ್ಲ ವೃತ್ತಾಂತವನ್ನು ಬ್ರಹ್ಮದೇವರಿಗೆ ತಿಳಿಸಿದಾಗ ಅವರು ಅದನ್ನು ಆಲಿಸಿ ನಿನಗೆ ವೆಂಕಟಾಚಲ ಪರ್ವತದಲ್ಲಿ ಮಹತ್ತರವಾದ ಸ್ಥಾನವನ್ನು ಕೊಡುತ್ತೇನೆಂದು ಹೇಳಿ ಅವಳ ಸನ್ನಿಧಾನ ಸ್ವಾಮಿಪುಷ್ಕರಣಿಯಲ್ಲಿರುವಂತೆ ಮಾಡಿದರು. ಅದರಿಂದ ಸ್ವಾಮಿ ಪುಷ್ಕರಣಿಯಲ್ಲಿ ಸರಸ್ವತಿಯ ಸನ್ನಿಧಾನ ಜಾಗೃತವಾಗಿದೆ ಎಂದು ಐತಿಹ್ಯವಿದೆ. ಹೀಗಾಗಿ ಸರಸ್ವತಿ ಪುಷ್ಕರ ಪರ್ವ ಕಾಲದಲ್ಲಿ ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ, ತೀರ್ಥ ಪ್ರೋಕ್ಷಣೆಗಳಿಂದ ಸರಸ್ವತೀ ನದಿಯಲ್ಲಿ ಸ್ನಾನಮಾಡಿದ ಪುಣ್ಯಫಲ ಲಭಿಸುವುದೆಂದು ಹೇಳಲಾಗಿದೆ.

ಈ ಬಾರಿ ಬೃಹಸ್ಪತಿ ಮತ್ತು ಪುಷ್ಕರರು ಮಿಥುನರಾಶಿಯನ್ನು ಮೇ 15 ರಂದು ಪ್ರವೇಶಿಸುತ್ತಾರೆ. ಅಂದಿನಿಂದ 12 ದಿನಗಳ ಕಾಲ ಮೇ 26 ರ ತನಕ ಆದಿಪುಷ್ಕರ ಎನಿಸಿ ಸ್ನಾನ ಮಾಡಲು ಅತ್ಯಂತ ಪ್ರಶಸ್ತ ಸಮಯವಾಗಿದೆ.

ಆಗ ಸಾಧ್ಯವಾಗದಿದ್ದರೆ ಬೃಹಸ್ಪತಿ ಒಂದು ವರ್ಷ ಮಿಥುನ ರಾಶಿಯಲ್ಲಿರುವುದರಿಂದ ಒಂದು ವರ್ಷದಲ್ಲಿ ಬೃಹಸ್ಪತಿ ಕರ್ಕರಾಶಿಯನ್ನು ಪ್ರವೇಶಿಸುವವರೆಗೂ ಸ್ನಾನಮಾಡಲು ಅವಕಾಶ ಉಂಟು. ಕಡೆಯ 12 ದಿನಗಳಿಗೆ ಅಂತ್ಯಪುಷ್ಕರ ಎಂದು ಕರೆಯುತ್ತಾರೆ. ಅದು ಪ್ರಶಸ್ತ ಸಮಯವೇ ಆಗಿದೆ.

ಸರಸ್ವತೀ ನದಿಯಲ್ಲಿ ಸ್ನಾನಮಾಡಿದ ಮೇಲೆ "ಬೃಹಸ್ಪತಿ ಸುರಾಧ್ಯಕ್ಷ ಸರ್ವದೇವ ನಮಸ್ಕೃತ ಗೃಹಾಣಾರ್ಘ್ಯಂ ಮಿಥುನಸ್ಥೋ ಭಾರ್ಯಾಯಾ ಸಹ" ಎಂದು ಮೂರುಬಾರಿ ಅರ್ಘ್ಯಪ್ರದಾನ ಮಾಡಬೇಕು. ಸಂಕಲ್ಪ ಪೂರ್ವಕವಾಗಿ ಸ್ನಾನ ಮಾಡಿದ ನಂತರ ಮಂಗಳ ದ್ರವ್ಯಗಳಿಂದ ನದಿಯನ್ನು ಪೂಜಿಸುವ ಸಂಪ್ರದಾಯವಿದೆ. ಈ ಸಮಯದಲ್ಲಿ ಸರಸ್ವತೀ ತೀರದಲ್ಲಿ ಮಾಡುವ ದಾನ, ಜಪ, ಪೂಜೆ, ಪಿತೃಕಾರ್ಯ ಗಳಿಗೆ ಅಕ್ಷಯ ಫಲ ಲಭಿಸುವುದು, ಬನ್ನಿ ತಿರುಪತಿಗೆ ಯಾತ್ರೆ ಬಂದು ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ ಮಾಡಿ, ಶ್ರೀನಿವಾಸನ ದರ್ಶನ ಮಾಡಿ ಅನಂತ, ಅಕ್ಷಯ ಪುಣ್ಯಫಲ ಪಡೆಯೋಣ. ಧನ್ಯರಾಗೋಣ ಸರಸ್ವತಿ ಪುಷ್ಕರ ಪರ್ವಕಾಲ ಆಚರಿಸೋಣ.



# ಅನ್ನಮಯ್ಯ - ಪುರಂದರ

**– ಎಸ್ ವೆಂಕಟೇಶಮೂರ್ತಿ**

ಪುರಂದರದಾಸರು (ಕ್ರಿ.ಶ. 1484-1564) ಕನ್ನಡ ನಾಡಿನಲ್ಲಿ ದಾಸಕೂಟಕ್ಕೆ ನಾಂದಿ ಹಾಡಿದರೆ, ಅನ್ನಮಾಚಾರ್ಯರು-ನೆರೆದವರೆಲ್ಲ ಭಾವಪರವಶರಾಗಿ ಕಲೆತು ಹಾಡುವಂತಹ ಭಜನೆಗಳನ್ನು ರಚಿಸಿ-ಭಜನ ಪದ್ಧತಿ ಕೂಟಕ್ಕೆ ನಾಂದಿ ಹಾಡಿದರು. ಇಬ್ಬರೂ ಸಂಗೀತ ರಸಿಕರು, ಸಂಗೀತ ಶಾಸ್ತ್ರಜ್ಞರು ಆದರೂ, ಸಂಗೀತವನ್ನು ಸಭೆಗಳಲ್ಲಿ ಪಾಮರ ರಸಿಕರ ಎದುರು ವಿನಿಕೆ ಮಾಡುವುದರಲ್ಲಿ ತೋರದೆ, ದೇವರೆದುರು ಒಪ್ಪಿಸುವ ಪದ್ಧತಿಯನ್ನು ಮೆಚ್ಚಿಕೊಂಡರು. ಸಾಹಿತ್ಯದ ಸೊಬಗು - ಭಾವದ ಬಂಧುರತೆ ಜನಮನವ ಮಿಡಿವ ಸರಳವಾದ ಸಂಗೀತ ಇವುಗಳ ತ್ರಿವೇಣೀ ಸಂಗಮವೇ ಅನ್ನಮಯ್ಯ, ಪುರಂದರರ ಸಂಕೀರ್ತನೆಗಳು.

**'ನನಗೆ ಇಂದಿನ ಕೂಳು ನೀಡಿ ನೀ ಧನ್ಯನಾದೆ.''** ಎಂದು ಸ್ವಾಭಿಮಾನಿಯಾದ ಶ್ರೀಪುರಂದರದಾಸರು ಸಂಶಯದ ಸುಳಿಯಲ್ಲಿ ಸಿಕ್ಕಿ ವ್ಯಾಪಾರದ ಲಾಭ-ನಷ್ಟಗಳಿಗೆ ಮೈಯೊಡ್ಡಿ ಸುಟ್ಟು ಸುಣ್ಣವಾಗಿದ್ದ, ಹದಿಹರಿಯದ ನಾಯಕರು ಶ್ರೀವ್ಯಾಸ ತೀರ್ಥರಿಂದ ಅನುಗ್ರಹಿಸಲ್ಪಟ್ಟು ಹರಿದಾಸ ದೀಕ್ಷೆ ಪಡೆದು, ಹರಿದಾಸರಾಗಿ, ಹರಿಯ ಕಾಲಿನ ಕಸವಾಗಿ, ಶ್ರೀ ಪುರಂದರದಾಸರಾಗಿ ಹರಿಯೊಡನೆ ವ್ಯಾಪಾರವೆಸಗಲು ಮುಂದಾದ ದಾಸರು ಏಳು ಗಿರಿಗಳ ನೇರಿ ನಿಂತು ನಾಲ್ಕು ಗೋಡೆಗಳ ಕತ್ತಲೆಯ ಗರ್ಭಗೃಹದಲ್ಲಿ ಹೊರಗಣ್ಣಿಗೆ ಅಗೋಚರವಾಗಿ ಜಗದ ವ್ಯಾಪಾರವ ಬಹು ಚಾಣಾಕ್ಷತೆಯಿಂದ ಎಸಗುತ್ತಿರುವ ಶ್ರೀವೆಂಕಟೇಶ್ವರನ ದರ್ಶನಾಕಾಂಕ್ಷಿತರಾದ ವ್ಯಾಪಾರಿ ಪುರಂದರರು ಗಿರಿಯಡೆಗೆ ಸರ ಸರ ನಡೆದರು, ಗಿರಿಯನ್ನೇರಿದರು.

ಶ್ರೀ ಹರಿಭಕ್ತಿಯ ಹಾಡು ಗಳನ್ನು ರಚಿಸಿದವರಲ್ಲಿ ತೆಲುಗಿನಲ್ಲಿ ಮೊದಗಲಿಗರು ಅನ್ನಮಾಚಾರ್ಯರಾದರೆ ಕನ್ನಡದಲ್ಲಿ ಆ ಸ್ಥಾನವನ್ನು ಮುಳುಬಾಗಿಲಿನ ಮಾಧ್ವ ಸಂಪ್ರದಾಯ ಮಠದ ಶ್ರೀಪಾದರಾಜರಿಗೆ ನೀಡಲಾಗಿದೆ. ಅವರಿಗಿಂತ ಮೊದಲು ಆದ್ಯರು ಕೆಲವರು ಪದಗಳನ್ನು ರಚಿಸಿದರೆಂದು ಹೇಳಲಾಗಿದೆ. ಆದರೆ ಪದಗಳನ್ನು ರಚಿಸಿ ತಾವೂ ದಂಡಿಗೆ ಬೆತ್ತ ಹಿಡಿದು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ತಕಧಿಮಿ ಎಂದು ನರ್ತಿಸುತ್ತಾ ಶ್ರೀಹರಿಯ ಭಕ್ತಿಯನ್ನು ಜನಪ್ರಿಯ ಗೊಳಿಸಿದವರು ಪುರಂದರದಾಸರು (1484-1564) ಸ್ವತಃ ಗುರುಗಳಾದ ಶ್ರೀ ವ್ಯಾಸತೀರ್ಥರೇ ದಾಸರೆಂದರೆ ಪುರಂದರದಾಸರಯ್ಯಾ ವಾಸುದೇವ ಕೃಷ್ಣನ ಸೂಸಿ ಪೂಜಿಸುವ ಎಂದು ಶ್ಲಾಘಿಸಿದ್ದಾರೆ ಎಂದ ಮೇಲೆ ಅವರು ದಾಸಶ್ರೇಷ್ಠರೆಂಬುದರಲ್ಲಿ ಎರಡು ಮಾತಿಲ್ಲ.

ಪುರಂದರದಾಸರು ಅನ್ನಮಾಚಾರ್ಯರಿಗಿಂತ ಬಹಳ ಚಿಕ್ಕವರು. ಆಗ ತಿರುಪತಿ ತಿಮ್ಮಪ್ಪನ ಬಳಿಗೆ ಹೋಗುವುದು ಪುರಂದರದಾಸರ ವಾಡಿಕೆ. ಅನ್ನಮಾಚಾರ್ಯರ ಮಗ ಪೆದ್ದ ತಿರುಮಲಾರ್ಚಾಯನ ಮಗ ಚಿನ್ನತಿರುವೇಂಗಡನಾಥ ಅಥವಾ ಚಿನ್ನಯ್ಯ ಬರೆದ **'ಅನ್ನಮಾಚಾರ್ಯ ಚರಿತಮು'** ಎಂಬ ಪುಸ್ತಕದಲ್ಲಿ ಪುರಂದರದಾಸರು ಅನ್ನಮಾಚಾರ್ಯರನ್ನು ಭೇಟಿಯಾದ ಉಲ್ಲೇಖವಿದೆ. ಹಾಗೆ ಒಮ್ಮೆ ಬಂದಾಗ ಹಣ್ಣು ಹಣ್ಣು ಮುದುಕರಾಗಿದ್ದ ಆ ವೇಳೆಗೆ ಸುಮಾರು 32,000 ಕೀರ್ತನೆಗಳನ್ನು ರಚಿಸಿದ್ದ ಅನ್ನಮಾಚಾರ್ಯರನ್ನು ಕುರಿತು ಕೇಳಿದ ಪುರಂದರದಾಸರು ಅವರನ್ನು ಕಂಡರಂತೆ ಆ ವೃದ್ಧಾಪ್ಯದಲ್ಲೂ ಅನ್ನಮಾಚಾರ್ಯರು ಕೈಯಲ್ಲಿ ತಂಬೂರಿ ಹಿಡಿದು ಕಾಲಿಗೆ ಗೆಜ್ಜೆಕಟ್ಟಿ ಶ್ರೀವೆಂಕಟೇಶ್ವರ ಸ್ವಾಮಿಯ ಮುಂದೆ ಕೀರ್ತನೆ ಹಾಡುತ್ತಾ ನರ್ತಿಸುತ್ತಿದ್ದುದನ್ನು ಕಂಡು 'ಸಾಕ್ಷಾತ್ ವೆಂಕಟೇಶ್ವರನನ್ನೇ ಕಂಡಂತಾಯಿತು' ಎಂದು ಪುರಂದರದಾಸರು ಭಾವಪರವಶವಾಗಿ ನುಡಿದಂತೆ, ತದನಂತರ ಅನ್ನಮಾಚಾರ್ಯರು ಪುರಂದರದಾಸರನ್ನು ಕನ್ನಡದ ದೇವರ ನಾಮಗಳನ್ನು ಹಾಡಲು ಕೇಳಿದರಂತೆ.

ಪುರಂದರದಾಸರು ಗೆಜ್ಜೆ ಕಟ್ಟಿದ ಕಾಲುಗಳನ್ನು ತಾಳಕ್ಕೆ ತಕ್ಕಂತೆ ಕುಣಿಸುತ್ತಾ ತಾವು ರಚಿಸಿದ ಪದಗಳನ್ನು ಹಾಡಿದಾಗ ಶ್ರೀವೆಂಕಟೇಶ್ವರನ ಮಹಾನ್ ಭಕ್ತ ಶಿರೋಮಣಿ ತೊಂಬತ್ತೈದು ವರ್ಷದ ಅನ್ನಮಾಚಾರ್ಯರು ಧಾರಾಕಾರವಾಗಿ ಆನಂದ ಭಾಷ್ಪಗಳನ್ನು ಸುರಿಸುತ್ತಾ ಎಂಥ ದಿವ್ಯಗಾನ! ಪಾಂಡು ರಂಗವಿಠಲನೇ ನನ್ನೆದುರು ನಿಂತಂತಿದೆ ಎಂದು ಉದ್ಗರಿಸಿದರಂತೆ. ಅನ್ನಮಾಚಾರ್ಯರಿಗೆ ಇನ್ನೊಬ್ಬ ಸಮಕಾಲೀನರು ಶ್ರೀಪಾದರಾಜರು. ಅವರು ಸಾಳುವ ನರಸಿಂಹ ಮಹಾಮಂಡಲೇಶ್ವರ ರಾಜಗುರುಗಳಾಗಿದ್ದರು. ಅವರು ಸಾಳುವ ನರಸಿಂಹನ ರಾಜಧಾನಿಯಾಗಿದ್ದ ಚಂದ್ರಗಿರಿಗೆ ಭೇಟಿ ಕೊಡುತ್ತಿದ್ದುದು ಸರ್ವೇ ಸಾಮಾನ್ಯ.

ಆಗ ತಿರುಪತಿ ಬೆಟ್ಟಕ್ಕೂ ಹೋಗುತ್ತಿದ್ದುದೂ ಉಂಟು. ಅವರೂ ಅನ್ನಮಾಚಾರ್ಯರನ್ನು ಭೇಟಿ ಮಾಡಿ ಭಕ್ತ ಕೀರ್ತನೆ ಹಾಗೂ ದೇವರ ನಾಮಗಳನ್ನು ಕುರಿತು ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದುದೂ ಉಂಟು ಎನ್ನಲಾಗಿದೆ. ಸಂಗೀತದಲ್ಲಿ ಅವರ ಪ್ರತಿಭೆಯನ್ನು ಜನ ಅರಿತುಕೊಂಡು ಅವರನ್ನು ಸಂಕೀತನಾಚಾರ್ಯ ಎಂದು ಕರೆದರು. ಅವರ ಸಂಗೀತ ಜ್ಞಾನವು ಅಪಾರವಾಗಿದ್ದು ಕ್ಷೇತ್ರಯ್ಯನಿಗೂ, ತ್ಯಾಗರಾಜರಿಗೂ ಅವರ ಸಂಗೀತ ಸಾಹಿತ್ಯ ಆದರ್ಶವಾಯಿತು, ಪ್ರೇರಕವಾಯಿತು, ಸ್ಫೂರ್ತಿಯನ್ನು ನೆರವನ್ನು ಚೌಕಟ್ಟನ್ನು ಒದಗಿತು. ಅನ್ನಮಾಚಾರ್ಯರನ್ನು ಕುರಿತು ಹಲವಾರು ಕಥೆಗಳು ಬಳಕೆಯಲ್ಲಿವೆ.

ತಮ್ಮ 16ನೇ ವಯಸ್ಸಿನಲ್ಲಿ ವೆಂಗಡದೊಡೆಯನು ಅವರಿಗೆ ಕನಸಿನಲ್ಲಿ ಕಾಣಿಸಿಕೊಂಡಂತೆ ''ಇಪ್ಪಡಿಟು ಕಲಗಂಟಿ''ಎಂಬ ಭೂಪಾಲರಾಗದ ಸಂದೇಹನು ಎಕ್ಕಡಲೇದು ಎಂಬ ಪಾಡಿರಾಗದ ಕೀರ್ತನೆಯನ್ನು ಒಡನೆ ರಚಿಸಿದರಂತೆ. ಅಲ್ಲಿಂದಲೇ ಅವರ ವಾಗ್ಗೇಯಕಾರರ ಜೀವನ ಮೊದಲಾಯಿತು ಎಂದು ವಿವರ. ಅನಂತರ ತಿರುವೆಂಗಡ ಬೆಟ್ಟಕ್ಕೆ ಹೋಗುವ ಮನಸ್ಸು ಮಾಡಿ ಹೊರಟು, ಬೆಟ್ಟದ ತಪ್ಪಲನ್ನು ಮುಟ್ಟಿ ಬೆಟ್ಟವೇರ ತೊಡಗಿದಂತೆ ಬೆಟ್ಟವನ್ನೇರುವಾಗ ಅವರ ಕಾಲುಗಳಲ್ಲಿ ಜೋಡು ಇದ್ದವು. ಮೆಟ್ಟಿಲುಗಳು ಕಠಿಣವಾಗಿ ಕಂಡವು ಆಯಾಸವಾಗಿ ಮಲಗಿದರು, ಅಲಮೇಲುಮಂಗಮ್ಮ ಕಾಣಿಸಿಕೊಂಡು ವೆಂಗಡ ಬೆಟ್ಟವು ವೈಕುಂಠಕ್ಕೆ ಸಮನಾದವೆಂದು ಬರಿಗಾಲಲ್ಲಿ ನಡೆದು ಅದನ್ನೇರಬೇಕೆಂದು ತಿಳಿಸಿದಂತೆ, ಅದರಂತೆ ಅನ್ನಮಾಚಾರ್ಯರು ಜೋಡುಗಳನ್ನು ಮೆಟ್ಟದೆ ಸರಾಗವಾಗಿ ಏಳು ಬೆಟ್ಟಗಳನ್ನು ಏರಿ ನಾರಾಯಣ ಗಿರಿಯ ಮೇಲೆ ವೆಂಕಟಯ್ಯನನ್ನು ಕಣ್ಣಾರೆ ಕಂಡರಂತೆ.

ಅನ್ನಮಾಚಾರ್ಯರ ಕೃತಿಗಳಲ್ಲಿ ವೈರಾಗ್ಯ ಕಾಣುವುದಾದರೂ ಅವರೇನು ಸನ್ಯಾಸಿಗಳಲ್ಲ ಗೃಹಸ್ಥರೇ. ಅವರಿಗೆ ಇಬ್ಬರು ಮಡದಿಯರು ಒಬ್ಬಳು ತಿಮ್ಮಕ್ಕ ಅಥವಾ ತಿರುಮಲ್ಲಮ್ಮ ಈಕೆಯು ಕವಿಯತ್ರಿ, ಸುಭದ್ರ ಕಲ್ಯಾಣವೆಂಬ ದ್ವಿಪದ ಕಾವ್ಯವನ್ನು ತೆಲುಗಿಲ್ಲಿ ರಚಿಸಿದ್ದಾಳೆ. ಇನ್ನೊಬ್ಬರು ಅಕ್ಕಲಮ್ಮ ಅಥವಾ ಅಕ್ಕಂಬ, ತಿಮ್ಮಕ್ಕನ ಮಗ ನರಸಿಂಹ ಕವಿ. ಅಕ್ಕಲಮ್ಮನ ಮಗ ಪೆದ್ದ ತಿರುಮಲಾಚಾರ್ಯ. ಇವರಲ್ಲದೆ ತಿರುಮಲಾಂಬ ಮತ್ತು ನರಸಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದರು. ಅನ್ನಮಾಚಾರ್ಯರ ಕಾಲದಿಂದಲೂ ದೇವರಿಗೆ ಸಂಕೀರ್ತನೆ ಸೇವೆ ಮಾಡುವ ಅವಕಾಶ ಅಥವಾ ಹಕ್ಕು ಈ ವಂಶದವರದ್ದೇ ಆಗಿದೆ ಈಗಲೂ ಗುಡಿಯಲ್ಲಿ ತಾಳ್ಳಪಾಕದವರ ಕೀರ್ತನೆಗಳನ್ನು ಏಕಾಂತ ಸೇವೆಯ ಸಂದರ್ಭದಲ್ಲಿ ಹಾಡುವವರು ಈ ಮನೆತನಕ್ಕೆ ಸೇರಿದವರೇ.

ಶ್ರೀ ವೈಷ್ಣವ ಪರಂಪರೆ ಸಿದ್ಧಾಂತವನ್ನು ಕೀರ್ತನೆ ಮತ್ತು ಭಜನೆಯ ಮೂಲಕ ಅತ್ಯಂತ ಜತನವಾಗಿ ಪಸರಿಸುತ್ತಲೇ 'ಪದಕವಿತಾ ಮಾರ್ಗದರ್ಶಿ'ಎಂಬ ಅಭಿದಾನಕ್ಕೆ ಇವರು ಭಾಜನರಾದರು. ಸಂತ ತ್ಯಾಗರಾಜರು ಕೂಡ ತಮ್ಮ ಭಜನೆಯನ್ನು ರಚಿತೋದಯದಿಂದಲೇ ಆರಂಭಿಸುತ್ತಿದ್ದಾರೇ ಎಂದು ಪ್ರತೀತಿ ಉಂಟು. ಅನ್ನಮಾಚಾರ್ಯರು ಭಜನಾ ಪದ್ಧತಿಗೆ ಮೂಲ ಪುರುಷರೆನ್ನಬಹುದು ತಾವು ರಚಿಸಿದ ಕೀರ್ತನೆಗಳನ್ನು ಸಮೂಹದಲ್ಲಿ ಹಾಡುವ ಕ್ರಮವನ್ನು ಅವರು ರೂಢಿಗೆ ತಂದರು.




ಪ್ರಾತಃಕಾಲದಲ್ಲಿ ನಿದ್ದೆಯಿಂದ ಎದ್ದು, ನಿತ್ಯಾಹ್ನಿಕಗಳನ್ನು ಮುಗಿಸಿಕೊಂಡು, ಶುದ್ಧನಾಗಿ, ತುಳಸೀ, ಹೂಗಳು, ಫಲಗಳು, ಪೂಜಾ ದ್ರವ್ಯಾದಿಗಳನ್ನು ಸಿದ್ಧಪಡಿಸಿಕೊಂಡು, ಶ್ರೀಆಂಜನೇಯ ಪಟವನ್ನಾಗಲೀ, ವಿಗ್ರಹಕ್ಕಾಗಲೀ ಯಥಾವಿಧಿಯಿಂದ ಪೂಜಿಸಬೇಕು. ಶ್ರೀಕೇಶವಾದಿ ನಾಮಗಳೊಂದಿಗೆ ಆಚಮನವನ್ನು ತೆಗೆದುಕೊಂಡ ನಂತರ, ಪ್ರಾಣಾಯಾಮವನ್ನು ಮಾಡಿ-ಸಂಕಲ್ಪವನ್ನು ಮಾಡಿಕೊಳ್ಳಬೇಕು.

ಘಂಟಾನಾದ ಮಾಡಿದ ನಂತರ ಪುನಃ ಪ್ರಾಣಾಯಾಮವನ್ನು ಮಾಡಿ,"ಶುಭತಿಥೌ - ಗೋತ್ರಸ್ಯ... ನಾಮಧೇಯಸ್ಯ -- ಧರ್ಮಪತ್ನಿ ಸಮೇತಸ್ಯ, ಸಹಕುಟುಂಬಸ್ಯ ಸಪುತ್ರಕಸ್ಯ, ಸಪೌತ್ರಕಸ್ಯ, ಸಭ್ರಾತೃಕಸ್ಯ ಸಬಾಂಧವಸ್ಯ ಸಪರಿವಾರಸ್ಯ ಕ್ಷೇಮ, ಸ್ಥೈರ್ಯ, ಧೈರ್ಯ,ವಿಜಯ ವೀರ್ಯ, ಅಭಯ,ಆಯುರಾರೋಗ್ಯ, ಐಶ್ವರ್ಯಾಭಿವೃದ್ಧ್ಯರ್ಥಂ, ಧರ್ಮಾರ್ಥಕಾಮಮೋಕ್ಷ, ಚತುರ್ವಿಧ ಫಲಪುರುಷಾರ್ಥ ಸಿದ್ಧ್ಯರ್ಥಂ, ಶ್ರೀಆಂಜನೇಯಸ್ವಾಮಿ ದೇವತಾ ಮುದ್ದಿಶ್ಯ ಶ್ರೀ ಆಂಜನೇಯಸ್ವಾಮಿ ದೇವತಾ ಪ್ರೀತ್ಯರ್ಥೇಷೋಡಶೋಪಚಾರ ಪೂಜಾಂ ಕರಿಷ್ಯೇ" ಎಂದು ಸಂಕಲ್ಪವನ್ನು ಮಾಡಿಕೊಂಡು ಕಲಶಾ ರಾಧನೆಯನ್ನು ಮಾಡಿ ಕಲಶದ ಮೇಲೆ ಕೈಯನ್ನಿರಿಸಿ,

**ಕಲಶಪೂಜೆ**

ತದಂಗ ಕಲಶಾರಾಧನಂ ಕರಿಷ್ಯೇ,ಕಲಶಂ ಗಂಧ ಪುಷ್ಪಾಕ್ಷತೈ ರಭ್ಯರ್ಚ್ಯ
ಕಲಶಸ್ಯಮುಖೇ ವಿಷ್ಣುಃ ಕಂಠೇ ರುದ್ರಃ ಸಮಾಶ್ರಿತಃ॥
ಮೂಲೇ ತತ್ರ ಸ್ಥಿತೌ ಬ್ರಹ್ಮ ಮಧ್ಯೇ ಮಾತೃಗಣಾಃ ಸ್ಮೃತಾಃ॥
ಕುಕ್ಷೌತು ಸಾಗರಾ ಸ್ಸರ್ವೇ ಸಪ್ತದ್ವೀಪಾ ವಸುಂಧರಾ
ಋಗ್ವೇದೋಽಥ ಯಜುರ್ವೇದೋ ಸ್ಸಾಮವೇದೋ ಹ್ಯಥರ್ವಣಃ॥
ಅಂಗೈಶ್ಚ ಸಹಿತಾ ಸ್ಸರ್ವೇ ಕಲಶಾಂಬುಸಮಾಶ್ರಿತಾಃ॥
ಗಂಗೇ ಚ ಯಮುನೇ ಚೈವ ಗೋದಾವರಿ! ಸರಸ್ವತಿ!
ನರ್ಮದೇ ಸಿಂಧು ಕಾವೇರೌ ಜಲೇऽ ಸ್ಮಿನ್ ಸನಿಧಿಂ ಕುರು॥
ಕಾವೇರಿ ತುಂಗಭದ್ರಾ ಚಾ ಕೃಷ್ಣವೇಣೀ ಚ ಗೌತಮಿ॥
ಭಾಗೀರಥೀತೀ ವಿಖ್ಯಾತಾಃ ಪಂಚಗಂಗಾಃ ಪ್ರಕೀರ್ತಿತಾಃ॥
ಆಯಾಂತು ದೇವಪೂಜಾರ್ಥಂ ದುರಿತಕ್ಷಯಕಾರಕಾಃ॥

(ಕಲಶದ ನೀರನ್ನು ಹೂವಿನಿಂದಾಗಲೀ, ತುಳಸಿಯಿಂದಾಗಲೀ ತೆಗೆದುಕೊಂಡು ದೇವರಪ್ರತಿಮೆಯ ಮೇಲೆ ಪ್ರೋಕ್ಷಣೆ ಮಾಡಿ, ನಿಮ್ಮ ಮೇಲೂ ಸಿಂಪಡಿಸಿ, ಪೂಜಾದ್ರವ್ಯದ ಮೇಲೂ ಸಿಂಪಡಿಸಿ ಕೊಳ್ಳಿ) ಆದೌ ಸಂಕಲ್ಪಿತ ಪೂಜಾ ನಿರ್ವಿಘ್ನೇನಾ ಪರಿಸಮ್ಯಾಪ್ತ ಪರ್ಥ್ಯಂ ಶ್ರೀಮಹಾಗಣಪತಿ ಪೂಜಾಂ ಕರಿಷ್ಯೇ (ಗಣಪತಿಗೆ ಪೂಜೆ ಮಾಡಬೇಕು) ಪೂರ್ವ ಸಂಕಲ್ಪಿತ ಶ್ರೀ ಆಂಜನೇಯ ಪೂಜಾಂ ಕರಿಷ್ಯೇ ಎಂದು ಪೂಜೆಯ ಆರಂಭವನ್ನು ಮಾಡಬೇಕು. ಸಂಕಲ್ಪಃ-ಪೂರ್ವೋಕ್ತ --- ಶುಭತಿಥೌ ಶ್ರೀ ಆಂಜನೇಯ ದೇವತಾ ಪ್ರೀತ್ಯರ್ಥ ಷೋಡಶೋಪಚಾರ ಪೂಜಾಂ ಕರಿಷ್ಯೆ

**ಧ್ಯಾನಃ**

ಮರ್ಕಟೇಶ ಮಹೋತ್ಸಾಹ ಸರ್ವಶೋಕವಿನಾಶನ
ಶತ್ರೂನ್ ಸಂಹಾರ ಮಾಂ ರಕ್ಷ ಶ್ರಿಯಂ ದಾಪಯ ಮೇ ಪ್ರಭೋ।
ಸ್ಫಟಿಕಾಭಂ ಸ್ವರ್ಣಕಾಂತಿಂ ದ್ವಿಭುಜಂ ಚ ಕೃತಾಂಜಲಿಂ॥
ಕುಂಡಲದ್ವಯ ಸಂಶೋಭಿ ಮುಖಾಂಭೋಜಂ ಮುಹುರ್ಮುಹುಃ॥
ಶ್ರೀಹನುಮತೇ ನಮಃ ಧ್ಯಾಯಾಮಿ

**ಆವಾಹನಮ್**

ರಾಮಚಂದ್ರ ಪದಾಂಭೋಜ ಯುಗಳಸ್ಥಿರಮಾನಸಂ
ಆವಾಹಯಾಮಿ ವರದಂ ಹನೂಮಂತ ಮಭೀಷ್ಟದಂ
ಶ್ರೀಹನುಮತೇ ನಮಃ ಆವಾಹಯಾಮಿ

**ಸಿಂಹಾಸನ**

ನವರತ್ನ ನಿಬದ್ಧಾಶ್ರಂ ಚತುರಶ್ರಂ ಸುಶೋಭನಂ
ಸಾವರ್ಣಮಾಸನಂ ತುಭ್ಯಂ ದಾಸ್ಯಾಮಿ ಕಪಿನಾಯಕ
ಶ್ರೀಹನುಮತೇ ನಮಃ ಸುವರ್ಣರತ್ನಸಿಂಹಾಸನಂ ಸಮರ್ಪಯಾಮಿ

**ಪಾದ್ಯಂ**

ಸುವರ್ಣ ಕಲಶಾನೀತಂ ಗಂಗಾದಿ ಸಲಿಲೈರ್ಯುತಂ
ಪಾದಯೋಃ ಪಾದ್ಯಮನಘಂ ಪ್ರತಿಗೃಹ್ಯ ಪ್ರಸೀದ ಮೇ
ಶ್ರೀಹನುಮತೇ ನಮಃ ಪಾದಯೋಃ ಪಾದ್ಯಂ ಸಮರ್ಪಯಾಮಿ॥

**ಅರ್ಘ್ಯಂ**

ಕುಸುಮಾಕ್ಷತ ಸಮ್ಮಿಶ್ರಂ ಪ್ರಸನ್ನಾಂಬು ಪರಿಪ್ಲುತಂ
ಅನರ್ಘ್ಯ ಮರ್ಘ್ಯ ಮಧುನಾ ಗೃಹ್ಯತಾಂ ಕಪಿಪುಂಗವ
ಶ್ರೀಹನುಮತೇ ನಮಃ ಮುಖೇ ಆಚಮನೀಯಂ ಸಮರ್ಪಯಾಮಿ

**ಮಧುಪರ್ಕಂ**

ಮಧ್ವಾಜ್ಯಕ್ಷೀರ ಮಿಳಿತಂ ಶರ್ಕರಾ ದಧಿಸಂಯುತಂ
ಅರ್ಪಯೇ ಮಧುಪರ್ಕಂ ತೇ ಸ್ವೀಕುರು ತ್ವಂ ದಯಾಮಯ
ಶ್ರೀಹನುಮತೇ ನಮಃ ಮಧುಪರ್ಕಂ ಸಮರ್ಪಯಾಮಿ

**ಪಂಚಾಮೃತಸ್ನಾನಂ**

ಮಧ್ವಾಜ್ಯ ಕ್ಷೀರದಧಿಭಿಃ ಸಗುಡೈರ್ಮಂತ್ರಪಾಲಿತೈಃ
ಪಂಚಾಮೃತೈಃ ಪೃಥಗ್ಸ್ನಾತೈ ಸ್ಸಿಂಚಾಮಿ ತ್ವಾಂ ಕಪೀಶ್ವರ
ಶ್ರೀಹನುಮತೇ ನಮಃ ಪಂಚಾಮೃತಸ್ನಾನಂ ಸಮರ್ಪಯಾಮಿ
ಶ್ರೀಹನುಮತೇ ನಮಃ ಶುದ್ಧೋದಕಸ್ನಾನಂ ಸಮರ್ಪಯಾಮಿ
ಸ್ನಾನಾನಂತರ ಆಚಮನೀಯಂ ಸಮರ್ಪಯಾಮಿ

**ವಸ್ತ್ರಂ**

ಗ್ರಥಿತಾಂ ನವರತ್ನೈಶ್ಚ ಮೇಖಲಾಂ ತ್ರಿಗುಣೀಕೃತಾಂ
ಅರ್ಪಯಾಮಿ ಕಪೀಶ ತ್ವಂ ಗೃಹಾಣ ಮಹತಾಂ ವರ
ಶ್ರೀಹನುಮತೇ ನಮಃ ವಸ್ತ್ರಯುಗ್ಮಂ ಸಮರ್ಪಯಾಮಿ
ವಸ್ತ್ರಧಾರಣಾನಂತರಂ ಆಚಮನೀಯಂ ಸಮರ್ಪಯಾಮಿ
(ಎಂದು ಹೇಳಿ, ದೊಡ್ಡ ವಸ್ತ್ರವನ್ನು ಸಮರ್ಪಿಸಿ, ಎರಡು ಭುಜಗಳ ಮೇಲಿನಿಂದ ಕೆಳಗೆ ಬರುವಂತೆ ಶಲ್ಯವನ್ನು ಹೊದೆಸಬೇಕು.)

**ಯಜ್ಞೋಪವೀತಂ**

ಶ್ರೌತ ಸ್ಮಾರ್ತಾದಿ ಕೃತ್ಯಾನಾಂ ಸಾಂಗೋಪಾಂಗ ಫಲಪ್ರದಂ
ಯಜ್ಞೋಪವೀತ ಮನಘಂ ಧಾರಯಾನಿಲನಂದನ
ಶ್ರೀಹನುಮತೇ ನಮಃ ಯಜ್ಞೋಪವೀತಂ ಸಮರ್ಪಯಾಮಿ
ಅನಂತರಂ ಆಚಮನೀಯಂ ಸಮರ್ಪಯಾವಿ

**ಗಂಧ, ಸಿಂಧೂರ**

ದಿವ್ಯಸಿಂಧೂರ ಕರ್ಪೂರ ಮೃಗನಾಭಿ ಸಮನ್ವಿತಂ
ಸಕುಂಕುಮಂ ಪೀತಗಂಧಂ ಲಲಾಟೇ ಧಾರಯಾನಘ
ಶ್ರೀಹನುಮತೇ ನಮಃ ಗಂಧಸಿಂಧೂರಾಣಿ ಸಮರ್ಪಯಾಮಿ
(ಎಂದು ಹೇಳಿ ಸುವಾಸನಾಭರಿತವಾದ ಗಂಧದ್ರವ್ಯವನ್ನು, ಸಿಂಧೂರವನ್ನು ವಿಗ್ರಹಕ್ಕೆ ಹಣೆಯ ಮೇಲೆ, ಪಾದಗಳಿಗೆ ಹಚ್ಚಬೇಕು. ಗಂಧವನ್ನು ಮೊದಲೇ ತೇಯ್ದು ಸಿದ್ಧವಾಗಿರಿಸಿ ಕೊಂಡಿರಬೇಕು.)

**ಪುಷ್ಪಾಕ್ಷತಾಃ**

ನೀಲೋತ್ಪಲೈಃ ಕೋಕನದೈಃ ಕಲ್ಹಾರ ಕಮಲೈರಪಿ
ಕುಮುದೈಃ ಪುಂಡರೀಕೈಸ್ತ್ವಾಂ ಪೂಜಯಾಮಿ ಕಪೀಶ್ವರ
ಶ್ರೀಹನುಮತೇ ನಮಃ ಪರಿಮಳ ಪುಷ್ಪಾಕ್ಷತಾನ್ ಸಮರ್ಪಯಾಮಿ
(ಎಂದು ಹೇಳಿ ವಿಗ್ರಹಕ್ಕೆ ಹೂಗಳಿಂದ ಚೆನ್ನಾಗಿ ಅಲಂಕರಿಸಬೇಕು)

**ಅಂಗಪೂಜೆ**

ಶ್ರೀ ಹನುಮತೇ ನಮಃ - ಪಾದೌ ಪೂಜಯಾಮಿ
ಶ್ರೀ ಸುಗ್ರೀವ ಸಖಾಯ ನಮಃ - ಗುಲ್ಫೌಪೂಜಯಾಮಿ
ಶ್ರೀ ಅಂಗದಮಿತ್ರಾಯ ನಮಃ - ಜಂಘೇ ಪೂಜಯಾಮಿ
ಶ್ರೀ ರಾಮದಾಸಾಯ ನಮಃ - ಊರೂನ್ ಪೂಜಯಾಮಿ
ಶ್ರೀ ಅಕ್ಷಘ್ನಾಯ ನಮಃ - ಕಟಿಂ ಪೂಜಯಾಮಿ
ಶ್ರೀ ಲಂಕಾದಹನಾಯ ನಮಃ - ವಾಲಂ ಪೂಜಯಾಮಿ
ಶ್ರೀ ರಾಮಮಣಿದಾಯ ನಮಃ - ನಾಭಿಂ ಪೂಜಯಾಮಿ
ಶ್ರೀ ಸಾಗರೋಲ್ಲಂಘನಾಯ ನಮಃ - ಮಧ್ಯಂ ಪೂಜಯಾಮಿ
ಶ್ರೀ ಲಂಕಾಮರ್ದನಾಯ ನಮಃ - ಕೇಶಾವಲೀಂ ಪೂಜಯಾಮಿ
ಶ್ರೀ ಸಂಜೀವಾನಿಹರ್ತ್ರೇ ನಮಃ - ಸ್ತನೌ ಪೂಜಯಾಮಿ
ಶ್ರೀ ಸೌಮಿತ್ರಿಪ್ರಾಣದಾಯ ನಮಃ - ವಕ್ಷಃ ಪೂಜಯಾಮಿ
ಶ್ರೀ ಕುಂಠಿತ ದಶಕಂಠಾಯ ನಮಃ - ಕಂಠಂ ಪೂಜಯಾಮಿ
ಶ್ರೀ ರಾಮಾಭಿಷೇಕಕಾರಿಣೇ ನಮಃ - ಹಸ್ತೌ ಪೂಜಯಾಮಿ
ಶ್ರೀ ಮಂತ್ರರಚಿತ ರಾಮಾಯಣಾಯ ನಮಃ - ವಕ್ತ್ರಂ ಪೂಜಯಾಮಿ
ಶ್ರೀ ಪ್ರಸನ್ನವದನಾಯ ನಮಃ - ವದನಂ ಪೂಜಯಾಮಿ
ಶ್ರೀ ಪಿಂಗನೇತ್ರಾಯ ನಮಃ - ನೇತ್ರೇ ಪೂಜಯಾಮಿ
ಶ್ರೀ ಶ್ರುತಿಪಾರಗಾಯ ನಮಃ - ಕರ್ಣೌ ಪೂಜಯಾಮಿ
ಶ್ರೀ ಊರ್ಧ್ವಪುಂಡ್ರಧಾರಿಣೇ ನಮಃ - ಕಪೋಲೇ ಪೂಜಯಾಮಿ
ಶ್ರೀ ಮಣಿಕಂಠಮಾಲಿನೇ ನಮಃ - ಶಿರಃ ಪೂಜಯಾಮಿ
ಶ್ರೀ ಸರ್ವಾಭೀಷ್ಟಪ್ರದಾಯ ನಮಃ - ಸರ್ವಾಂಗಾನಿ ಪೂಜಯಾಮಿ

## ಶ್ರೀಮದಾಂಜನೇಯ ಅಷ್ಟೋತ್ತರ ಶತನಾಮಾವಳಿ

ಓಂ ಶ್ರೀ ಆಂಜನೇಯಾಯ ನಮಃ
ಓಂ ಶ್ರೀ ಮಹಾವೀರಾಯ ನಮಃ
ಓಂ ಶ್ರೀ ಹನೂಮತೇ ನಮಃ
ಓಂ ಶ್ರೀ ಮಾರುತಾತ್ಮಜಾಯ ನಮಃ
ಓಂ ಶ್ರೀ ತತ್ತ್ವಜ್ಞಾನಪ್ರದಾಯ ನಮಃ
ಓಂ ಶ್ರೀ ಸೀತಾದೇವಿಮುದ್ರಾಪ್ರದಾಯಕಾಯ ನಮಃ
ಓಂ ಶ್ರೀ ಅಶೋಕವನಿಕಾಚ್ಛೇತ್ರೇ ನಮಃ
ಓಂ ಶ್ರೀ ಸರ್ವಮಾಯಾವಿಭಂಜನಾಯ ನಮಃ
ಓಂ ಶ್ರೀ ಸರ್ವಬಂಧವಿಮೋಕ್ತ್ರೇ ನಮಃ
ಓಂ ಶ್ರೀ ರಕ್ಷೋವಿಧ್ವಂಸಕಾರಕಾಯ ನಮಃ 10
ಓಂ ಶ್ರೀ ಪರವಿದ್ಯಾಪರೀಹಾರಾಯ ನಮಃ
ಓಂ ಶ್ರೀ ಪರಶೌರ್ಯವಿನಾಶಕಾಯ ನಮಃ
ಓಂ ಶ್ರೀ ಪರಯಂತ್ರನಿರಾಕರ್ತ್ರೆ ನಮಃ
ಓಂ ಶ್ರೀ ಪರಯಂತ್ರ ಪ್ರಭೇದಕಾಯ ನಮಃ
ಓಂ ಶ್ರೀ ಸರ್ವಗ್ರಹವಿನಾಶಾಯ ನಮಃ
ಓಂ ಶ್ರೀ ಭೀಮಸೇನ ಸಹಾಯಕೃತೇ ನಮಃ
ಓಂ ಶ್ರೀ ಸರ್ವದುಃಖಹರಾಯ ನಮಃ
ಓಂ ಶ್ರೀ ಸರ್ವಲೋಕಚಾರಿಣೇ ನಮಃ
ಓಂ ಶ್ರೀ ಮನೋಜವಾಯ ನಮಃ
ಓಂ ಶ್ರೀ ಪಾರಿಜಾತದ್ರುಮೂಲಸ್ಥಾಯ ನಮಃ 20
ಓಂ ಶ್ರೀ ಸರ್ವಮಂತ್ರಸ್ವರೂಪಾಯ ನಮಃ
ಓಂ ಶ್ರೀ ಸರ್ವತಂತ್ರಸ್ವರೂಪಾಯ ನಮಃ
ಓಂ ಶ್ರೀ ಕಪೀಶ್ವರಾಯ ನಮಃ
ಓಂ ಶ್ರೀ ಮಹಾಕಾಯಾಯ ನಮಃ
ಓಂ ಶ್ರೀ ಸರ್ವರೋಗಹರಾಯ ನಮಃ
ಓಂ ಶ್ರೀ ಪ್ರಭವೇ ನಮಃ
ಓಂ ಶ್ರೀ ಬಲಸಿದ್ಧಿಕರಾಯ ನಮಃ
ಓಂ ಶ್ರೀ ಸರ್ವವಿದ್ಯಾಸಂಪತ್ಪ್ರದಾಯ ನಮಃ
ಓಂ ಶ್ರೀ ಕಪಿಸೇನಾನಾಯಕಾಯ ನಮಃ
ಓಂ ಶ್ರೀ ಭವಿಷ್ಯಚ್ಚತುರಾನನಾಯ ನಮಃ 30
ಓಂ ಶ್ರೀ ಕುಮಾರ ಬ್ರಹ್ಮಚಾರಿಣೇ ನಮಃ
ಓಂ ಶ್ರೀ ರತ್ನಕುಂಡಲದೀಪ್ತಿಮತೇ ನಮಃ
ಓಂ ಶ್ರೀ ಸಂಚಲದ್ವಾಲಸನ್ನದ್ಧಲಂಬ ಮಾನಶಿಖೋಜ್ಜ್ವಲಾಯ ನಮಃ
ಓಂ ಶ್ರೀ ಗಂಧರ್ವ ವಿದ್ಯಾತತ್ತ್ವಜ್ಞಾಯ ನಮಃ
ಓಂ ಶ್ರೀ ಮಹಾಬಲಪರಾಕ್ರಮಾಯ ನಮಃ
ಓಂ ಶ್ರೀ ಕಾರಾಗೃಹವಿಮೋಕ್ತ್ರೇ ನಮಃ
ಓಂ ಶ್ರೀ ಶೃಂಖಲಾಬಂಧಮೋಚಕಾಯ ನಮಃ
ಓಂ ಶ್ರೀ ಸಾಗರೋತ್ತಾರಕಾಯ ನಮಃ
ಓಂ ಶ್ರೀ ಪ್ರಾಜ್ಞಾಯ ನಮಃ
ಓಂ ಶ್ರೀ ರಾಮದೂತಾಯ ನಮಃ 40
ಓಂ ಶ್ರೀ ಪ್ರತಾಪವತೇ ನಮಃ

**ವಸ್ತ್ರಂ**

ಗ್ರಥಿತಾಂ ನವರತ್ನೈಶ್ಚ ಮೇಖಲಾಂ ತ್ರಿಗುಣೀಕೃತಾಂ
ಅರ್ಪಯಾಮಿ ಕಪೀಶ ತ್ವಂ ಗೃಹಾಣ ಮಹತಾಂ ವರ
ಶ್ರೀಹನುಮತೇ ನಮಃ ವಸ್ತ್ರಯುಗ್ಮಂ ಸಮರ್ಪಯಾಮಿ
ವಸ್ತ್ರಧಾರಣಾನಂತರಂ ಆಚಮನೀಯಂ ಸಮರ್ಪಯಾಮಿ

(ಎಂದು ಹೇಳಿ, ದೊಡ್ಡ ವಸ್ತ್ರವನ್ನು ಸಮರ್ಪಿಸಿ, ಎರಡು ಭುಜಗಳ ಮೇಲಿನಿಂದ ಕೆಳಗೆ ಬರುವಂತೆ ಶಲ್ಯವನ್ನು ಹೊದೆಸಬೇಕು.)

**ಯಜ್ಞೋಪವೀತಂ**

ಶ್ರೌತ ಸ್ಮಾರ್ತಾದಿ ಕೃತ್ಯಾನಾಂ ಸಾಂಗೋಪಾಂಗ ಫಲಪ್ರದಂ
ಯಜ್ಞೋಪವೀತ ಮನಘಂ ಧಾರಯಾನಿಲನಂದನ
ಶ್ರೀಹನುಮತೇ ನಮಃ ಯಜ್ಞೋಪವೀತಂ ಸಮರ್ಪಯಾಮಿ
ಅನಂತರಂ ಆಚಮನೀಯಂ ಸಮರ್ಪಯಾವಿ

**ಗಂಧ, ಸಿಂಧೂರ**

ದಿವ್ಯಸಿಂಧೂರ ಕರ್ಪೂರ ಮೃಗನಾಭಿ ಸಮನ್ವಿತಂ
ಸಕುಂಕುಮಂ ಪೀತಗಂಧಂ ಲಲಾಟೇ ಧಾರಯಾನಘ
ಶ್ರೀಹನುಮತೇ ನಮಃ ಗಂಧಸಿಂಧೂರಾಣಿ ಸಮರ್ಪಯಾಮಿ

(ಎಂದು ಹೇಳಿ ಸುವಾಸನಾಭರಿತವಾದ ಗಂಧದ್ರವ್ಯವನ್ನು, ಸಿಂಧೂರವನ್ನು ವಿಗ್ರಹಕ್ಕೆ ಹಣೆಯ ಮೇಲೆ, ಪಾದಗಳಿಗೆ ಹಚ್ಚಬೇಕು. ಗಂಧವನ್ನು ಮೊದಲೇ ತೇಯ್ದು ಸಿದ್ಧವಾಗಿರಿಸಿ ಕೊಂಡಿರಬೇಕು.)

**ಪುಷ್ಪಾಕ್ಷತಾಃ**

ನೀಲೋತ್ಪಲೈಃ ಕೋಕನದೈಃ ಕಲ್ಹಾರ ಕಮಲೈರಪಿ
ಕುಮುದೈಃ ಪುಂಡರೀಕೈಸ್ತ್ವಾಂ ಪೂಜಯಾಮಿ ಕಪೀಶ್ವರ
ಶ್ರೀಹನುಮತೇ ನಮಃ ಪರಿಮಳ ಪುಷ್ಪಾಕ್ಷತಾನ್ ಸಮರ್ಪಯಾಮಿ

(ಎಂದು ಹೇಳಿ ವಿಗ್ರಹಕ್ಕೆ ಹೂಗಳಿಂದ ಚೆನ್ನಾಗಿ ಅಲಂಕರಿಸಬೇಕು)

**ಅಂಗಪೂಜೆ**

ಶ್ರೀ ಹನುಮತೇ ನಮಃ - ಪಾದೌ ಪೂಜಯಾಮಿ
ಶ್ರೀ ಸುಗ್ರೀವ ಸಖಾಯ ನಮಃ - ಗುಲ್ಫೌಪೂಜಯಾಮಿ
ಶ್ರೀ ಅಂಗದಮಿತ್ರಾಯ ನಮಃ - ಜಂಘೇ ಪೂಜಯಾಮಿ
ಶ್ರೀ ರಾಮದಾಸಾಯ ನಮಃ - ಊರೂನ್ ಪೂಜಯಾಮಿ
ಶ್ರೀ ಅಕ್ಷಘ್ನಾಯ ನಮಃ - ಕಟಿಂ ಪೂಜಯಾಮಿ
ಶ್ರೀ ಲಂಕಾದಹನಾಯ ನಮಃ - ವಾಲಂ ಪೂಜಯಾಮಿ
ಶ್ರೀ ರಾಮಮಣಿದಾಯ ನಮಃ - ನಾಭಿಂ ಪೂಜಯಾಮಿ
ಶ್ರೀ ಸಾಗರೋಲ್ಲಂಘನಾಯ ನಮಃ - ಮಧ್ಯಂ ಪೂಜಯಾಮಿ
ಶ್ರೀ ಲಂಕಾಮರ್ದನಾಯ ನಮಃ - ಕೇಶಾವಲೀಂ ಪೂಜಯಾಮಿ
ಶ್ರೀ ಸಂಜೀವಾನಿಹರ್ತ್ರೇ ನಮಃ - ಸ್ತನೌ ಪೂಜಯಾಮಿ
ಶ್ರೀ ಸೌಮಿತ್ರಿಪ್ರಾಣದಾಯ ನಮಃ - ವಕ್ಷಃ ಪೂಜಯಾಮಿ
ಶ್ರೀ ಕುಂಠಿತ ದಶಕಂಠಾಯ ನಮಃ - ಕಂಠಂ ಪೂಜಯಾಮಿ
ಶ್ರೀ ರಾಮಾಭಿಷೇಕಕಾರಿಣೇ ನಮಃ - ಹಸ್ತೌ ಪೂಜಯಾಮಿ
ಶ್ರೀ ಮಂತ್ರರಚಿತ ರಾಮಾಯಣಾಯ ನಮಃ - ವಕ್ತ್ರಂ ಪೂಜಯಾಮಿ
ಶ್ರೀ ಪ್ರಸನ್ನವದನಾಯ ನಮಃ - ವದನಂ ಪೂಜಯಾಮಿ
ಶ್ರೀ ಪಿಂಗನೇತ್ರಾಯ ನಮಃ - ನೇತ್ರೇ ಪೂಜಯಾಮಿ
ಶ್ರೀ ಶ್ರುತಿಪಾರಗಾಯ ನಮಃ - ಕರ್ಣೌ ಪೂಜಯಾಮಿ
ಶ್ರೀ ಊರ್ಧ್ವಪುಂಡ್ರಧಾರಿಣೇ ನಮಃ - ಕಪೋಲೇ ಪೂಜಯಾಮಿ
ಶ್ರೀ ಮಣಿಕಂಠಮಾಲಿನೇ ನಮಃ - ಶಿರಃ ಪೂಜಯಾಮಿ
ಶ್ರೀ ಸರ್ವಾಭೀಷ್ಟಪ್ರದಾಯ ನಮಃ - ಸರ್ವಾಂಗಾನಿ ಪೂಜಯಾಮಿ

# ಶ್ರೀಮದಾಂಜನೇಯ ಅಷ್ಟೋತ್ತರ ಶತನಾಮಾವಳಿ

ಓಂ ಶ್ರೀ ಆಂಜನೇಯಾಯ ನಮಃ
ಓಂ ಶ್ರೀ ಮಹಾವೀರಾಯ ನಮಃ
ಓಂ ಶ್ರೀ ಹನೂಮತೇ ನಮಃ
ಓಂ ಶ್ರೀ ಮಾರುತಾತ್ಮಜಾಯ ನಮಃ
ಓಂ ಶ್ರೀ ತತ್ತ್ವಜ್ಞಾನಪ್ರದಾಯ ನಮಃ
ಓಂ ಶ್ರೀ ಸೀತಾದೇವಿಮುದ್ರಾಪ್ರದಾಯಕಾಯ ನಮಃ
ಓಂ ಶ್ರೀ ಅಶೋಕವನಿಕಾಚ್ಛೇತ್ರೇ ನಮಃ
ಓಂ ಶ್ರೀ ಸರ್ವಮಾಯಾವಿಭಂಜನಾಯ ನಮಃ
ಓಂ ಶ್ರೀ ಸರ್ವಬಂಧವಿಮೋಕ್ತ್ರೇ ನಮಃ
ಓಂ ಶ್ರೀ ರಕ್ಷೋವಿಧ್ವಂಸಕಾರಕಾಯ ನಮಃ 10
ಓಂ ಶ್ರೀ ಪರವಿದ್ಯಾಪರೀಹಾರಾಯ ನಮಃ
ಓಂ ಶ್ರೀ ಪರಶೌರ್ಯವಿನಾಶಕಾಯ ನಮಃ
ಓಂ ಶ್ರೀ ಪರಯಂತ್ರನಿರಾಕರ್ತ್ರೆ ನಮಃ
ಓಂ ಶ್ರೀ ಪರಯಂತ್ರ ಪ್ರಭೇದಕಾಯ ನಮಃ
ಓಂ ಶ್ರೀ ಸರ್ವಗ್ರಹವಿನಾಶಾಯ ನಮಃ
ಓಂ ಶ್ರೀ ಭೀಮಸೇನ ಸಹಾಯಕೃತೇ ನಮಃ
ಓಂ ಶ್ರೀ ಸರ್ವದುಃಖಹರಾಯ ನಮಃ
ಓಂ ಶ್ರೀ ಸರ್ವಲೋಕಚಾರಿಣೇ ನಮಃ
ಓಂ ಶ್ರೀ ಮನೋಜವಾಯ ನಮಃ
ಓಂ ಶ್ರೀ ಪಾರಿಜಾತದ್ರುಮೂಲಸ್ಥಾಯ ನಮಃ 20
ಓಂ ಶ್ರೀ ಸರ್ವಮಂತ್ರಸ್ವರೂಪಾಯ ನಮಃ
ಓಂ ಶ್ರೀ ಸರ್ವತಂತ್ರಸ್ವರೂಪಾಯ ನಮಃ
ಓಂ ಶ್ರೀ ಕಪೀಶ್ವರಾಯ ನಮಃ
ಓಂ ಶ್ರೀ ಮಹಾಕಾಯಾಯ ನಮಃ
ಓಂ ಶ್ರೀ ಸರ್ವರೋಗಹರಾಯ ನಮಃ
ಓಂ ಶ್ರೀ ಪ್ರಭವೇ ನಮಃ
ಓಂ ಶ್ರೀ ಬಲಸಿದ್ಧಿಕರಾಯ ನಮಃ
ಓಂ ಶ್ರೀ ಸರ್ವವಿದ್ಯಾಸಂಪತ್ಪ್ರದಾಯ ನಮಃ
ಓಂ ಶ್ರೀ ಕಪಿಸೇನಾನಾಯಕಾಯ ನಮಃ
ಓಂ ಶ್ರೀ ಭವಿಷ್ಯಚ್ಚತುರಾನನಾಯ ನಮಃ 30
ಓಂ ಶ್ರೀ ಕುಮಾರ ಬ್ರಹ್ಮಚಾರಿಣೇ ನಮಃ
ಓಂ ಶ್ರೀ ರತ್ನಕುಂಡಲದೀಪ್ತಿಮತೇ ನಮಃ
ಓಂ ಶ್ರೀ ಸಂಚಲದ್ವಾಲಸನ್ನದ್ಧಲಂಬ ಮಾನಶಿಖೋಜ್ಜ್ವಲಾಯ ನಮಃ
ಓಂ ಶ್ರೀ ಗಂಧರ್ವ ವಿದ್ಯಾತತ್ತ್ವಜ್ಞಾಯ ನಮಃ
ಓಂ ಶ್ರೀ ಮಹಾಬಲಪರಾಕ್ರಮಾಯ ನಮಃ
ಓಂ ಶ್ರೀ ಕಾರಾಗೃಹವಿಮೋಕ್ತ್ರೇ ನಮಃ
ಓಂ ಶ್ರೀ ಶೃಂಖಲಾಬಂಧಮೋಚಕಾಯ ನಮಃ
ಓಂ ಶ್ರೀ ಸಾಗರೋತ್ತಾರಕಾಯ ನಮಃ
ಓಂ ಶ್ರೀ ಪ್ರಾಜ್ಞಾಯ ನಮಃ
ಓಂ ಶ್ರೀ ರಾಮದೂತಾಯ ನಮಃ 40
ಓಂ ಶ್ರೀ ಪ್ರತಾಪವತೇ ನಮಃ

ಓಂ ಶ್ರೀ ವಾನರಾಯ ನಮಃ
ಓಂ ಶ್ರೀ ಕೇಸರಿಸುತಾಯ ನಮಃ
ಓಂ ಶ್ರೀ ಸೀತಾಶೋಕನಿವಾರಕಾಯ ನಮಃ
ಓಂ ಶ್ರೀ ಅಂಜನಾಗರ್ಭಸಂಭೂತಾಯ ನಮಃ
ಓಂ ಶ್ರೀ ಬಾಲಾರ್ಕಸದೃಶಾನನಾಯ ನಮಃ
ಓಂ ಶ್ರೀ ವಿಭೀಷಣಪ್ರಿಯಕರಾಯ ನಮಃ
ಓಂ ಶ್ರೀ ದಶಗ್ರೀವಕುಲಾಂತಕಾಯ ನಮಃ
ಓಂ ಶ್ರೀ ಲಕ್ಷ್ಮಣಪ್ರಾಣದಾತ್ರೇ ನಮಃ
ಓಂ ಶ್ರೀ ವಜ್ರಕಾಯಾಯ ನಮಃ 50
ಓಂ ಶ್ರೀ ಮಹಾದ್ಯುತಯೇ ನಮಃ
ಓಂ ಶ್ರೀ ಚಿರಂಜೀವಿನೇ ನಮಃ
ಓಂ ಶ್ರೀ ರಾಮಭಕ್ತಾಯ ನಮಃ
ಓಂ ಶ್ರೀ ದೈತ್ಯಕಾರ್ಯವಿಘಾತಕಾಯ ನಮಃ
ಓಂ ಶ್ರೀ ಅಕ್ಷಹಂತ್ರೇ ನಮಃ
ಓಂ ಶ್ರೀ ಕಾಂಚನಾಭಾಯ ನಮಃ
ಓಂ ಶ್ರೀ ಪಂಚವಕ್ತ್ರಾಯ ನಮಃ
ಓಂ ಶ್ರೀ ಮಹಾತಪಸೇ ನಮಃ
ಓಂ ಶ್ರೀ ಲಂಕಿಣೀಭಂಜಕಾಯ ನಮಃ
ಓಂ ಶ್ರೀ ಶ್ರೀಮತೇ ನಮಃ 60
ಓಂ ಶ್ರೀ ಸಿಂಹಿಕಾಪ್ರಾಣಭಂಜಕಾಯ ನಮಃ
ಓಂ ಶ್ರೀ ಗಂಧಮಾದನಶೈಲಸ್ಥಾಯ ನಮಃ
ಓಂ ಶ್ರೀ ಲಂಕಾಪುರವಿದಾಹಕಾಯ ನಮಃ
ಓಂ ಶ್ರೀ ಸುಗ್ರೀವಸಚಿವಾಯ ನಮಃ
ಓಂ ಶ್ರೀ ಧೀರಾಯ ನಮಃ

ಓಂ ಶ್ರೀ ಶೂರಾಯ ನಮಃ
ಓಂ ಶ್ರೀ ದೈತ್ಯಕುಲಾಂತಕಾಯ ನಮಃ
ಓಂ ಶ್ರೀ ಸುರಾರ್ಚಿತಾಯ ನಮಃ
ಓಂ ಶ್ರೀ ಮಹಾತೇಜಸೇ ನಮಃ
ಓಂ ಶ್ರೀ ರಾಮಚೂಡಾಮಣಿಪ್ರದಾತ್ರೇ ನಮಃ 70
ಓಂ ಶ್ರೀ ಕಾಮರೂಪಾಯ ನಮಃ
ಓಂ ಶ್ರೀ ಪಿಂಗಳಾಕ್ಷಾಯ ನಮಃ
ಓಂ ಶ್ರೀ ವಾರ್ಧಿಮೈನಾಕಪೂಜಿತಾಯ ನಮಃ
ಓಂ ಶ್ರೀ ಕಬಳೀಕೃತಮಾರ್ತಾಂಡ ಮಂಡಲಾಯ ನಮಃ
ಓಂ ಶ್ರೀ ವಿಜಿತೇಂದ್ರಿಯಾಯ ನಮಃ
ಓಂ ಶ್ರೀ ರಾಮಸುಗ್ರೀವಸಂಧಾತ್ರೇ ನಮಃ
ಓಂ ಶ್ರೀ ಮಹಿರಾವಣಮರ್ಧನಾಯ ನಮಃ
ಓಂ ಶ್ರೀ ಸ್ಫಟಿಕಾಭಾಯ ನಮಃ
ಓಂ ಶ್ರೀ ವಾಗಧೀಶಾಯ ನಮಃ
ಓಂ ಶ್ರೀ ನವವ್ಯಾಕೃತಿಪಂಡಿತಾಯ ನಮಃ 80
ಓಂ ಶ್ರೀ ಚತುರ್ಬಾಹವೇ ನಮಃ
ಓಂ ಶ್ರೀ ದೀನಬಂಧವೇ ನಮಃ
ಓಂ ಶ್ರೀ ಮಹಾತ್ಮನೇ ನಮಃ
ಓಂ ಶ್ರೀ ಭಕ್ತವತ್ಸಲಾಯ ನಮಃ
ಓಂ ಶ್ರೀ ಸಂಜೀವನನಗಾಹರ್ತ್ರೇ ನಮಃ
ಓಂ ಶ್ರೀ ಶುಚಯೇ ನಮಃ
ಓಂ ಶ್ರೀ ವಾಗ್ಮಿನೇ ನಮಃ
ಓಂ ಶ್ರೀ ದೃಢವ್ರತಾಯ ನಮಃ
ಓಂ ಶ್ರೀ ಕಾಲನೇಮಿಪ್ರಮಥನಾಯ ನಮಃ

ಓಂ ಶ್ರೀ ಹರಿಮರ್ಕಟಮರ್ಕಟಾಯ ನಮಃ 90
ಓಂ ಶ್ರೀ ದಾಂತಾಯ ನಮಃ
ಓಂ ಶ್ರೀ ಶಾಂತಾಯ ನಮಃ
ಓಂ ಶ್ರೀ ಪ್ರಸನ್ನಾತ್ಮನೇ ನಮಃ
ಓಂ ಶ್ರೀ ಶತಕಂಠಮದಾಪಹೃತೇ ನಮಃ
ಓಂ ಶ್ರೀ ಯೋಗಿನೇ ನಮಃ
ಓಂ ಶ್ರೀ ರಾಮಕಥಾಲೋಲಾಯ ನಮಃ
ಓಂ ಶ್ರೀ ಸೀತಾನ್ವೇಷಣಪಂಡಿತಾಯ ನಮಃ
ಓಂ ಶ್ರೀ ವಜ್ರದಂಷ್ಟ್ರಾಯ ನಮಃ
ಓಂ ಶ್ರೀ ವಜ್ರನಖಾಯ ನಮಃ
ಓಂ ಶ್ರೀ ರುದ್ರವೀರ್ಯಸಮುದ್ಭವಾಯ ನಮಃ 100
ಓಂ ಶ್ರೀ ಇಂದ್ರಜಿತ್ಪ್ರಹಿತಾಮೋಘ
ಬ್ರಹ್ಮಾಸ್ತ್ರವಿನಿವಾರಕಾಯ ನಮಃ
ಓಂ ಶ್ರೀ ಪಾರ್ಥಧ್ವಜಾಗ್ರಸಂವಾಸಿನೇ ನಮಃ
ಓಂ ಶ್ರೀ ಶರಪಂಜರಭೇದಕಾಯ ನಮಃ
ಓಂ ಶ್ರೀದೀರ್ಘಬಾಹವೇ ನಮಃ
ಓಂ ಶ್ರೀ ಲೋಕಪೂಜ್ಯಾಯ ನಮಃ
ಓಂ ಶ್ರೀ ಜಾಂಬವತ್ಪ್ರೀತಿವರ್ಧನಾಯ ನಮಃ
ಓಂ ಶ್ರೀ ಸೀತಾಸಮೇತ ಶ್ರೀರಾಮಪಾದ
ಸೇವಾಧುರಂಧರಾಯ ನಮಃ
ಓಂ ಶ್ರೀ ಮದಾಂಜನೇಯಸ್ವಾಮಿನೇ ನಮಃ 108

**ಅಷ್ಟೋತ್ತರಶತನಾಮಪೂಜಾಂ ಸಮರ್ಪಯಾಮಿ**

(ಗಂಟೆಯನ್ನು ಬಾರಿಸುತ್ತಾ ಆರತಿ ಮಾಡಬೇಕು)

**ಧೂಪ:**

ದಿವ್ಯಂ ಸಗುಗ್ಗುಲುಂ ರಮ್ಯಂ ದಶಾಂಗೇನ ಸಮನ್ವಿತಂ
ಗೃಹಾಣ ಮಾರುತೇ ಧೂಪಂ ಸುಪ್ರಿಯಂ ಘ್ರಾಣತರ್ಪಣಂ;
ಶ್ರೀಹನುಮತೇ ನಮಃ ದಿವ್ಯ ಪರಿಮಳ ಧೂಪಮಾಘ್ರಾಪಯಾಮಿ
(ಎಂದು ಹೇಳುತ್ತಾ ವಿಗ್ರಹಕ್ಕೆ ಧೂಪವನ್ನು ತೋರಿಸಬೇಕು)

**ದೀಪ:**

ಘೃತವರ್ತಿ ಸಮುಜ್ಜ್ವಾಲಾ ಶತಸೂರ್ಯ ಸಮಪ್ರಭಂ
ಅತುಲಂ ತವ ದಾಸ್ಯಾಮಿ ವ್ರತಪೂರ್ವ್ಯೆ ಸುದೀಪಕಂ
ಶ್ರೀಹನುಮತೇ ನಮಃ ದೀಪಂ ದರ್ಶಯಾಮಿ
(ಎಂದು ಹೇಳಿ ದೀಪವನ್ನು ಹಚ್ಚಬೇಕು)
ಧೂಪ ದೀಪಾನಂತರ ಆಚಮನೀಯಂ ಸಮರ್ಪಯಾಮಿ
(ಎಂದು ಹೇಳಿ ಉದ್ಧರಣೆಯಲ್ಲಿ ನೀರನ್ನು ತೆಗೆದುಕೊಂಡು ದೇವರಿಗೆ ತೋರಿಸಿ, ಅರ್ಘ್ಯಪಾತ್ರೆಯಲ್ಲಿ ಬಿಡಬೇಕು)

**ಗಮನಿಸಿ :**

(ಉಪಚಾರಗಳೊಂದಿಗೆ ನೀಡಿರುವ ದೀಪವನ್ನು ಆರತಿಯಂತೆ ಕಣ್ಣಿಗೆ ಒತ್ತಿಕೊಳ್ಳುವ ಅಗತ್ಯವಿಲ್ಲ)

**ನೈವೇದ್ಯ:**

ಮಣಿ ಪಾತ್ರಸಹಸ್ರಾಢ್ಯಂ ದಿವ್ಯಾನ್ನಂ ಘೃತಪಾಯಸಂ
ಆಪೂಪ ಲಡ್ಡುಕೋಪೇತಂ ಮಧುರಾಮ್ರ ಫಲೈರ್ಯುತಂ
ಹಿಂಗೂಜೀರಕ ಸಂಯುಕ್ತಂ ಷಡ್ರಸೋಪೇತ ಮುತ್ತಮಂ
ನೈವೇದ್ಯಮರ್ಪಯಾಮ್ಯದ್ಯ ಗೃಹೇಣೇದಂ ಕಪೀಶ್ವರ
ಯಥಾವಿಧಿ ನಿವೇದನಂ ಕುರ್ಯಾತ್ ಮಧ್ಯೇಮಧೇ
ಪಾನೀಯಂ ಸಮರ್ಪಯಾಮಿ
ಉತ್ತರಾಪೋಶನಂ ಸಮರ್ಪಯಾಮಿ, ಹಸ್ತ ಪ್ರಕ್ಷಾಳನಂ ಸಮರ್ಪಯಾಮಿ
ಮುಖ ಪ್ರಕ್ಷಾಳನಂ ಸಮರ್ಪಯಾಮಿ, ಪಾದ ಪ್ರಕ್ಷಾಳನಂ ಸಮರ್ಪಯಾಮಿ

ಗಂಡೂಷಂ ಸಮರ್ಪಯಾಮಿ. ಶುದ್ಧಾಚಮನೀಯಂ ಸಮರ್ಪಯಾಮಿ

(ಎಂದು ಹೇಳುತ್ತಾ ಐದು ಸಾರಿ ಉದ್ಧರಣೆಯೊಂದಿಗೆ ನೀರನ್ನು ಅರ್ಘ್ಯಪಾತ್ರೆಯಲ್ಲಿ ಬಿಡಬೇಕು)

(ತಾಂಬೂಲದಲ್ಲಿ ಅಡಿಕೆ ಚೂರುಗಳು, ಎರಡು ವಿಳೇ ದೆಲೆಯನ್ನು ಇರಿಸಬೇಕು ಇದು ತಾಂಬೂಲವನ್ನು ನೀಡುವ ವಿಧಾನ)

**ತಾಂಬೂಲ :**

ನಾಗವಲ್ಲೀ ದಳೋಪೇತಂ ಕ್ರಮುಕೈರ್ಮಧುರೈರ್ಯುತಮ್
ತಾಂಬೂಲ ಮರ್ಪಯಾಮ್ಯದ್ಯ ಕರ್ಪೂರಾದಿಸುವಾಸಿತಂ
ಶ್ರೀಹನುಮತೇ ನಮಃ ಪ್ರದಕ್ಷಿಣ ತಾಂಬೂಲಂ ಸಮರ್ಪಯಾಮಿ
ತಾಂಬೂಲಚರ್ವಣಾ ನಂತರಂ ಆಚಮನೀಯಂ ಸಮರ್ಪಯಾಮಿ

(ಎಂದು ಹೇಳುತ್ತಾ ದೇವರಿಗೆ ತಾಂಬೂಲವನ್ನು ಸಮರ್ಪಿಸಬೇಕು)

ಗಂಟೆಯನ್ನು ಬಾರಿಸಬೇಕು.

**ಕರ್ಪೂರ ನೀರಾಜನಂ:**

ಆರಾರ್ತಿಕಂ ತಮೋಹಾರಿ ಶತಸೂರ್ಯ ಸಮಪ್ರಭಂ
ಅರ್ಪಯಾಮಿ ತವ ಪ್ರೀತ್ಯೈ ಅಂಧಕಾರ ನಿಷಾದನಂ
ಶ್ರೀಹನುಮತೇ ನಮಃ ಕರ್ಪೂರ ನೀರಾಜನಂ ಸಮರ್ಪಯಾಮಿ

ಎಂದು ಹೇಳುತ್ತಾ ದೇವರಿಗೆ ಮೂರು ಬಾರಿ ಪಾದಾದಿ ಶಿರಃ ಪರ್ಯಂತವೂ ಎಲ್ಲರೂ ಕರ್ಪೂರ ಕಾಂತಿಯಲ್ಲಿ ದೇವರನ್ನು ನೋಡಿ ಆನಂದಿಸುವಂತೆ ವಿಗ್ರಹಕ್ಕೆ ಬಲಭಾಗಕ್ಕೆ ಆರತಿಯನ್ನು ಸಮರ್ಪಿಸಬೇಕು. ಆರತಿಯ ತಟ್ಟೆಯನ್ನು ನಿಧಾನವಾಗಿ ಭಕ್ತಿಶ್ರದ್ಧೆಗಳೊಂದಿಗೆ ತಿರುಗಿಸಬೇಕು. ವೇಗವಾಗಿ ತಿರುಗಿಸಬಾರದು.

ನೀರಾಜನಾನಂತರಂ ಆಚಮನೀಯಂ ಸಮರ್ಪಯಾಮಿ

**ಮಂತ್ರಪುಷ್ಪಂ:**

ಆಂಜನೇಯಾಯ ವಿದ್ಮಹೇ! ವಾಯುಪುತ್ರಾಯ ಧೀಮಹಿ
ತನ್ನೋ ಹನುಮತ್ಪ್ರಚೋದಯಾತ್
ಶ್ರೀ ಹನೂಮತೇ ನಮಃ ಸುವರ್ಣದಿವ್ಯ ಮಂತ್ರಪುಷ್ಪಂ ಸಮರ್ಪಯಾಮಿ

(ಎಂದು ಭಕ್ತಿಯಿಂದ ಅಂಗೈಯಲ್ಲಿ ಹೂಗಳನ್ನು ಹಿಡಿದು ಹನುಮಂತನನ್ನು ಸ್ಮರಿಸುತ್ತಾ ಸ್ವಾಮಿಯ ಪಾದಪದ್ಮಗಳ ಮೇಲೆ ಸಮರ್ಪಿಸಬೇಕು. ನಮ್ಮ ಹೃದಯವೆಂಬ ಹೂವನ್ನು ಸಮರ್ಪಿಸುತ್ತಿರುವಂತೆ ಭಾವಿಸಬೇಕು. ಪೂಜೆಯಲ್ಲಿ ಪಾಲ್ಗೊಂಡವರೆಲ್ಲರಿಗೂ ಹೂಗಳನ್ನು ನೀಡಿ, ಭಕ್ತಿಯಿಂದ ತಟ್ಟೆಯಲ್ಲಿ ಇರಿಸಬೇಕೆಂದು ಹೇಳಿ, ನಂತರ ಅವುಗಳ ಮೇಲೆ ಕಲಶದ ನೀರನ್ನು ಪ್ರೋಕ್ಷಣೆ ಮಾಡಿ ಎಲ್ಲರೂ ಸಮರ್ಪಿಸಿದ ಹೂಗಳನ್ನು ಭಗವಂತನ ಪಾದಗಳ ಮೇಲೆ ಸಮರ್ಪಿಸಬೇಕು. ನಂತರ ಎಲ್ಲರೂ ಭಕ್ತಿಯಿಂದ ನಮಸ್ಕರಿಸಬೇಕು.)

**ಪ್ರದಕ್ಷಿಣೆ ನಮಸ್ಕಾರ :**

ಪ್ರದಕ್ಷಿಣ ನಮಸ್ಕಾರಾನ್ ಸಾಷ್ಟಾಂಗಾನ್ ಪಂಚಸಂಖ್ಯಯಾ
ದಾಸ್ಯಾಮಿ ಕಪಿನಾಥಾಯ ಗೃಹೇಣ ಸುಪ್ರಸೀದ ಮೇ
ಶ್ರೀಹನುಮತೇ ನಮಃ ಆತ್ಮ ಪ್ರದಕ್ಷಿಣ ನಮಸ್ಕಾರಾನ್ ಸಮರ್ಪಯಾಮಿ

(ಎಡಗಡೆಯಿಂದ ಬಲಗಡೆಗೆ ನಮಸ್ಕಾರ ಮುದ್ರೆಯೊಂದಿಗೆ ಐದು ಬಾರಿ ಪ್ರದಕ್ಷಿಣೆ ಹಾಕಬೇಕು)

ಛತ್ರಂ ಧಾರಯಾಮಿ,ಚಾಮರೈ ರ್ವೀಜಯಾಮಿ,ನೃತ್ಯಂ ದರ್ಶಯಾಮಿ
ಗೀತಂ ಶ್ರಾವಯಾಮಿ,ದರ್ಪಣಂ ದರ್ಶಯಾಮಿ,ಉಷ್ಟ್ರಾನಾ ವಾಹಾಯಾಮಿ, ವಾದ್ಯಂ
ಘೋಷಯಾಮಿ, ಸಮಸ್ತ ರಾಜೋಪಚಾರ ಭಕ್ತ್ಯುಪಚಾರ, ಶಕ್ತ್ಯುಪಚಾರ ಪೂಜಾಂ ಸಮರ್ಪಯಾಮಿ

(ಎಂದು ಹೇಳಿ, ಹೂವು, ಅಕ್ಷತೆಯನ್ನು ಸ್ವಾಮಿಯ ಪಾದಗಳ ಮೇಲೆ ಹಾಕಿ ನಮಸ್ಕರಿಸಬೇಕು)

ಅನಯಾ--ಪೂಜಾಯಾ ಶ್ರೀ ಹನುಮದ್ದೇವತಾ ಸುಪ್ರೀತಃ ಸುಪ್ರಸನ್ನೋ ವರದೋ ಭವತು ಸರ್ವೇಜನಾಃ ಸ್ಸುಖಿನೋ ಭವಂತು

**ಪುಷ್ಪಾಂಜಲಿ**

ವೈಶಾಖೇ ಮಾಸಿ ಕೃಷ್ಣಾಯಾಮ್ ದಶಮ್ಯಾಂ ಮಂದ ವಾಸರೇ
ಪೂರ್ವಾಭಾದ್ರ ಪ್ರಸೂತಾಯ ಮಂಗಳಂ ಶ್ರೀ ಹನೂಮತೇ
ಕರುಣಾರಸಪೂರ್ಣಾಯ ಫಲಾಪೂಪ ಪ್ರಿಯಾಯ ಚ
ಮಾಣಿಕ್ಯಹಾರಭೂಷಾಯ ಮಂಗಳಂ ಶ್ರೀಹನೂಮತೇ
ಸುವರ್ಚಲಾ ಕಳತ್ರಾಯ ಚತುರ್ಭುಜ ಧರಾಯ ಚ
ಉಷ್ಟ್ರಾರೂಢಾಯ ವೀರಾಯ ಮಂಗಳಂ ಶ್ರೀ ಹನೂಮತೇ
ದಿವ್ಯ ಮಂಗಳದೇಹಾಯ ಪೀತಾಂಬರಧರಾಯ ಚ
ತಪ್ತಕಾಂಚನವರ್ಣಾಯ ಮಂಗಳಂ ಶ್ರೀ ಹನೂಮತೇ
ಭಕ್ತರಕ್ಷಣ ಶೀಲಾಯ ಜಾನಕೀಶೋಕಹಾರಿಣೇ
ಜ್ವಲತ್ಪಾವಕನೇತ್ರಾಯ ಮಂಗಳಂ ಶ್ರೀ ಹನೂಮತೇ
ಪಂಪಾತೀರ ವಿಹಾರಾಯ ಸೌಮಿತ್ರಿ ಪ್ರಾಣದಾಯಿನೇ
ಸೃಷ್ಟೇಃ ಕಾರಣಭೂತಾಯ ಮಂಗಳಂ ಶ್ರೀ ಹನೂಮತೇ
ರಂಭಾವನ ವಿಹಾರಾಯ ಗಂಧಮಾದನವಾಸಿನೇ
ಸರ್ವಲೋಕೈಕನಾಥಾಯ ಮಂಗಳಂ ಶ್ರೀಹನೂಮತೇ
ಪಂಚಾನನಾಯ ಭೀಮಾಯ ಕಾಲನೇಮಿಹರಾಯ ಚ
ಕೌಂಡಿನ್ಯಗೋತ್ರಜಾತಾಯ ಮಂಗಳಂ ಶ್ರೀ ಹನೂಮತೇ
ಶ್ರೀ ಹನುಮತೇ ನಮಃ ಪುಷ್ಪಾಂಜಲಿ ಸಮರ್ಪಯಾಮಿ

# ಸಗುಣ – ನಿರ್ಗುಣ ಸಿದ್ಧಾಂತಗಳ ಅಭೇದತೆ

– ರಾ.ನ.ನ. ಮೂರ್ತಿ

ಬ್ರಹ್ಮ ಸಗುಣವೇ ಇಲ್ಲ ನಿರ್ಗುಣವೇ? ಈ ವಾದದ ಮೇಲೆ ದಾರ್ಶನಿಕ ಪಂಡಿತರಲ್ಲಿ ಹಾಗೂ ದರ್ಶನಾನುರಾಗಿ ಸಜ್ಜನರಲ್ಲಿ ತರ್ಕ-ವಿತರ್ಕಗಳು ನಡೆಯುತ್ತಲೇ ಇವೆ. ಕೆಲವರು ಸಗುಣ ಪಕ್ಷ ದತ್ತ ರಾಶಿ ರಾಶಿ ಪ್ರಮಾಣಗಳನ್ನು ಒಟ್ಟುತ್ತಿದ್ದರೆ, ಇನ್ನು ಕೆಲವರು ಅದನ್ನು ನಿರ್ಗುಣವೆಂದು ಸಾಬೀತು ಪಡಿಸಲು ಯುಕ್ತಿಗಳ ಸಾಲುಸಾಲು ಉದಾಹರಣೆಗಳನ್ನು ತುಂಬುತ್ತಾರೆ. ಆಚಾರ್ಯರುಗ ಳಲ್ಲಿಯೂ ಸಹ ಈ ಭಿನ್ನಾಭಿಪ್ರಾಯದ ಗೋಜಲುಗಳಿವೆ. ಶಂಕರಾಚಾರ್ಯರ ಸಿದ್ಧಾಂತದಲ್ಲಿ ನಿರ್ಗುಣ ಪಕ್ಷ ಪ್ರತಿಪಾದನೆ ಕಾಣುತ್ತೇವೆ. ಆದರೆ ರಾಮಾನುಜರು ಸಗುಣ ಬ್ರಹ್ಮೋಪಾಸನೆ ಮತ್ತು ಪ್ರಪತ್ತಿಯ ಬಗ್ಗೆ ಹೆಚ್ಚು ಒತ್ತು ನೀಡಿರುವುದು ಕಂಡು ಬರುತ್ತದೆ. ನಾವಿಲ್ಲಿ ಅಂತಹ  ಆಚಾರ್ಯರುಗಳ ಸಿದ್ಧಾಂತಗಳ ಸಂಕ್ಷಿಪ್ತ ರೂಪರೇಷೆಗಳನ್ನು ತಿಳಿಯುವುದು ಅವಶ್ಯ.

ಶಂಕರರ ಅಭಿಪ್ರಾಯದಲ್ಲಿ ಬ್ರಹ್ಮತತ್ವದ ಹೊರತು ಬೇರೆನೂ  ಇಲ್ಲ. ಹೇಗೆ ಹಗ್ಗದಲ್ಲಿ ಹಾವಿನ ಭ್ರಮೆಯಿದೆಯೋ, ಸೂರ್ಯನ ಪ್ರಖರ ಕಿರಣಗಳಲ್ಲಿ ಹರಿಣಗಳ ಜಲಭ್ರಮೆಯಿದೆಯೋ (ಪ್ರಾಣಿಗಳಿಗೆ ಮರೀಚಿಕೆಯ ಭ್ರಮೆ) ಅದರಂತೆಯೇ ಅವಿದ್ಯೆಯ ಕಾರಣ ಬ್ರಹ್ಮನೇ ನರ-ಕಿನ್ನರ, ದೈವ-ಗಂಧರ್ವ,ಪಶು-ಪಕ್ಷಿ ಹಾಗೂ ತೃಣ-ಲತಾದಿ ಅನೇಕ ರೂಪಗಳಲ್ಲಿ ಭಾಸಿತವಾಗುತ್ತದೆ. ಬ್ರಹ್ಮ ಒಂದೇ, ನಿರ್ಗುಣ, ನಿರಾಕಾರ ಅಲ್ಲದೆ ವ್ಯಾಪಕನೂ ಹಾಗೂ ಅಖಂಡನಾಗಿದ್ದಾನೆ. ಅವನಿಗೆ ನಾಮ, ರೂಪಗಳಲ್ಲಿ ಮಾತಿನ ಮೂಲಕ ಅವನ ಕಥನವಾಗಲಾರದು, ಮನಸ್ಸು ಸಹ ಅವನನ್ನು ಅರಿಯಲಾರದು **"ಯತ್ರ ವಾಚೋ ನಿವರ್ತ್ತಂತೇ ಅಪ್ರಾಪ್ಯಮನಸಾ ಸಹ,"** ಅದರೊಂದಿಗೆ- **"ಅಸತ್ಯೇ ವರ್ತನಿ ಸ್ಥಿತ್ವಾ, ತತಃ ಸತ್ಯಂ ಸಮೀಹತೇ "** ಎನ್ನುವಂತೆ ಹೇಳುವುದಾದರೆ ಅದನ್ನು ಅನುಭವ ಎನ್ನಬಹುದು.

ಘಟೋಽಸ್ತಿ ಘಡಾ ಎನ್ನುವಲ್ಲಿ, ಘಟ ವಸ್ತುವಿನ ಹಾಗೂ ಅಸ್ತಿತ್ವದ ಹೇಳಿಕೆಯಾಗುತ್ತದೆ. ಮತ್ತೆ ಪಟೋಽಸ್ತಿ ಅಂದರೆ ವಸ್ತ್ರ. ಈ ವಾಕ್ಯದಲ್ಲಿಯೂ ಸಹ ಪದಾರ್ಥ ಹಾಗೂ ಅಸ್ತಿತ್ವದ ಅರಿವಾಗುತ್ತದೆ. ಮೊದಲವಾಕ್ಯದಲ್ಲಿ ಘಟಪದಾರ್ಥದ (ಘಟದ) ಅರಿವಿನ ದ್ದಾದರೆ, ಅದೇ ಜ್ಞಾನ ಎರಡನೆಯ ವಾಕ್ಯದಲ್ಲಿ ನಿವೃತ್ತವಾಗುತ್ತದೆ. ಆದರೆ ಅಸ್ತಿತ್ವದ ಅನುಭವ ಮೊದಲ ವಾಕ್ಯದಂತೆಯೇ ಎರಡನೆಯ ವಾಕ್ಯದಲ್ಲಿಯೂ ಸಹ ಅನುವೃತ್ತವಾಗುತ್ತದೆ. ಹೀಗೆ ಎಷ್ಟೇ  ವಾಕ್ಯಗಳನ್ನು ರಚಿಸಿದರೂ, ಎಲ್ಲ ವಾಕ್ಯಗಳಲ್ಲಿ  ಮತ್ತೆ ಪದಾರ್ಥಗಳ ನಿವೃತ್ತಿಯಾಗುತ್ತಿರುತ್ತದೆ. ಕೇವಲ ಅಸ್ತಿತ್ವದ ಅನುಭವ ಎಲ್ಲೆಡೆಯೂ ಸಮವಾಗಿಯೇ ಇರುತ್ತದೆ. ಇದರಿಂದ ಬರುವ ನಿಷ್ಕರ್ಷೆಯೆಂದರೆ ಉಳಿದ ಎಲ್ಲ ಪದಾರ್ಥಗಳು ಅನಿತ್ಯವೂ, ಕೇವಲ ಅಸ್ತಿತ್ವವೇ ನಿತ್ಯವೆನಿಸುತ್ತದೆ. ಅದು ನಿತ್ಯ ವಾಗಿದ್ದು ಅಸ್ತಿತ್ವದ ಅನುಭವದ ಹೊರತು ಬೇರೇನೂ ಇಲ್ಲ. ಅದೇ ಬ್ರಹ್ಮ. ಅನುಭೂತಿಯ ಹೊರತು ಎಲ್ಲ ಪದಾರ್ಥಗಳು ಹೇಗೆ ಅನಿತ್ಯವೋ ಹಾಗೆ ಅವುಗಳಿಗೆ ಯಾರು ಕರ್ತನಿಲ್ಲ, ಯಾವುದೇ ವಿಷಯವೂ ತನಗೆ ತಾನೇ ಸಿದ್ಧವಾಗುವುದಿಲ್ಲ. ಯಾವುದು ಯಾವ ರೀತಿಯಲ್ಲಿಯೂ ನಿವೃತ್ತಗೊಳ್ಳುವುದಿಲ್ಲವೋ  ಅದು ಸರ್ವಥಾ-ಸರ್ವದಾ ಅನುವರ್ತ್ಯಮಾನ ವಾಗುತ್ತಿರುತ್ತದೆ. ಅದೇ ನಿತ್ಯವಾದುದು. ಮತ್ತೆ ಯಾವುದು ನಿವೃತ್ತವಾಗುತ್ತದೋ ಮತ್ತು ಯಾವುದರ ಅನುವೃತ್ತಿಯಿಲ್ಲವೋ ಅದು ಅನಿತ್ಯ.



ಹೀಗೆ ಶಂಕರ ಸಿದ್ಧಾಂತದನುಸಾರ ಒಂದು ನಿರ್ಗುಣ, ನಿರೀಹ, ನಿರಂಜನ, ನಿರವಚ್ಛಿನ್ನ, ಅನಿರ್ವಚನೀಯ ಹಾಗೂ ಸ್ವಯಂವೇದ್ಯ ಬ್ರಹ್ಮನ ಹೊರತು ಯಾವುದೇ ತತ್ವವಿಲ್ಲ. ಮಾಯೆಯನ್ನು ಶಂಕರಾಚಾರ್ಯರು ಸತ್ ಎಂದಾಗಲಿ, ನ ಅಸತ್ ಎಂದಾಗಲೀ ನಲುಭಯಾತ್ಮಕ ವೆಂದಾಗಲೀ ಒಪ್ಪುವುದಿಲ್ಲ, **"ಸ ಸತೋ ಸಾ ನಸ ತೀಸಾ ನೋಮ ಯಾತ್ಮಾ ವಿರೋಧತ"**

ಇದರಂತೆ ಮಾಯೆ ಇಲ್ಲವೇ ಅವಿದ್ಯೆಯೂ ಸಹ ಅನಿರ್ವಚನೀಯವೇ. ಒಟ್ಟಾರೆ ಸಾರಾಂಶವೆಂದರೆ-ಶಂಕರರು ಜಗತ್ತನ್ನು ವ್ಯಾವಹಾರಿಕ ಸತ್ಯವೆಂದು ತಿಳಿದಿದ್ದರೂ ಸಹ ವಸ್ತುತಃ ನಿರ್ಗುಣ ಬ್ರಹ್ಮವನ್ನೇ ಸತ್ಯವೆಂದು ಒಪ್ಪುತ್ತಾರೆ.

ಶಂಕರರ ಸಿದ್ಧಾಂತ ಅದ್ವೈತ ಸಿದ್ಧಾಂತವೆನಿಸಿ ಕೊಳ್ಳುತ್ತದೆ. ರಾಮಾನುಜರ ಸಿದ್ಧಾಂತಗಳಲ್ಲಿ ಅಂದರೆ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಚಿದಚಿದ್ವೈಶಿಷ್ಟ ಬ್ರಹ್ಮನನ್ನು ಸಗುಣವೆಂದು ತಿಳಿದು ಅವನ ಭಕ್ತಿ ಮತ್ತು ಪ್ರಪತ್ತಿಯಲ್ಲಿ ಪೂರ್ಣ ಪ್ರಕಾರ ನಡೆಯುತ್ತಾರೆ. ರಾಮಾನುಜರಂತೆಯೂ ಸಹ ಬ್ರಹ್ಮ ಒಂದೇ, ಆದರೆ ಅವನು ಚಿದಚಿದ್ ವಿಶಿಷ್ಟನು.

ಈ ಇಡೀ ಪ್ರಕೃತಿ, ಇಡೀ ಸೃಷ್ಟಿ ಹಾಗೂ ಜೀವ ಬ್ರಹ್ಮನ ಶರೀರ ಮತ್ತು ಬ್ರಹ್ಮ ಶರೀರಿ, ಹೇಗೆ ಮೋಹನ ಮತ್ತು ಶೋಭನ ಯಾವುದೇ ಶರೀರದ ಹೆಸರಲ್ಲವೋ, ಜೀವದ ಹೆಸರಲ್ಲವೋ ಆದರೆ ಶರೀರಾವಚ್ಛಿನ್ನ ಜೀವ ಅಂದರೆ ಶರೀರ ಸಹಿತ ಜೀವದಿ ಮೋಹನ, ಶೋಭನ ಮುಂತಾದವರು ಚಿನ್ಹೆಯನ್ನು ಹೊಂದುತ್ತಾರೆ.

ಆದರಂತೆ,ಚಿತ್‌ಜೀವ ಹಾಗೂ ಅಚಿತ್-ಪ್ರಕೃತಿಯಿಂದ ವಿಶಿಷ್ಟ ಅಂದರೆ ಸಹಿತ (ಕೂಡಿದ) ಬ್ರಹ್ಮವೇ ಶಿವ-ವಿಷ್ಣು ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತದೆ.

ಶಂಕರರ ಅನುಸಾರ ಯಾರು ಸಾಯುವುದಿಲ್ಲ. ಹುಟ್ಟುವುದಿಲ್ಲ, ಎಲ್ಲಿಯೂ ಹೋಗುವುದಿಲ್ಲ, ಎಲ್ಲಿಂದಲೂ ಬರುವುದಿಲ್ಲ. ಏಕೆಂದರೆ,ಇವೆಲ್ಲವೂ ಭಯಾತ್ಮಕವಾದುವು. ಅಂತೆಯೇ ಭಕ್ತಿಯೂ ಸಹ ಅವಿದ್ಯೆಯೇ, ಕಾರಣ-ಸೇವಕ ಸೇವ್ಯ ಭಾವದ ಹೊರತು ಭಕ್ತಿಯೇ ಉಂಟಾಗುವುದಿಲ್ಲ. ಯಾವಾಗ ಬ್ರಹ್ಮಾತಿರಿಕ್ತವಾದ ಎಲ್ಲವೂ ಅವಿದ್ಯೆಯೇ ಭಕ್ತಿಯೂ ಸಹ ಇದರೊಳಗೇ ಇರುತ್ತದೆ. ಆದರೆ ರಾಮಾನುಜರ ಅಭಿಪ್ರಾಯದಲ್ಲಿ ಭಕ್ತಿ ಮತ್ತು ಪ್ರಪತ್ತಿ ಮಹಾಮಹಿಮಾಮಯಿ ಸರ್ವಥಾ ಸತ್ಯ ಹಾಗೂ ಏಕಮಾತ್ರ ಜೀವಿಗಳ ಉದ್ಧಾರನ ಉಪಾಯವಾಗಿದೆ.

ಮೇಲೆ ಹೇಳಿದ ಶಾಸ್ತ್ರಾರ್ಥವನ್ನು ಕೇಳಿ ಬಹಳಷ್ಟು ಮಂದಿ ಗೋಜಲಿಗೆ ಸಿಲುಕಿದ್ದಾರೆ. ಅವರು ಒಮ್ಮೆ ರಾಮಾನುಜರು ಹೇಳಿದ ಮಾರ್ಗದಲ್ಲಿ ನಡೆದು ಭಕ್ತಿ ಮತ್ತು ಪ್ರಪತ್ತಿಯ ಮೂಲಕ ಭಗವಂತನನ್ನು ಹೊಂದುವ ಅಭಿಲಾಷೆ ಹೊತ್ತರೆ, ಮತ್ತೊಮ್ಮೆ ಶಂಕರರ ಅಭಿಪ್ರಾಯದಂತೆ ನಿರ್ಗುಣ ವಿಚಾರಧಾರೆಯಲ್ಲಿ ಮುಳುಗೇಳುತ್ತಾರೆ.

ಇದರಿಂದಾಗಿ ಬಹಳಷ್ಟು ಜನ ವಿಭ್ರಾಂತ ರಾಗಿ ಒಮ್ಮೆ ಬ್ರಹ್ಮನನ್ನು ಸಗುಣವನ್ನಾಗಿಯೂ, ಇನ್ನೊಮ್ಮೆ ನಿರ್ಗುಣವೆಂದು ಸಾಧಿಸಿ ಒಬ್ಬರ ಮೇಲೊಬ್ಬರು ಕೆಸರೆರ ಚಾಡುವುದನ್ನು ಕಂಡಿದ್ದೇವೆ.

ಸಾಮಾನ್ಯವಾಗಿ ಹೇಳುವುದು ಎರಡು ಸಿದ್ಧಾಂತಗಳಲ್ಲಿಯೂ ಅಭೇದವಿದೆ. ಎರಡೂ ಸಿದ್ಧಾಂತಗಳು ಮೇಲ್ನೋಟಕ್ಕೆ ಭಿನ್ನವೆಂದು ಕಂಡರೂ ವಸ್ತುತಃ ಅಭಿನ್ನವೇ-ಒಂದೇ. ಶಂಕರಾಚಾರ್ಯರು ಬ್ರಹ್ಮನನ್ನು ನಿರ್ಗುಣ, ನಿರಾಕಾರ ಹಾಗೂ ಒಂದು ಅಖಂಡ ಎಂದು ಹೇಳುತ್ತಲೂ ಸಹ ಅವಿದ್ಯೆಗೆ ಸರಿಯಾಗಿ ತಿಳುವಳಿಕೆಯುಳ್ಳ ಪರಿಭಾಷೆಯನ್ನು ಕೊಡುವುದಿಲ್ಲ.

ಕೇವಲ ಅನಿರ್ವಚನೀಯವೆಂದು ತಳ್ಳಿ ಹಾಕುತ್ತಾರೆ. ಜತೆ ಜತೆಗೇ ಜಗತ್ತನ್ನು ವ್ಯಾವಹಾರಿಕ ಸತ್ಯವೆಂದು ತಿಳಿಸುತ್ತಾರೆ. ಇತ್ತ ರಾಮಾನುಜರು ಹಾಗೂ ಉಳಿದ ಭಕ್ತರು ಬ್ರಹ್ಮನನ್ನು ಸಗುಣ ಹಾಗೂ ತನ್ನ ಲೀಲಾವಿಭೂತಿಯ ಅವತಾರನಾದವನು ಭಕ್ತರ ರಕ್ಷಕನೆಂದು ಸಾಧಿಸಿದರೂ ಸಹ ತಮ್ಮ ಗ್ರಂಥಗಳಲ್ಲಿ ನಿರ್ಗುಣ ಪಕ್ಷವನ್ನು ಗೌರವಿಸಿರುವುದನ್ನು ಕಾಣುತ್ತೇವೆ.

ಶ್ರೀಮದ್ಭಾಗವತ ಭಕ್ತಿಯ ಮಹಾಸಾಗರವೆಂದು ಎಲ್ಲರೂ ತಿಳಿದಿದ್ದಾರೆ, ಎಲ್ಲರಿಗೂ ಗೊತ್ತಿದೆ. ಆ ಗ್ರಂಥದ ಮಂಗಳ ಶ್ಲೋಕದಲ್ಲಿನ ವಿಷಯ ಗಮನವಿಟ್ಟು ನೋಡಿದಾಗ ಅರಿವಾಗುವುದು.

"ಯಸತ್ತ್ವಾದ ಮೃಷೈವ ಭಾತಿ ಸಕಲಂ ರಜ್ಜಾಯ ಥಾಹಿಭ್ರಮ" ಮತ್ತೆ ಹತ್ತನೇ ಸ್ಕಂಧದಲ್ಲಿ ಬರೆದಿರುವುದು.

"ಭವ್ರೋ ನಿರೋಧಃ ಸ್ಥಿತಿರಪ್ಯವಿದ್ಯಯಾ ಯತಃ ಸ್ಥಿತಾಃ ತೃಪ್ಯಭಯಾಶ್ರ ಯಾತ್ಮನಿ",ಭಗವದ್ ಗೀತೆಯೂ ಸಹ ಕ್ಲೋತೋಽಧಿಕತರ ಸ್ತೇಷಾಮವ್ಯಕ್ತಮಾಸಕ್ತ ಚೇತಸಾಮ್ ಎಂದು ಹೇಳಿ ಎರಡೂ ಪಕ್ಷಗಳ ಅಸ್ತಿತ್ವ ಹಾಗೂ ಸಮಾನ ಫಲತ್ವವನ್ನು ಸಿದ್ಧಿಪಡಿಸುತ್ತವೆ.



# ಮಂಗಳಗಿರಿಯ ಪಾನಕನರಸಿಂಹನ ಮಹಾತ್ಮ್ಯೆ

ವಿ. ನಾಗೇಂದ್ರ ಪ್ರಸಾದ್
98454 00816

ವಿಜಯವಾಡದಿಂದ 8.3ಕಿ.ಮೀ.ದೂರದಲ್ಲಿ ಮಂಗಳಗಿರಿಯ ಬೆಟ್ಟದ ಮೇಲೆ ಪಾನಕ ನರಸಿಂಹನ ಮಂದಿರವಿದೆ. ಮಂಗಳ ಎಂದೆ ಶುಭ, ಗಿರಿ ಎಂದರೆ ಬೆಟ್ಟ. ಶುಭಪ್ರದವಾದದ್ದು ಈ ಮಂಗಳಗಿರಿ. ಈ ಗಿರಿಯಲ್ಲಿ ಮೂರು ನರಸಿಂಹದೇವರ ದೇವಸ್ಥಾನವಿದೆ. ಬೆಟ್ಟದ ಕೆಳಗೆ ಇರುವ ಲಕ್ಷ್ಮಿನರಸಿಂಹ ದೇವರು,ಬೆಟ್ಟದ ಮಧ್ಯಭಾಗದಲ್ಲಿರುವ ಪಾನಕ ನರಸಿಂಹ ದೇವರು ಹಾಗೂ ಬೆಟ್ಟದ ತುದಿಯಲ್ಲಿರುವ ಗಂಡಲ ನರಸಿಂಹ ದೇವರು. ಈಬೆಟ್ಟ ಆನೆಯ ಆಕಾರದಲ್ಲಿದೆ, ಯಾವ ಕಡೆಯಿಂದ ನೋಡಿದರೂ ಬೆಟ್ಟ ಆನೆಯ ಆಕಾರದಲ್ಲಿದೆ.

### ಆನೆಯಾಕಾರದ ಬೆಟ್ಟದ ಐತಿಹ್ಯ

ಪಾರಿಯಾತ್ರ ಎಂಬ ರಾಜನಿಗೆ ಹ್ರಸ್ವಶೃಂಗಿ ಎಂಬ ಮಗನಿದ್ದನು. ಅವನು ತೀರ್ಥಯಾತ್ರೆಗೆ ಹೊರಟು ಎಲ್ಲ ಪವಿತ್ರ ಸ್ಥಾನಗಳನ್ನು ನೋಡಿಕೊಂಡು ಮಂಗಳಗಿರಿಗೆ ಬಂದನು. ಅವನಿಗೆ ಈ ಪ್ರದೇಶ ನೋಡಿ ಬಹಳ ಕುತೂಹಲವಾಗಿ, ಮೂರುವರ್ಷಗಳ ಕಾಲ ಭಗವಾನ್ ವಿಷ್ಣುವನ್ನು ಕುರಿತು ತಪಸ್ಸು ಮಾಡಿದನು. ದೇವತೆಗಳೆಲ್ಲಾ ಇವನ ತಪಸ್ಸು ನೋಡಿ ಮೆಚ್ಚಿ ಮತ್ತಷ್ಟು ತಪಸ್ಸನ್ನು ಇಲ್ಲೇ ಮಾಡು ಎಂದು ಆಶೀರ್ವದಿಸಿದರು. ಅದರಂತೆ ಹ್ರಸ್ವಶೃಂಗಿ ತಪಸ್ಸ ಮಾಡುತ್ತಿದ್ದನು. ಪಾರಿಯಾತ್ರ ರಾಜನು ತನ್ನ ಮಗನು ತಿರುಗಿ ಬರದಿರಲು ಅವನನ್ನು ಹುಡುಕಿ ರಾಜ್ಯಕ್ಕೆ ಕರೆ ತರಬೇಕೆಂದು ತನ್ನ ಸೈನ್ಯ ಸಮೇತ ಎಲ್ಲಾ ಕಡೆ ಹುಡುಕುತ್ತಾ ಕೊನೆಗೆ ಈ ಪ್ರಾಂತಕ್ಕೆ ಬಂದನು. ತಂದೆ ಬಂದ ಕಾರಣವನ್ನು ತಿಳಿದ ಹ್ರಸ್ವಶೃಂಗಿ ಕೂಡಲೇ ಒಂದು ಆನೆಯ ಆಕಾರದ ಶಿಲೆಯಾಗಿ ನಿಂತನು. ವಿಷ್ಣು ತನ್ನ ಭಕ್ತನ ಸೇವೆಯಿಂದ ಸಂಪ್ರೀತನಾಗಿ ಈ ಬೆಟ್ಟದಲ್ಲಿಯೇ ಪಾನಕ ನರಸಿಂಹನಾಗಿ ಬಂದು ವಾಸ ಮಾಡಿದನು. ಈ ಬೆಟ್ಟ ಅನಾದಿ ಕಾಲದ್ದು ಎಂದು ಸೂಚಿಸಲು ಕೃತಯುಗದಲ್ಲಿ ಈ ಬೆಟ್ಟಕ್ಕೆ ಅಂಜನಾದ್ರಿ ಎಂದೂ, ತ್ರೇತಾಯುಗದಲ್ಲಿ ತೋತಾದ್ರಿ ಎಂದೂ ದ್ವಾಪರಯುಗದಲ್ಲಿ ಮುಕ್ತಾದ್ರಿ ಎಂದೂ ಹಾಗೂ ಕಲಿಯುಗದಲ್ಲಿ ಮಂಗಳಾದ್ರಿ (ಮಂಗಳಗಿರಿ) ಎಂದೂ ಹೆಸರಿದೆ. ಮಹಾಲಕ್ಷ್ಮಿ ಇಲ್ಲಿ ತಪಸ್ಸು ಮಾಡಿದ್ದರಿಂದ ಈ ಬೆಟ್ಟಕ್ಕೆ ಮಂಗಳ ಗಿರಿ ಎಂಬ ಹೆಸರು ಬರಲು ಕಾರಣವಾಯಿತು.

### ನರಸಿಂಹನಿಗೆ ಪಾನಕನರಸಿಂಹ ಎಂದು ಹೆಸರು ಬಂದ ಐತಿಹ್ಯ

ನಮುಚಿ ಎಂಬ ಅಸುರನು ಬ್ರಹ್ಮದೇವರನ್ನು ಕುರಿತು ತಪಸ್ಸು ಮಾಡಿದನು. ಬ್ರಹ್ಮದೇವರು ಪ್ರತ್ಯಕ್ಷರಾಗಿ ವರವನ್ನು ಕೇಳೆಂದಾಗ ತಾನು ಅವಧ್ಯನಾಗಬೇಕು ಎಂಬ ವರವನ್ನು ಬೇಡಿದ ಬ್ರಹ್ಮದೇವರು ಇಂತಹ ವರವನ್ನು ಕೊಡಲು ನಾನು ಶಕ್ತನಲ್ಲ ಎಂದಾಗ ನಮುಚಿ **"ಹಸಿಯಾದ ಪದಾರ್ಥದಿಂದಲೋ ಅಥವಾ ಒಣಗಿದ ಪದಾರ್ಥ ದಿಂದಲೋ ನನ್ನ ಮರಣ ಬರಬಾರದು"** ಎಂದು ವರವನ್ನು ಬೇಡಿದಾಗ ಬ್ರಹ್ಮದೇವರು ಅಸ್ತು ಎಂದರು. ಬ್ರಹ್ಮವರದಿಂದ ಮತ್ತನಾದ ನಮುಚಿ ಇಂದ್ರ ಲೋಕವನ್ನು ಆಕ್ರಮಣ ಮಾಡಿ ಎಲ್ಲವನ್ನು ನಾಶ ಮಾಡತೊಡಗಿದನು. ಇಂದ್ರಾದಿದೇವತೆಗಳು ವಿಷ್ಣುವಿನ ಮೊರೆ ಹೊಕ್ಕರು, ಭಗವಂತ ನಾನು ರಕ್ಷಣೆ ಮಾಡುತ್ತೇನೆ ಎಂದು ಭರವಸೆ ಕೊಟ್ಟು ನಮುಚಿಯ ಮೇಲೆ ಆಕ್ರಮಣ ಮಾಡಲು ಸೂಚಿಸಿದನು. ಅಂತೆಯೇ ಇಂದ್ರಾದಿ ದೇವತೆಗಳು ತಮ್ಮ ಸೈನ್ಯದೊಂದಿಗೆ ನಮುಚಿ ಇದ್ದಲ್ಲಿಗೆ ಬಂದು ಅವನನ್ನು ಆಕ್ರಮಿಸಿದರು. ಇದನ್ನು ತಿಳಿದ ನಮುಚಿ ಕೂಡಲೇ ಒಂದು ಗುಹೆಯಲ್ಲಿ ಅದೃಶ್ಯ ರೂಪದಲ್ಲಿ ಅವಿತುಕೊಂಡನು. ಪರಮಾತ್ಮ ತನ್ನ ಚಕ್ರವನ್ನು ನೀಡಿ ಅದನ್ನು ಗುಹೆಯ ಒಳಗೆ ಪ್ರಯೋಗಿಸೆಂದನು. ಇಂದ್ರ ಪರಮಾತ್ಮನ ಚಕ್ರವನ್ನು ಉಗ್ರರೂಪದಿಂದ ನಮುಚಿ ಯನ್ನು ಸಂಹಾರ ಮಾಡಿದನು. ನಮುಚಿಯ ದೇಹದಿಂದ ಹರಿದ ರಕ್ತ ಬೆಟ್ಟದಲ್ಲಿ ಪ್ರವಾಹ ರೂಪದಲ್ಲಿ ಹರಿಯಿತು, ಇದನ್ನು ನೋಡಿ ಇಂದ್ರಾದಿ ದೇವತೆಗಳು ಭೀತಿಗೊಂಡು ಶಾಂತನಾಗೆಂದು ಪ್ರಾರ್ಥಿಸಿದರು. ಈ ಪ್ರಸಂಗ ಕೃತಯುಗದಲ್ಲಿ ನಡೆಯಿತು. ಪರಮಾತ್ಮ ಅಮೃತವನ್ನು ನನಗೆ ಸಮರ್ಪಿಸಿದರೆ ನಾನು ಶಾಂತನಾಗುತ್ತೇನೆಂದನು. ಅದರಂತೆ ಇಂದ್ರಾದಿ ದೇವತೆಗಳು ಅವನ ಬಾಯಿಗೆ ಅಮೃತವನ್ನು ಸುರಿದರು ಅದರಿಂದ ಪರಮಾತ್ಮ ಶಾಂತನಾದನು. ತ್ರೇತಾ,ದ್ವಾಪರ ಹಾಗೂ ಕಲಿಯುಗದಲ್ಲಿ ನೀನು ಸಮರ್ಪಿಸಿದರೆ ನಾನು ಶಾಂತನಾಗುವೆ ಎಂದು ನುಡಿದನು. ನಮುಚಿಯನ್ನು ಸಂಹಾರ ಮಾಡಿದ್ದರಿಂದ ಇವನಿಗೆ ಸುದರ್ಶನ ನರಸಿಂಹಸ್ವಾಮಿ ಎಂದು ಹೆಸರಾಯಿತು ಯುಗಾನುಸಾರವಾಗಿ ಅವನಿಗೆ ಅಮೃತದ ನರಸಿಂಹ, ತುಪ್ಪದ ನರಸಿಂಹ, ಹಾಲಿನ ನರಸಿಂಹ ಹಾಗೂ ಪಾನಕದ ನರಸಿಂಹ ಎಂದಾಯಿತು.



ಪಾನಕ ನರಸಿಂಹಮೂರ್ತಿ ಚತುರ್ಭುಜಗಳಿಂದ ಕೂಡಿದೆ, ಮೇಲಿನ ಎರಡು ಕೈಗಳಲ್ಲಿ ಶಂಖ ಹಾಗೂ ಚಕ್ರಗಳನ್ನು ಧಾರಣೆ ಮಾಡಿದ್ದರೆ, ಕೆಳಗಿನ ಎರಡು ಕೈಗಳು ಅಭಯ ಹಾಗೂ ವರಮುದ್ರೆಯನ್ನು ನೀಡುತ್ತಿದ್ದಾನೆ. ನರಸಿಂಹಮೂರ್ತಿಯ ಬಾಯಿ ಸುಮಾರು 15 ಸೆಂಟಿ ಮೀಟರಿನಷ್ಟು ಅಗಲವಾಗಿದೆ. ಈಗ ಮೂರ್ತಿಗೆ ಮುಖವಾಡವನ್ನು ಹಾಕಿರುವುದರಿಂದ ನಮಗೆ ವಿಗ್ರಹದ ಬಾಯಿ ಕಾಣಿಸುವುದಿಲ್ಲ. ಇಲ್ಲಿ ಮಂದಿರವು ಬೆಳಗ್ಗೆ 7 ರಿಂದ ಮಧ್ಯಾಹ್ನ 3 ರ ವರೆಗೆ ಹಾಗೂ ಸಂಜೆ 4 ರಿಂದ ರಾತ್ರಿ 8 ರವರೆಗೆ ತೆರೆದಿರುತ್ತದೆ. ರಾತ್ರಿ ಕಾಲದಲ್ಲಿ ದೇವತೆಗಳು ಬಂದು ನರಸಿಂಹನನ್ನು ಸೇವೆ ಮಾಡುತ್ತಾರೆ ಎಂದು ಸ್ಥಳೀಯರ ಅನಿಸಿಕೆ. ನಾವು ನಿವೇದನೆ ಮಾಡಿದ ಪಾನಕ ನರಸಿಂಹ ಸ್ವೀಕರಿಸುತ್ತಾನೆ ಎಂಬುದಕ್ಕೆ ಬಾಯಿಯಿಂದ ಬರುವ ಶಬ್ದವೇ ಸಾಕ್ಷಿ.

ಶಂಖದಿಂದ ಪಾನಕ ಸುರಿದಾಗ ಗಂಟಲಿನಿಂದ ಶಬ್ದ ಬರುತ್ತದೆ. ಶಬ್ದ ಕ್ಷೀಣವಾಗಿ ಕೇಳಿಸದಾದಾಗ ನಮ್ಮ ನಿವೇದನೆ ಪೂರ್ತಿಯಾಯಿತು. ಮಿಕ್ಕ ಪಾನಕವನ್ನು ಪ್ರಸಾದವಾಗಿ ಇಲ್ಲಿ ನೀಡುತ್ತಾರೆ. (ಬಹಳ ಹಿಂದೆ ನಾವೇ ಪಾನಕವನ್ನು ನಿವೇದನೆಯನ್ನು ಮಾಡಬಹುದಿತ್ತು ಆದರೆ ಈಗ ಅರ್ಚಕರೇ ನಮ್ಮ ಪರವಾಗಿ ಪಾನಕವನ್ನು ಸಮರ್ಪಿಸುತ್ತಾರೆ. ಶಬ್ದವೂ ಕೂಡ ಜನ ಜಂಜಾಟದಿಂದ ಕೇಳಿಸುವುದಿಲ್ಲ.) ಪಾನಕ ನರಸಿಂಹನ ಮಂದಿರದ ಮೇಲೆ ಸುಮಾರು 50 ಮೆಟ್ಟಿಲುಗಳನ್ನು ಹತ್ತಿದಾಗ ಸಿಗುವುದೇ ರಾಜ ಲಕ್ಷ್ಮಿನಾಮಕ ಮಹಾಲಕ್ಷ್ಮಿ. ಈ ಮಂದಿರದ ಪಕ್ಕದಲ್ಲೇ ಸುಂದರವಾದ ರಂಗನಾಥನ ಮೂರ್ತಿಯಿದೆ.

### ಬೆಟ್ಟದ ಕೆಳಗೆ ಇರುವ ಲಕ್ಷ್ಮಿನರಸಿಂಹದೇವರು

ಮಂಗಳಗಿರಿಯನ್ನು ಏರುವ ಮೊದಲೇ ಸಿಗುವ ಮಂದಿರ ಲಕ್ಷ್ಮಿ ನರಸಿಂಹ ಮಂದಿರ. ಇಲ್ಲಿ ಮಹಾಲಕ್ಷ್ಮಿಯನ್ನು ಎಡ ಅಂಕೆ (ತೊಡೆ) ಯ ಮೇಲೆ ಕೂಡಿಸಿಕೊಂಡು ಸೌಮ್ಯರೂಪದಿಂದ ಇದ್ದಾನೆ. ಈ ನರಸಿಂಹ ದೇವರನ್ನು ಪಾಂಡವರು ತಾವು ವನವಾಸದಲ್ಲಿ ಸಂಚಾರ ಮಾಡುವ ವೇಳೆಯಲ್ಲಿ ಇಲ್ಲಿಗೆ ಬಂದು ನರಸಿಂಹದೇವರನ್ನು ಪ್ರತಿಷ್ಠಾಪಿಸಿದ್ದಾರೆ. ಈ ಮಂದಿರ ದ್ವಾಪರ ಕಾಲದ್ದಾಗಿದ್ದು ಬಹಳ ಪುರಾತನವಾಗಿದೆ. ಇಲ್ಲಿ ಕೃಷ್ಣ ಬಳಸುತ್ತಿದ್ದ **"ದಕ್ಷಿಣವೃತ್ತ ಶಂಖ"** ಎಂಬ ಶಂಖ ನರಸಿಂಹದೇವರ ಬಳಿಯಿದೆ ಎಂದು ಸ್ಥಳೀಯರು ಹೇಳುತ್ತಾರೆ. ವಿಶೇಷ ದಿನಗಳಲ್ಲಿ ನರಸಿಂಹ ದೇವರಿಗೆ 108 ಸಾಲಿಗ್ರಾಮಗಳಿಂದ ಕೂಡಿದ ಸಾಲಿಗ್ರಾಮಹಾರ ಹಾಕುತ್ತಾರೆ.

ವಿಜಯನಗರದ ಅರಸರಾದ ಕೃಷ್ಣದೇವರಾಯ ಈ ದೇವಾಲಯವನ್ನು ಕಟ್ಟಿಸಿ ಜೀರ್ಣೋದ್ಧಾರ ಮಾಡಿದನು ಎಂದು ಇಲ್ಲಿನ ಶಿಲಾಶಾಸನಗಳು ಹೇಳುತ್ತವೆ. ಬ್ರಹ್ಮವೈವರ್ತ ಪುರಾಣದಲ್ಲಿ ಈ ದೇವಾಲಯದ ಮಹಾತ್ಮೆಯನ್ನು ಸಾರುವ ಕಥೆಯಿದೆ.

### ಬೆಟ್ಟದ ಮೇಲೆ ಇರುವ ಗೊಂಡಲ ನರಸಿಂಹದೇವರು

ಬೆಟ್ಟದ ಮೇಲ್ಭಾಗದಲ್ಲಿ ನರಸಿಂಹದೇವರ ಮೂರ್ತಿಯಿಲ್ಲ ಕೇವಲ ಒಂದು ಚಿಕ್ಕ ಮಂದಿರವಿದೆ. ನಮ್ಮ ತಾಪತ್ರಯಗಳು ಪರಿಹಾರವಾಗಬೇಕಾದರೆ ಇಲ್ಲಿ ಬಂದು ತುಪ್ಪದ ದೀಪವನ್ನು ಹಚ್ಚಿ ಪ್ರಾರ್ಥಿಸಿಕೊಳ್ಳಬೇಕು.

ಪಾನಕನರಸಿಂಹದೇವರ ಬ್ರಹ್ಮೋತ್ಸವವನ್ನು ಬಹಳ ವೈಭವದಿಂದ ಆಚರಿಸುತ್ತಾರೆ. ಫಾಲ್ಗುಣಮಾಸದಲ್ಲಿ ನಡೆಯುವ ಬ್ರಹ್ಮೋತ್ಸವವನ್ನು ಕೃಷ್ಣನ ಆಜ್ಞೆಯ ಮೇರೆಗೆ ಧರ್ಮರಾಜನು ಪಾನಕನರಸಿಂಹದೇವರ ಬ್ರಹ್ಮೋತ್ಸವಕ್ಕೆ ಚಾಲನೆ ನೀಡಿದನು. ಅಂದಿನಿಂದಲೂ ಅನುಚಾನವಾಗಿ ಫಾಲ್ಗುಣ ಮಾಸದಲ್ಲಿ ಬ್ರಹ್ಮೋತ್ಸವ ನಡೆಯುತ್ತಿವೆ.

ಕಳೆದ ಸಂಚಿಕೆಯಿಂದ

ರಾಕ್ಷಸರನ್ನು ನೋಡಿದ ಭೇರುಂಡನು, ಆ ಮನುಷ್ಯನು ಸಾಮಾನ್ಯನಲ್ಲ ಎಂದು ಅವರ ಮಾತಿನಿಂದಲೇ ಅರಿತನು. ಆದರೂ, ರಾಕ್ಷಸ ವೀರರೇ, ಸಮಾಧಾನದಿಂದಿರಿ! ನನ್ನನ್ನು ಸಂಹರಿಸಲು ವೀರಾವೇಶದಿಂದ ಬಂದಿರುವರೆಂದು ತೋರುತ್ತದೆ. ಆದರೆ ನಾನು ಹೆದರುವುದಿಲ್ಲ. ಆ ರಾಜನನ್ನು ನನ್ನ ಪ್ರತಾಪನಿಂದ ಯುಕ್ತಿಯಿಂದ ಮತ್ತು ಸೈನ್ಯದೊಂದಿಗೆ ಎದುರಿಸುತ್ತೇನೆ. ನನ್ನ ಪರಾಕ್ರಮ ಸಾಹಸದಿಂದ ಅವನನ್ನು ಹೇಳ ಹೆಸರಿಲ್ಲದಂತೆ ಮಾಡಿ ನನ್ನ ಪ್ರಭುವಾದ ರಾವಣನಿಗೆ ನಿವೇದಿಸುತ್ತೇನೆ. ಈ ಕಾರ್ಯದಿಂದ ಈ ಲೋಕದಲ್ಲಿ ಭೇರುಂಡ ಯಾರೆಂದು ಎಲ್ಲರಿಗೂ ತಿಳಿಯುತ್ತದೆ ಎಂಬ ವೀರಾವೇಷದ ನುಡಿಗಳನ್ನಾಡುತ್ತಾ ಸುದರ್ಶನ ರಾಜನೆಡೆಗೆ ತೆರಳಿದನು. ಅವರ ನಡುವೆ ಭೀಕರ ಯುದ್ಧ ನಡೆಯಿತು. ದಕ್ಷಿಣದಲ್ಲಿನ ಸಮುದ್ರಘೋಷಗಳಂತಹ ಹಾಹಾಕಾರದಿಂದ ಆ ಪ್ರದೇಶವು ತುಂಬಿಹೋಯಿತು. ಎಲ್ಲೆಲ್ಲೂ ರಕ್ತದ ಪ್ರವಾಹವೇ. ವೀರರ ತೋಳುಗಳು ಮೀನಿನಂತೆ ಕಾಲುಗಳು ಆಮೆಗಳಂತೆ, ಒಡೆದ ತಲೆಬುರುಡೆಗಳು, ಸುಟ್ಟು ಆಕೃತಿಗಳು, ಚದುರಿದ ದೇಹದ ಅಂಗಗಳು ಕಪ್ಪೆಗಳಂತೆ, ನೆಲಕ್ಕಪ್ಪಳಿಸಿರುವ ವಿಮಾನಗಳು, ಆನೆಗಳು, ಕುದುರೆಗಳು ದ್ವೀಪಗಳಂತೆ, ಚಾಮರಗಳು ಜಲಪಕ್ಷಿಗಳಂತೆ, ಬಿಳಿ ಛತ್ರಿಗಳು ನೊರೆಗಳ ರಾಶಿಯಂತೆ ರಕ್ತ ಪ್ರವಾಹದಲ್ಲಿ ತೇಲುತ್ತಿರುವ ಶಿರಗಳು ರಾಶಿಗಳಂತೆ ಕಾಣುತ್ತಿರಲು,ಹದ್ದುಗಳು ಮುತ್ತಿಕೊಂಡು ಭೂತಪ್ರೇತಾದಿಗಳು ನಾಟ್ಯವಾಡುತ್ತಿದ್ದವು. ಆಹಾ! ಎಷ್ಟೋ ವರ್ಷಗಳ ನಂತರ ಈ ಸಮಾರಾಧನೆ! ಚಕ್ರರಾಜನು ನಮಗಾಗಿ ಸಿದ್ಧಪಡಿಸಿರುವ ಹಬ್ಬದೂಟ ಬನ್ನಿ ಬನ್ನಿ ಎನ್ನುತ್ತಾ ತಮ್ಮ ಸಹಚರರನ್ನು ಹೆಸರಿಟ್ಟು ಕರೆಯುತ್ತಾ ಆಹ್ವಾನಿಸುತ್ತಿದ್ದವು. ಯುದ್ಧವು ಘೋರವಾಗಿ ಸಾಗುತ್ತಿದ್ದರೂ ಭೇರುಂಡನು ಹೆದರಲಿಲ್ಲ. ಯುದ್ಧದಲ್ಲಿ ಸತ್ತುಳಿದ ವೀರರೊಂದಿಗೆ ಸುದರ್ಶನನನ್ನು ಎದುರಿಸಿದನು.

ಚಕ್ರರಾಜನು ಭೇರುಂಡನನ್ನು ನೋಡಿ ಗರ್ಜಿಸಿದನು. ದಿಕ್ಕುಗಳು ಗಡಗಡ ನಡಗುತ್ತಿದ್ದರೆ, ಸೂರ್ಯಚಂದ್ರಾದಿಯರು ಚಕ್ರರಾಜ ತನ್ನ ಅನುಯಾಯಿ ಪಾವಕನನ್ನು ಪ್ರೇರೇಪಿಸಿದನು. ಪಾವಕನು ಚಕ್ರರಾಜನ ಆಶಯದಂತೆ ಎದುರಾಳಿಯ ಮೇಲೆ ಸಮ್ಮೋಹನಾಸ್ತ್ರವನ್ನು ಪ್ರಯೋಗಿಸಿದನು. ಆಗ ರಾಕ್ಷಸರಿಗೆ ತಲೆ ಸುತ್ತಿ ಬಂದು ತಮ್ಮವರು ಯಾರು ಎದುರಾಳಿಗಳು ಯಾರೆಂದು ತಿಳಿಯದೇ ತಮ್ಮವರನ್ನೇ ವಿರೋಧಿಗಳೆಂದು ಭಾವಿಸಿ ಅವರ ತಲೆಯನ್ನೇ ಸಂಹರಿಸುತ್ತಿದ್ದರು. ಇದನ್ನೆಲ್ಲ ನೋಡಿದ ಚಕ್ರವರ್ತಿ ಸ್ವಲ್ಪ ಹೊತ್ತು ಯೋಚಿಸಿದ. ಇದು ಅಧರ್ಮ ಯುದ್ಧವೆಂದು ಪಾವಕನಿಗೆ ಆದೇಶಿಸಿದನು. ಆದೇಶದಂತೆ ಪಾವಕನು ಸಮ್ಮೋಹನಾಸ್ತ್ರವನ್ನು ಹಿಂಪಡೆದನು. ನಂತರ ಪಾವಕನು ಕ್ರೋಂಚಾಸ್ತ್ರವನ್ನು ಪ್ರಯೋಗಿಸಿದನು. ಆ ಅಸ್ತ್ರವು ರಾಕ್ಷಸರ ಮೂಗು ಮತ್ತು ಕಿವಿಗಳನ್ನು ತುಂಡರಿಸಿತು. ಇದನ್ನೆಲ್ಲ ನೋಡಿ ಭೇರುಂಡನು ವಿಜೃಂಭಿಸುತ್ತಿದ್ದಂತೆ ಪಾವಕನು ಮೂರು ಸೈನ್ಯವನ್ನು ಪ್ರಯೋಗಿಸಿದನು. ಆ ಅಸ್ತ್ರವು ಭೇರುಂಡು



# ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ – ಶ್ರೀಮತಿ. ಎನ್. ಪಾರ್ವತಿ

## ತಿ.ತಿ.ದೇ., ಶ್ರೀನಿವಾಸಮಂಗಾಪುರಂ, ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ವಸಂತೋತ್ಸವಗಳು

| ದಿನಾಂಕ | ವಾರ | ಉತ್ಸವಗಳು |
|---|---|---|
| 17-05-2025 | ಶನಿವಾರ | ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರಿಗೆ |
| 18-05-2025 | ಭಾನುವಾರ | ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರಿಗೆ |
| 19-05-2025 | ಸೋಮವಾರ | ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರಿಗೆ<br>ಶ್ರೀಕೋದಂಡ ಸ್ವಾಮಿಯವರಿಗೆ, ಶ್ರೀ ಕೃಷ್ಣಸ್ವಾಮಿಯವರಿಗೆ |

ವಿನ ಬೃಹತ್ ದೇಹವನ್ನು ಕೊಳತೆ ಕುಂಬಳಕಾಯಿಯಂತೆ ನೆಲಕ್ಕುರುಳಿಸಿತು. ಯುದ್ಧವನ್ನು ನೋಡುತ್ತಿದ್ದ ದೇವತೆಗಳು ಪರವಶರಾದರು. ಎಲ್ಲರನ್ನೂ ಕೊಂಡಾಡುತ್ತಾ... ಚಕ್ರರಾಜಾ! ಸ್ವಾಮಿ ಅನತಿಯಿಂದ ಎಲ್ಲಾ ದುಷ್ಟರನ್ನು ಕೊಂದಿದ್ದೀಯಾ.

ಸಾಧುಸಂತರಿಗೆ ವಿಶ್ವಾಸವನ್ನು ತುಂಬಿದ್ದೀಯಾ. ನಿನ್ನ ಕೈಚಳಕದಿಂದ ಪುರುಷೋತ್ತಮ ಸ್ವಾಮಿಯು ಪ್ರಸನ್ನನಾಗಿದ್ದಾನೆ. ಇನ್ನೂ ಸಾಕು ಸಾಕು. ನೀನು ವೀರನು ಕರುಣಾಮಯಿ. ನಿನ್ನ ಪ್ರತಾಪವು ಅನನ್ಯ ಮತ್ತು ಅಸಾಮಾನ್ಯ. ಬ್ರಹ್ಮಾದಿಗಳೂ ನಿನ್ನನ್ನು ಕೊಂಡಾಡುತ್ತಿದ್ದಾರೆ. ಇನ್ನು ಕದನಕ್ಕೆ ವಿರಾಮ ನೀಡಿ, ಶಾಂತಿಯನ್ನು ಸ್ಥಾಪಿಸಿ ಶ್ರೀವೇಂಕಟೇಶ್ವರ ಸ್ವಾಮಿಯ ಸನ್ನಿಧಾನಕ್ಕೆ ಹೊರಡುವಂತೆ ತಿಳಿಸಿ, ದೇವತೆಗಳು ತಮ್ಮ ಸ್ವಸ್ಥಾನಗಳಿಗೆ ತೆರಳಿದರು.

ದೇವತೆಗಳು ಸಲಹೆಯನ್ನು ಪಾಲಿಸದಿರುವುದು ಒಳ್ಳೆಯದಲ್ಲ ಎಂದು ಸುದರ್ಶನನಿಗೆ ಅನಿಸಿತು. ಆದರೂ ಅವನಿಗೊಂದು ಚಿಂತೆ ಕಾಡುತ್ತಿತ್ತು. ತನ್ನ ಜೊತೆ ಬಂದವರೆಲ್ಲ ಶತ್ರುಸಂಹಾರ ಕಾರ್ಯದಲ್ಲಿ ಮರಣ ಹೊಂದಿದ್ದಾರೆ. ಇವರೆಲ್ಲರೂ ಮರಣಿಸಿದಾಗ ನಾನೊಬ್ಬನೇ ವೆಂಕಟಗಿರಿಗೆ ಹಿಂದಿರುಗುವುದು ಸರಿಯಲ್ಲವೆಂದು ಭಾವಿಸಿ ವಿಜಯ ಯೋಗದ ಪ್ರಭಾವದಿಂದ ಸಮರದಲ್ಲಿ ಆಹುತಿಯಾಗಿದ್ದ ತನ್ನ ಚತುರಂಗ ಬಲವನ್ನು ಸೈನಿಕರನ್ನು ಪುನರುಜ್ಜೀವನಗೊಳಿಸಿದನು.

ಅನಂತರ ಸಕಲ ಬಲದೊಂದಿಗೆ ವೆಂಕಟಾದ್ರಿ ತಲುಪಿದನು. ಪೂರ್ವ ರೂಪದೊಂದಿಗೆ ಸ್ವಾಮಿಯ ದಕ್ಷಿಣ ದಿಕ್ಕಿನಲ್ಲಿ ಮರು ಸ್ಥಾಪಿತಗೊಂಡನೆಂದು ಸೂತರು ಹೇಳಲಾಗಿ ಶೌನಕಾದಿಯರು-

ಸ್ವಾಮೀ! ಕೃತತ್ರೇತದ್ವಾಪರಯುಗದಲ್ಲಿ ಸ್ವಾಮಿ ಲೀಲೆಗಳನ್ನು ವರ್ಣಿಸಿದ್ದೀರಿ. ಕಲಿಯುಗದಲ್ಲಿ ಸ್ವಾಮಿ ತನ್ನ ಲೀಲೆಗಳನ್ನು ಹೇಗೆ ಪ್ರಕಟಗೊಳಿಸಿದನೆಂಬ ಕಥೆಯಗಳನ್ನು ಹೇಳುವಂತೆ ಕೇಳಿಕೊಂಡರು.

**- ಮುಂದುವರೆಯುತ್ತದೆ.**

## ತಿ.ತಿ.ದೇ., ಕಾರ್ವೇಟಿನಗರಂ, ಶ್ರೀ ವೇಣುಗೋಪಾಲಸ್ವಾಮಿಯವರ ಬ್ರಹ್ಮೋತ್ಸವಗಳು

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 18-05-2025 | ಭಾನುವಾರ | --- | ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ |
| 19-05-2025 | ಸೋಮವಾರ | ತಿರುಚ್ಚಿ ಉತ್ಸವ , ಧ್ವಜಾರೋಹಣ | ದೊಡ್ಡಶೇಷವಾಹನ |
| 20-05-2025 | ಮಂಗಳವಾರ | ಚಿಕ್ಕಶೇಷವಾಹನ | ಹಂಸವಾಹನ |
| 21-05-2025 | ಬುಧವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 22-05-2025 | ಗುರುವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 23-05-2025 | ಶುಕ್ರವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 24-05-2025 | ಶನಿವಾರ | ಹನುಮದ್ವಾಹನ, ಸಾ॥ ವಸಂತೋತ್ಸವ | ಗಜವಾಹನ |
| 25-05-2025 | ಭಾನುವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 26-05-2025 | ಸೋಮವಾರ | ರಥೋತ್ಸವ | ಅಶ್ವವಾಹನ |
| 27-05-2025 | ಮಂಗಳವಾರ | ಪಲ್ಲಕಿ ಉತ್ಸವ, ತೀರ್ಥವಾರಿ, ಅವಭೃಥ, ಚಕ್ರಸ್ನಾನ | ತಿರುಚ್ಚಿ ಉತ್ಸವ, ಧ್ವಜಾವರೋಹಣ |
| 28-05-2025 | ಬುಧವಾರ | ಪುಷ್ಪಯಾಗ ಮಹೋತ್ಸವ | |

# ಬಲ್ಲಟಗಿ ಶ್ರೀಗುಂಡಾಚಾರ್ಯರು (ಶ್ರೀ ಶ್ಯಾಮಸುಂದರ ದಾಸರು)

ಶ್ರೀಮತಿ. ಮಾನಸ ಜಯರಾಜ್ ಕುಲಕರ್ಣಿ
- 99807 75033




ಚೀಕಲಪರವಿಯಲ್ಲಿ ಶ್ರೀವಿಜಯದಾಸರು, ಉತ್ತನೂರಿನ ಶ್ರೀಗೋಪಾಲದಾಸರು, ಮಾನ್ವಿಯಲ್ಲಿರುವ ಶ್ರೀಜಗನ್ನಾಥದಾಸರು, ಲಿಂಗ ಸುಗೂರಿನ ಶ್ರೀಪ್ರಾಣೇಶ ದಾಸರು, ಮೊದಲಕಲ್ಲಿನ ಶ್ರೀಶೇಷ ದಾಸರು ಹಾಗೂ ಈ ಎಲ್ಲ ದಾಸರ ಶಿಷ್ಯ/ಪ್ರಶಿಷ್ಯರೆಲ್ಲ ಬಹುತೇಕ ಈ ಭಾಗ ದವರೇ ಆಗಿರುವರು. ಇವರೆಲ್ಲ ಸುಜೀವಿಗಳ ಉದ್ಧಾರಾರ್ಥವಾಗಿಯೇ ಆಗಾಗ ಭೂಲೋಕದಲ್ಲಿ ಅವತರಿಸಿ ಸಾಮಾನ್ಯರಂತಿದ್ದು ಜನರಲ್ಲಿ ಬೆರತು ದೇಶ ಕಾಲಮಾನ ಗಳಿಗನುಸಾರವಾಗಿ ಅವರವರ ಭಾಷೆಯಲ್ಲಿಯೇ ಜ್ಞಾನೋಪದೇಶವನ್ನು ಮಾಡಿ ಅವರನ್ನು ಉದ್ಧಾರ ಮಾಡುತ್ತ ಬಂದಿದ್ದಾರೆ.

ಇಂತಹ ಪುಣ್ಯತಮ ಭೂಮಿಯಲ್ಲಿ ರಾಯಚೂರು ಜಿಲ್ಲೆ, ಮಾನ್ವಿ ತಾಲೂಕು,ಕುರ್ಡಿ ಗ್ರಾಮದಲ್ಲಿ ಶ್ರೀಶ್ಯಾಮಾಚಾರ್ಯ ಮತ್ತು ಕೊಪ್ರಮ್ಮ ದಂಪತಿಗಳಲ್ಲಿ (ಶ್ರೀ ಶಾಲಿವಾಹನ ಶಕೆ ಸಿದ್ಧಾರ್ಥನಾಮ ಸಂವತ್ಸರ, ಆಶ್ವೀಜ ಶುದ್ಧ ದಶಮಿ ದಿನಾಂಕ 22-10-1898ರಂದು) ಶ್ರೀಗುಂಡಾ ಚಾರ್ಯರು ದಾಸ ಸಾಹಿತ್ಯಲೋಕದಲ್ಲಿ ಧ್ರುವತಾರೆಯಂತೆ ಮಿನುಗಿದ ಕಥಾನಾಯಕರು ಜನಿಸಿದರು. ಹರಿದಾಸರ ತಾಣವೆಂದೇ ಸುಪ್ರಸಿದ್ಧ ವಾದ ನಮ್ಮ ನಾಡಿನ ರಾಯಚೂರು ಪ್ರಾಂತ್ಯ ನೀಡಿದ ಮತ್ತೊಂದು ಕೊಡುಗೆ ಮಾನವಿ ಅಥವಾ ಬಲ್ಲಟಗಿ ಶ್ರೀ ಗುಂಡಾಚಾರ್ಯರು. ಶ್ಯಾಮ ಸುಂದರ ವಿಠಲಾಂಕಿತರಾದ ಶ್ರೀ ಗುಂಡಾಚಾರ್ಯರು 20 ನೇ ಶತ ಮಾನದಲ್ಲಿ ಅಪೂರ್ವ ಸಾಧನಗೈದ ಹರಿದಾಸರು. ವರಕವಿ, ಆಶುಕವಿ, ಜೀವಂತ ಅರ್ಥಕೋಶ ಎಂದೆಲ್ಲಾ ಪ್ರಸಿದ್ಧರಾದವರು.

ತಾಯಿಯ ತಂಗಿರಿಂದಮ್ಮ ಮತ್ತು ಅವರ ಪತಿ ಶ್ರೀಗುರುಭೀಮಾ ಚಾರ್ಯರಿಗೆ ಗಂಡು ಸಂತಾನವಿಲ್ಲದ ಕಾರಣ ಗುಂಡಾಚಾರ್ಯರನ್ನು ಅವರ ಮಗನಂತೆ ಬೆಳೆಸಿದರು. ಕಾಲಕ್ರಮೇಣ ಗುಂಡಾಚಾರ್ಯರು ಶ್ರೀಗುರುಭೀಚಾರ್ಯರಿಂದ ಸಂಸ್ಕೃತ ಮತ್ತು ಪೌರೋಹಿತ್ಯವನ್ನು ಕಲಿತು ಕುರ್ಡಿ, ಮಾನ್ವಿ, ಬಲ್ಲಟಗಿ ಗ್ರಾಮಗಳಲ್ಲಿ ಪೌರೋಹಿತ್ಯ ನಡೆಸಿ, ನಂತರ ಸರ್ಕಾರಿ ಶಿಕ್ಷಣ ವೃತ್ತಿಯಲ್ಲಿಯೂ ಇದ್ದವರು.

ಸಣ್ಣ ವಯಸ್ಸಿನಲ್ಲೆ ಶ್ರೀಜಗನ್ನಾಥದಾಸರ ಹರಿಕಥಾಮೃತ ಸಾರವನ್ನು ಆಳವಾಗಿ ಅಧ್ಯಯನ ಮಾಡಿ ಅಲ್ಲಿ ಹೇಳಿದ ಸಕಲ ತತ್ವ ಪ್ರಮೇಯಗಳನ್ನು ಅರಗಿಸಿಕೊಂಡವರು. ಹಾಗೆಯೇ ಪರಂಪರೆಯಿಂದ ಬಂದ ಪೌರೋಹಿತ ವೃತ್ತಿಯು ಅವರಲ್ಲಿ ಸಾಕಷ್ಟು ಸಂಸ್ಕೃತದ ಭಾಷಾ ಜ್ಞಾನವನ್ನು ರೂಢಿಸಿತ್ತು. ಆಧ್ಯಾತ್ಮಿಕ ಒಲವು ಹೆಚ್ಚಾದಂತೆ ಶಿಕ್ಷಕ ವೃತ್ತಿ ಯನ್ನು ತೊರೆದರು.

### ವಿವಾಹ

ಸಿರವಾರದಲ್ಲಿ ಶಾಲಾ ಶಿಕ್ಷಕರಾಗಿ ನಿಯುಕ್ತಿಹೊಂದಿದರು. ಇದೇ ವೇಳೆಯಲ್ಲಿಯೇ ಪ್ರಾಪ್ತವಯಸ್ಕರಾದಾಗ ಅಕ್ಕನ ಮಗಳಾದ ಸೀತಾ ಬಾಯಿಯೊಂದಿಗೆ ವಿವಾಹವಾಯಿತು. ಗಂಡು ಮಗುವಿಗೆ ಜನ್ಮವಿತ್ತು ಸೀತಾಬಾಯಿಯು ಕಾಲಾಧೀನರಾದರು. ಮುಂದೆ ಮಗುವೂ ಉಳಿಯ ಲಿಲ್ಲ. ನಂತರ ಲಿಂಗಸುಗೂರು ತಾಲೂಕಿನ **"ಕೋಟೆ"** (ಮೇಧಾವಿ ರಾಯನ ಕೋಟೆ) ಗ್ರಾಮದ ಶಾನುಭೋಗರ ಮಗಳಾದ ಹನುಮಕ್ಕ ಅವರೊಂದಿಗೆ ವಿವಾಹವಾಯಿತು. ಈ ದಂಪತಿಗಳಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಜನಿಸಿದರು.

### ಗುರುಗಳು ಹಾಗೂ ಅವರ ಸಮಕಾಲೀನರು

ಪರಮಪೂಜ್ಯರಾದ ಐಕೂರು ಶ್ರೀನರಸಿಂಹಾಚಾರ್ಯ ಗುರು ಗಳಲ್ಲಿ ಶಿಷ್ಯತ್ವ...

ಶ್ರೀಗುರುಜಗನ್ನಾಥದಾಸರ ಶಿಷ್ಯರಾದ **'ವರದೇಂದ್ರ ವಿಠಲಾಂಕಿತರಾದ'** ಶ್ರೀವೆಂಕಟೇಶ ಹಳ್ಳೇರಾಯರೊಂದಿಗೆ ಸಲುಗೆ. ಶ್ರೀ ಪ್ರಾಣೇಶದಾಸರ ಸದ್ವಂಶಜರಾದ ಶ್ರೀ ಸುಳಾದಿ ಕುಪ್ಪೇರಾಯರಲ್ಲಿ ತುಂಬಾ ವಿಶ್ವಾಸ. ಅವರ ಅಣ್ಣಂದಿರಾದ ಅಭಿನವಪ್ರಾಣೇಶ ವಿಠಲಾಂಕಿ ತರಾದ ಶ್ರೀ ಹನುಮಂತರಾವ ಕುಲಕರ್ಣಿ ಅರ್ಚಕರ ಮೇಲೆ ಅನುಗ್ರಹ. ಅವರ ಒಡನಾಟದಲ್ಲಿದ್ದ ಇನ್ನೂ ಅನೇಕರ ಹೆಸರುಗಳನ್ನು ತಾವು ಶ್ರೀಸುಳಾದಿ ಕುಪ್ಪೇರಾಯರಿಗೆ ಬರೆದಿರುವ ಪತ್ರಗಳಲ್ಲಿ ಉಲ್ಲೇಖಿಸಿರು ವರು.

### ಕಾವ್ಯ ರಚನೆ :

ಕಾವ್ಯರಚನಾಶಕ್ತಿ ಇವರಿಗೆ ಬಾಲ್ಯದಲ್ಲಿಯೇ ಮೊಳಕೆಯೊಡೆದಿತ್ತು. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗ ಶಾಲಾ ಪರಿವೀಕ್ಷಣೆಗೆ ಮೇಲಾ ಧಿಕಾರಿಗಳು ಬಂದಿದ್ದು. ದಾಸರ ತತ್‌ಕ್ಷಣದಲ್ಲಿಯೇ ಅವರನ್ನು ಸ್ವಾಗತಿ ಸುವ ಕವನ ರಚಿಸಿ **"ರಾಜಾ ರವಿಸುತ ತೇಜಾ ನೈಜಾಂ। ರಾಜ ಜಯ ಸುಮಂಗಲಂ। ದೀನಜನ ಸಮೂಹ ದಿವಿಜ। ಧೇನುಮಣಿ ಮಂದಾರ ಭೋಜ। ಜ್ಞಾನಿಪ್ರಿಯ ಪ್ರಭು ಸನ್ಮಾನಿ ಉಸ್ಮಾನಲಿ ಖಾನ್ ಮಂಗಲಂ"** ಎಂದು ಹಾಡಿದ್ದರು.

ಚಿಕ್ಕಂದಿನಲ್ಲಿಯೇ ಇವರಿಗೆ ದೈವದತ್ತವಾಗಿ ಬಂದ ಕವಿತಾ ಶಕ್ತಿಯು ಶ್ರೀಜಗನ್ನಾಥದಾಸರ ಸೇವೆಯಿಂದ ಬಲಗೊಂಡು ಪರಿಶುದ್ಧ ವಾಗಿ ಸ್ಫುಟಗೊಂಡಿತು. ಅದೇ ಕಾಲದಲ್ಲಿ ಅಸ್ಕಿಹಾಳ ಗ್ರಾಮದಲ್ಲಿ ಹರಿ ದಾಸರೆಂದು ಪ್ರಖ್ಯಾತಿ ಪಡೆದ ಶ್ರೀಗೋವಿಂದದಾಸರ ಸಂದರ್ಶನ ಸಹವಾಸ, ಶ್ರೀಐಕೂರು ನರಸಿಂಹಾಚಾರ್ಯರಲ್ಲಿ ಶಿಷ್ಯತ್ವದಿಂದಾಗಿ ಹರಿ ದಾಸ ಸಾಹಿತ್ಯ ಕೃಷಿಗೆ ಇವರ ದಾರಿ ಸುಗಮವಾಯಿತು. ಭಗವಂತನ ದರ್ಶನಕ್ಕಾಗಿ ಮನಸ್ಸು ಹಾತೊರೆಯತೊಡಗಿತು. ಹಿರಿಯರ ಅನುಗ್ರಹ ಕ್ಕಾಗಿ ಕಾತರಗೊಂಡರು.

**ಅಸಾಧಾರಣಕಾವ್ಯಪ್ರತಿಭೆ**

ಕನ್ನಡ ಹಾಗೂ ಸಂಸ್ಕೃತದಲ್ಲಿ ಪ್ರಕಾಂಡ ಪಾಂಡಿತ್ಯ ಗಳಿಸಿದ ದಾಸರು ಬಹು ದೊಡ್ಡ ಆಶುಕವಿಗಳಾಗಿ ಮಾನವಿ ಪ್ರಾಂತ್ಯದಲ್ಲಿ ಪ್ರಖ್ಯಾತ ರಾಗಿದ್ದರು.

ದಾಸರು ರಚಿಸಿದ ಕೀರ್ತನೆಗಳು ಮಧ್ವ ಸಂಪ್ರದಾಯದ ದೇವ ಕಕ್ಷ, ಯತಿಕಕ್ಷ, ದಾಸ ಕಕ್ಷದ ಶ್ರೇಣಿಯಲ್ಲಿದೆ. ಸಂಸ್ಕೃತ ಭೂಯಿಷ್ಟವಾದ ಸಂಗೀತದ ಚೌಕಟ್ಟಿನಲ್ಲಿ ಕೂಡಿಸಿದ್ದು ಪ್ರಚಲಿತ ರಾಗಗಳನ್ನೆ ಬಳಸಿದ್ದಾರೆ. ದೇವತಾ ತಾರತಮ್ಯ, ಯತಿತಾರತಮ್ಯ ಅನುಸರಿಸಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

**ಅವುಗಳಲ್ಲಿನ ಕೆಲವು:**

ಕಾಯೋ ಕಾವೇರಿ ರಂಗ ಕಾರುಣ್ಯಪಾಂಗಾ
ಪಾಂಡುರಂಗ ಪರಿಪಾಲಿಸೊ ನುಡಿಲಾಲುಸೊ
ಕಾಯೇ ದುರ್ಗಾಂಭ್ರಣಿಯೇ
ಕಾಯೋ ಕಾಯೇ ರುಕ್ಮೀಣಿಯೇ
ಆರಂಭದಲಿ ನಮಿಪೆ ಬಾಗಿ ಶಿರವ
ತೋರೈ ಪಾರ್ವತಿಯೇ ಶಂಕರನ
ಅಂಬಿಕಾಪತಿ ರಕ್ಷಿದೆಸೆನ್ನಾ
ಎಂದು ಕಾಂಬೆನೋ ನಂದಗೋಪನ
ಕಂದ ಶ್ರೀಗೋವಿಂದನ
ರಂಗ ಓಲಿದ ದಾಸರಾಯ ಸಾಧು
ಸಂಗ ವಹಿಸಿ ಕರುಣದಿ ಪಿಡಿಕೈಯ (ಶ್ರೀ ಜಗನ್ನಾಥದಾಸರು)

ಅನೇಕ ಕ್ಷೇತ್ರ ಸಂದರ್ಶಿಸಿ ದಾಸರು ಕ್ಷೇತ್ರ ಮಹಿಮೆ ಸಾರುವ ಪದಗಳನ್ನು ಹೇರಳವಾಗಿ ರಚಿಸಿದ್ದಾರೆ. ಮತ್ತೊಂದು ಅವರು ಹೊಂದಿದ್ದ ಲೋಕ ಜೀವನ ಸೂಕ್ಷ್ಮ ಸಂವೇದನೆಯ ದಾಸರ ಸಮಷ್ಟಿ ಪ್ರಜ್ಞೆಯ ಮನೋಧರ್ಮದಾಸರು ಅನೇಕ ಬಯಲಾಟಗಳನ್ನು, ಧಾರ್ಮಿಕ ಒಗಟುಗಳನ್ನು ಪ್ರಾಸಬದ್ಧ ರಹಸ್ಯ ತತ್ತ್ವಾರ್ಥಗಳಿಂದ ರಚಿಸಿದ್ದಾರೆ. ಅನೇಕ ಬಯಲು ನಾಟಕಗಳು ರಂಗಭೂಮಿ ಪ್ರದರ್ಶನ ಕಂಡಿವೆ.

**ರಚಿಸಿದ ಬಯಲು ನಾಟಕಗಳು**

ಭೋಜ ಪ್ರಬಂಧ, ರುಕ್ಮಾಂಗದಚರಿತ್ರೆ, ಶ್ರೀರಾಮಪಾದು ಕಾಪಟ್ಟಾಭಿಷೇಕ, ಲಂಕಾದಹನ, ಶ್ರೀನಿವಾಸಕಲ್ಯಾಣ, ದಾಸರ ಅನೇಕ ಬಯಲಾಟಗಳು ಪ್ರಾಂತ್ಯದಲ್ಲಿ ರಂಗಭೂಮಿ ಪ್ರದರ್ಶನ ಕಂಡಿವೆ. ದಾಸರು ಅತಿಯಾದ ಮಡಿಯ ವೇಷ ಭೂಷಣವಿಲ್ಲದ ಸರಳ ಬದುಕಿನ ಮುಖೇನ ಜನಸಾಮಾನ್ಯರಲ್ಲಿ ಆಧ್ಯಾತ್ಮಿಕ ದೃಷ್ಟಿಕೋನ ಬಿತ್ತಿದರು. ಜನ ಸಾಮಾನ್ಯರು ಹಿಡಿದ ಕೆಟ್ಟ ಮಾರ್ಗವನ್ನು ತಮ್ಮ ಕೃತಿಯ ಆದಿಯಲ್ಲಿ ಮೆಚ್ಚುಗೆ ಸೂಚಿಸಿದಂತೆ ನುಡಿದು ಅಂತ್ಯದಲ್ಲಿ ಸಾಧನೆಗೆ ಒದಗುವಂತಹ ನಡಾವಳಿಗಳ ಅವಶ್ಯಕತೆಯನ್ನು ಸಾರಿ ಹೇಳುವ ವೈಶಿಷ್ಟ್ಯ ಕಲೆಗಾರಿಯನ್ನು ದಾಸರು ಕರತಲಾಮಕ ಮಾಡಿಕೊಂಡಿದ್ದರು.

**ಅವರು ರಚಿಸಿದ**

ಕೇಳ್ ಕೇಳ್ ಲೋ ತತ್ತ್ವಜ್ಞಾನ ಎನ್ನುವ ಕೀರ್ತನೆಯಲ್ಲಿ ಮೋಟಾರುವಾಹನ,ನಾಟಕದರುಶನ, ಹೋಟೆಲೊಳಗೇ ಸುಭೋಜನ, ಇವುಗಳು ಪೀಯೂಷಪಾನವಾಗಿವೆ.

ಜಾಣೆ ನಂಬಿದೆ ಇಸ್ಟೆಟ್ ರಾಣಿ
ನೀನೊಲಿದೆನ್ನ ಪಾಣಿಯೊಳಗೆ ಬಂದು ಕಾಣಮ್ಮ

ರಚನೆಯ ಅಂತ್ಯದಲ್ಲಿ ಜನರು ಈ ದುಶ್ಚಟದಿಂದ ದನಕರು ಹೊಲಮನೆ ಕಳೆದುಕೊಳ್ಳುವ ಹಾಗೂ ಉಣಲು, ಉಡಲು ಪಡುವ ಬವಣೆ ಮನದಟ್ಟಾಗುವಂತೆ ಎಚ್ಚರಿಕೆಯ ಸಂದೇಶ ನೀಡುತ್ತಾರೆ. ಬಲು ಕಷ್ಟ ಬರಗಾಲ ಬಂದಿತಯ ಶಿಶುಗಳಿಗೆ ಹಾಲಿಲ್ಲ ಪಶುಗಳಿಗೆ ಮೇವಿಲ್ಲ ಉಸುರಲು ಬಾಯಿಲ್ಲ ವೃದ್ಧ ಜನಕೆ ಜನ ತಮ್ಮನ್ನು ವರಕವಿ ಎಂದು ಗೌರವಿಸಿದರೆ ದಾಸರು ತಮ್ಮ ಒಂದು ಕೃತಿಯಲ್ಲಿ ಎನಗಾಕೆ ಕವಿಯೆಂಬ ಶ್ರೇಷ್ಠ ನಾಮ ಎಂಬ ವಿನಮ್ರತೆ ತೋರಿದ್ದಾರೆ.ಆತ್ಮೋದ್ಧಾರಕ್ಕಾಗಿ ಹಂಬಲಿಸುವ ಎಲ್ಲರನ್ನೂ ಹರಿದಾಸ ಪಂಥ ಮುಕ್ತಮನದಿಂದ ಸ್ವಾಗತಿಸುತ್ತದೆ ಎನ್ನುವುದು ಶ್ರೀ ಶ್ಯಾಮಸುಂದರ ದಾಸರು ತಮ್ಮ ಜೀವಿತದಲ್ಲಿ ಪ್ರಯಾಣಿಕರಿಸಿದ್ದಾರೆ.

**ಅವರ ಶಿಷ್ಯರಲ್ಲಿ ಪ್ರಮುಖರು**

ಶ್ರೀಅಭಿನವ ಪ್ರಾಣೇಶದಾಸರು, ಶ್ರೀಪದ್ಮನಾಭದಾಸರು ಶ್ರೀ ಲಕುಮೀಶ ವಿಠ್ಠಲದಾಸರು, ಶ್ರೀರಘುಪತಿವಿಠ್ಠಲದಾಸರು, ಶ್ರೀಭುಜಂಗ ಶಯನರು, ಶ್ರೀವಿಜಯ ಸಾರಥಿದಾಸರು, ಶ್ರೀದಾಸರು ಶ್ರೀಹರಿಯ ಪಾದಸಾಕ್ಷಿಯ ಅನುಭವದಿಂದ ಮಧ್ವಮತದ ತಿರುಳನ್ನು ಆಸ್ವಾದಿಸಿ ತಮ್ಮ ಆಶುಕವಿತಾ ಸಾಮರ್ಥ್ಯದಿಂದ ಎಲ್ಲರ ಮನವನ್ನು ಗೆದ್ದಿದ್ದರು. ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದವರು ಇಂಥಾ ಗೂಡಾರ್ಥ, ಪ್ರಮೇಯ ತತ್ವಗಳನ್ನು ಬರೆದು, ಪದ ಪದ್ಯ ಸುಳಾದಿಗಳ ರಚನೆ ಸಾಧ್ಯವೆ? ಪೂರ್ವ ಜನ್ಮ ಸಂಸ್ಕಾರದ ಪುಣ್ಯಕರ್ಮಗಳಿಂದಷ್ಟೇ ಮಾತ್ರ ಸಾಧ್ಯ. ಹರಿವಾಯುಗುರುಗಳು ಸಂಪೂರ್ಣ ಕೃಪಾಕಟಾಕ್ಷ ಹೊಂದಿದ್ದ ಶ್ರೀಗುಂಡಾಚಾರ್ಯರು ಅರ್ವಾಚೀನ ದಾಸಸಾಹಿತ್ಯದ ಪ್ರಸಾರ, ಸ್ವರ ಚನೆ ಮತ್ತು ಶಿಷ್ಯ ಪರಂಪರೆಯನ್ನು ಮುಂದುವರೆಸಿ ಹರಿದಾಸ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ವಪೂರ್ಣ ಸ್ಥಾನ ಪಡೆದಿದ್ದಾರೆ.

# ಕೆಲವು ತತ್ವಗಳ ತರ್ಕಗಳು

- ಶ್ರೀಮತಿ ಎಸ್. ಕಲ್ಯಾಣಿ

ಶ್ರೀ ವೈಷ್ಣವರಿಗೆ ಇದರ ಬಗ್ಗೆ ಯಾವುದೇ ತಲೆಶೂಲೆ ಇಲ್ಲ. ಸದೇವ ಸೋಮ್ಯೇದಂ ಏಕಮೇವಾ ದ್ವಿತೀಯಮ್' ಇದನ್ನು ಶ್ರುತಿಯೇ ಹೇಳುವುದು. ಜೀವ ಮತ್ತು ಮಾಯೆಯಿಂದ  ವಿಶಿಷ್ಟ ಬ್ರಹ್ಮಸತ್ ಆಗಿದೆ, ಒಂದೇ ಆಗಿದೆ, ಮತ್ತು ಅದ್ವಿತೀಯವಾಗಿದೆ.  ಒಬ್ಬರು ಹೇಳಿದರು. - ರಾಷ್ಟ್ರಪತಿ ಬರುತ್ತಾರೆಂದರೆ  ಅವರ ಜತೆ ಅನಿವಾರ್ಯವಾಗಿ ಇರುವವರೆಲ್ಲರ ಹೆಸರನ್ನು ಹೇಳುವುದಿಲ್ಲ. ಆದರೆ ಅವರೆಲ್ಲರೂ ಇರುತ್ತಾರೆ. ಕೇವಲ  ಶ್ರೀರಾಮನಿಗೆ ಮಾತ್ರ ವನವಾಸಕ್ಕೆ ಆಜ್ಞೆಯಾಗಿತ್ತು, ಸೀತೆ ಮತ್ತು ಲಕ್ಷ್ಮಣರಿಗೆ ಅಲ್ಲ. ಅವರಾದರೋ ಶ್ರೀರಾಮನ ಅನಿವಾರ್ಯ ಸಂಗಡಿಗರಾಗಿದ್ದರು. ಆದ್ದರಿಂದ ಜತೆಯಲ್ಲಿ ಹೊರಟರು. ಆಗ ಈ ಶ್ರುತಿಗಳು ಒಂದಾಗುತ್ತವೆ.

ಸನ್ಮೂಲಾ ಸೋಮ್ಯೆಮಾ
ಸರ್ವಾಃ ಪ್ರಜಾಃ ಸದಾಯತನಾಃ ಸ್ವಪ್ರತಿಷ್ಠಾಃ



ಪೃಥಗಾತ್ಮನಂ ಪ್ರೇರಿತಾರಂ ಚ ಮತ್ವಾ ।
ಜ್ಞಾಜ್ಞೋ ದ್ವಾವಜಾವೀಶಾನೀಶಾವಜಾಹ್ಯೇ
ಕಾಭೋಕ್ತೃಭೋಗಾರ್ಥಯುಕ್ತಾ ।

**ತರ್ಕ** – ಕಾರಣ ಅನೇಕ ಇರುತ್ತವೆ.

**ಉತ್ತರ** – ಯಾವಾಗ ಬ್ರಹ್ಮ ಒಂದೋ, ಆಗ ಅನ್ಯ ತತ್ವ ಇಲ್ಲ. ಹಾಗಿರುವಾಗ ಅನೇಕ ಕಾರಣಗಳು ಎಲ್ಲಿಂದ ಬಂದವು. ಪ್ರಧಾನ ಮತ್ತು ಅಪ್ರಧಾನದ ವ್ಯವಸ್ಥೆಯಲ್ಲಿ ಪ್ರಸಂಗವಾದರೂ ಏಕೆ? ಅದು ಏಕೋ ಹಂ ಬಹುಸ್ಯಾಮ್' ಎನ್ನುತ್ತದೆ. ಸ್ವತಃ ಬಹುಸ್ಯಾಮ್ ಎನ್ನುವುದು ಬೇರೊಂದನ್ನು ಪಡೆದು ಬಹಳವಾಗುತ್ತದೆ. ಅವನು ಸ್ವಯಂ ಸರ್ವಶಕ್ತಿವಂತನಲ್ಲವೇನು? ಇನ್ನೊಂದು ಅವನಿಗೆ ಸೇರಲೇಬಾರದು? ಯಾವುದು ಸ್ವಯಂ ತಾನೇ ಬಹಳ ಆಗುತ್ತದೋ ಅದೇ ಬ್ರಹ್ಮ ಸಹಸ್ರಕಾರಣಗಳಾಗುತ್ತದೆ... ಹೀಗಿರುವಾಗ ಮುಜುಗರ ಏಕೆ?

**ತರ್ಕ** – ಬ್ರಹ್ಮ ಸೃಷ್ಟಿಗಾಗಿ ಸಂಕಲ್ಪ ಹೊಂದುತ್ತಾನೆ. ಸೃಷ್ಟಿ ಅವನ ಸಂಕಲ್ಪದ ಪರಿಣಾಮವಾಗಿದೆ.

**ಉತ್ತರ** – ಪ್ರಯೋಜನ ಮೂಲಕವಾದ ಸೃಷ್ಟಿಯ ಯಾವುದೇ ಪ್ರಯೋಜನ ಇರಲಿಲ್ಲ. ಈಗಲೂ ಇಲ್ಲ, ಮುಂದೆಯೂ ಇರದು, ನಿಷ್ಪ್ರಯೋಜನ ಸಂಕಲ್ಪಯಾಕಾಯಿತು? ಸೃಷ್ಟಿಸತ್ ಕಲ್ಪನೆಯ ಪರಿಣಾಮ ಹೀಗಾದಾಗ ಮಿಥ್ಯಾಜಗತ್ತಿನ ಕಲ್ಪನೆ ಏಕೆ ಮಾಡಲ್ಪಟ್ಟಿತು? ಅದು ಸತ್ ಆಗಿರುವಾಗ ಅದರ ಕಲ್ಪನೆ ಹೇಗೆ? ಸತ್ ಎಂಬುದು ಕಲ್ಪನೆಯಲ್ಲಿ ಬರಲಾಗದು.

**ತರ್ಕ** – ಸೃಷ್ಟಿ ಇಲ್ಲವೇ ಸಂಕಲ್ಪದ ಹಿಂದೆ ಯಾವುದೋ ಕಾರಣವಿದೆ. ಇದಕ್ಕೆ ಸಕಾರಾತ್ಮಕ ಉತ್ತರವಿಲ್ಲ.

**ಉತ್ತರ** – ಕಾರಣವನ್ನು ಹುಡುಕೋಣ ! ಸಿಕ್ಕಿದರೆ ಅದನ್ನು ಬರೆದಿಟ್ಟುಕೊಳ್ಳಿ, ಸಿಗದಿದ್ದಾಗ ಸ್ಪಷ್ಟವಾಗಿ ಸಿಗುವುದಿಲ್ಲವೆಂದು ಹೇಳಿಬಿಡಿ. ನಾನು ಅತ್ತಿಯ ಹೂವಿನ ಒಳಗಿನ ಹುಳುವಿನ ಒಬ್ಬ ಪ್ರತಿ ನಿಧಿ ಎನ್ನಿ. ನಾನು ಸಾಹಸ ಮಾಡಿ ಬ್ರಹ್ಮಾಂಡದ ಅತ್ತಿಗಿಡಗಳ (ಮರ) ಪ್ರತಿಯೊಂದು ಹೂವಿನ ಮಧ್ಯದಲ್ಲಿರುವ ಒಂದೊಂದು ಹುಳುವನ್ನು ಲೆಕ್ಕ ಮಾಡುತ್ತೇನೆ.

ಆದರೆ ಒಂದು ಹಣ್ಣಿನಿಂದಲೂ ಹೊರಗೆ ಬರಲಾಗದಿದ್ದರೆ ಹುಡುಕುವುದಾದರೂ ಹೇಗೆ? ನೀವು ನಿಮ್ಮ ಉದ್ದರಣೆಗಳನ್ನೇ ಏಕೆ ನಂಬಲಾರಿರಿ?... 'ಸದೇವ ಸೋಮ್ಯೇದಂ ಪೂರ್ವಮಾಸೀತ್, ಏಕಮೇವಾದ್ವಿತೀಯಮ್', ಇದರ ಮೂಲಕ ಸಕಾರಾತ್ಮಕ ಉತ್ತರ ದುರ್ಲಭವಾದರೆ ನಕಾರಾತ್ಮಕ ಉತ್ತರವನ್ನು ಏಕೆ ಒಪ್ಪಬಾರದು? ತ್ವದ್ ವೈಭವಂ ಶ್ರುತಿವಿದೋ ವಿದುರ ಪ್ರತಕ್ಯಮ್ ಈ ವಾಕ್ಯವನ್ನು ಹೃದಯದಲ್ಲಿ ಗಟ್ಟಿಗೊಳಿಸಿಕೊಳ್ಳಿ.

**ತರ್ಕ** –ಮೋಕ್ಷವಾದ ಮೇಲೆ ಬಂಧನವಿಲ್ಲ ಎಂದು ತಿಳಿಯೋಣ. ಬಂಧನ ಬ್ರಹ್ಮನಿಗೆ ಸತ್ಕಲ್ಪನೆಯ ಪರಿಣಾಮ. ಸಂಕಲ್ಪಕ್ಕಾಗಿ ಬ್ರಹ್ಮ ಪೂರ್ಣ ಸಂಕಲ್ಪದ ಪರಿಣಾಮ, ಸಂಕಲ್ಪಕ್ಕೆ ಬ್ರಹ್ಮ ಪೂರ್ಣ ಸ್ವತಂತ್ರ ಮುಕ್ತ ಜೀವಾತ್ಮಾ ಮತ್ತೆ ಬಂಧನಕ್ಕೆ ಹೋಗುವ ಸಂಕಲ್ಪವನ್ನು ಏಕೆ ಹೊಂದುವುದಿಲ್ಲ?

**ಉತ್ತರ** – ಎಲ್ಲಕ್ಕೂ ಮೊದಲು ಮೋಕ್ಷ ಪದಾರ್ಥದ ನಿರ್ಣಯವನ್ನು ಪಡೆಯಬೇಕು. ಯಾವ ಸಿದ್ಧಾಂತ(ವನ್ನು) ದ ಮೋಕ್ಷವನ್ನು ಅನುಸರಿಸುತ್ತೇವೆ? ಒಂದು ವೇಳೆ ಅದ್ವೈತ ಮತಾನುಸಾರ ಕೈವಲ್ಯ (ಜೀವನ ಮುಕ್ತ) ಮೋಕ್ಷವನ್ನು ಒಪ್ಪುವುದಾದರೆ-ಸರ್ವಂ ಖಲ್ವಿದಂ ಬ್ರಹ್ಮ ನೇಹ ನಾನಾಸ್ತಿ ಕಿಂಚನ, ತತ್ವಮಸಿ ಮುಂತಾದ ವಾಕ್ಯಗಳ ಆಧಾರದ ಮೇಲೆ ಭೇದ ಜ್ಞಾನದ ಅಭಾವವಾಗುತ್ತದೆ. ಜೀವಾತ್ಮೈಕತ್ವದ ಜ್ಞಾನ ಉಂಟಾಗುತ್ತದೆ. ಸ್ವತಃ ಬ್ರಹ್ಮದ (ನ) ಅನುಭವವಾಗಬೇಕು. ಇಂದ್ರಿಯಗಳ ಮೂಲಕ ಮಾತ್ರ ಸ್ಪರ್ಶದ ಅನುಭವ ಹೊಂದಬಾರದು, ಇತ್ಯಾದಿ, ನಿರ್ಲೇಪಾವಸ್ಥೆಯನ್ನು ಮೋಕ್ಷ ಎನ್ನುತ್ತೇವೋ? ಆಗ ನೀವು ಅಜ್ಞಾನವನ್ನು ಬಂಧನವಾಗಿ ತಿಳಿದ್ದೀರಿ. ಅಜ್ಞಾನದ ಕೊರತೆಯಾಯಿತು. ಇದೀಗ ಜ್ಞಾನ ಉಂಟಾಯಿತು. ಹಾಗಿರುವಾಗ ಮತ್ತೆ ಮುಕ್ತಾತ್ಮಾ ಅಜ್ಞಾನವನ್ನು ಏಕೆ ಆವಾಹನೆ ಮಾಡುತ್ತಾನೆ? ಹಾಗೆ ಮಾಡಿದ್ದಾದರೆ ಮುಕ್ತನಾಗಿಲ್ಲ. ಎಲ್ಲ ಆತ್ಮಗಳೂ ಬ್ರಹ್ಮವೇ ಆಗಿರುವಾಗ, ಬ್ರಹ್ಮ ಬಂಧನದಲ್ಲಿ ಸಿಲುಕುವುದಿಲ್ಲ. ಬ್ರಹ್ಮ ಭೂತಾತ್ಮ ಮತ್ತೆ ಅಜ್ಞಾನರೂಪದ ಬಂಧನವನ್ನು ಆಹ್ವಾನಿಸಿದರೆ ಹಸ್ತಿಸ್ನಾನಮಿವ ಕ್ರಿಯೆ ಉಂಟಾಗುತ್ತದೆ. ಮಕ್ಕಳು ಆಡುವಾಗ ಬಲಗೈಲಿಯೇ... ಹಾಲುಕುಡಿ... ರೊಟ್ಟಿ ತಿನ್ನು.... ಮನೇಲಿಮಲಕ್ಕೊ ಹಾಗೇಯೇ ಮೋಕ್ಷ ಸುಖ ಅನುಭವಿಸು, ಬಂಧನ ಕಳಚು ಈ ರೀತಿಯ ಮಾತುಗಳು ನಗು ತರಿಸುತ್ತವೆ. ಬಂಧನವೇ ಚೆನ್ನ ಅನಿಸುವಾಗ ಬಿಡುಗಡೆಯಾದರೂ ಏಕೆ ಹೊಂದಬೇಕು? ತತ್ವಜ್ಞಾನ ಮತ್ತು ಅಜ್ಞಾನದಲ್ಲಿ ಯಾವುದೇ ಭೇದವೇ ಉಳಿಯಲಿಲ್ಲ.

ಈಗ ಶ್ರೀವಿಶಿಷ್ಟಾದ್ವೈತ ಶ್ರೀವೈಷ್ಣವ ಮತದಂತೆ ಮೋಕ್ಷತತ್ವಕ್ಕೆ ಬರೋಣ. ಶ್ರೀಮನ್ನಾರಾಯಣನದು ನಿತ್ಯ ಮತ್ತು ಲೀಲಾ ಎಂಬೆರಡು ವಿಭೂತಿಗಳು. ಲೀಲಾ ವಿಭೂತಿಯಲ್ಲಿ ಜ್ಞಾನ, ಕರ್ಮ, ಭಕ್ತಿ, ಪ್ರಪತ್ತಿ ಇತ್ಯಾದಿ ಸಾಧನಗಳು ಹಾಗೂ ಭಗವಂತನ ನಿರ್ಹೇತುಕ ಕೃಪೆಯಿಂದ ಜೀವಕ್ಕೆ ಸದ್ಗತಿ ಉಂಟಾಗುತ್ತದೆ. ಅದನ್ನು ಮೋಕ್ಷ ಎನ್ನುತ್ತಾರೆ. ಆ ಜೀವ ನಿತ್ಯ (ದಂತೆ)ದಲ್ಲಿ ವೈಕುಂಠದಲ್ಲಿ ಭಗವಂತನ ನಿತ್ಯಕೈಂಕರ್ಯವನ್ನು

ಮಾಡುತ್ತದೆ. ಅದು (ಮೋಕ್ಷ) ಸಾಯುಜ್ಯ, ಸಾಲೋಕ್ಯ, ಸಾಧರ್ಮ್ಯ, ಸಾರೂಪ್ಯ ಭೇದಗಳಲ್ಲಿ ಅನುಭೂತವಾಗಿದೆ. ಜೀವ ಅರ್ಚಿರಾದಿ ಮಾರ್ಗದಿಂದ ಶ್ರೀ ವೈಕುಂಠಲೋಕಕ್ಕೆ ಹೋಗುತ್ತದೆ. ತೇ ಯೇ ಶತಮ್ ಇತ್ಯಾದಿ ಆನಂದದಲ್ಲಿ ಶ್ರುತಿ ಪ್ರಮಾಣವಾಗಿದೆ. 'ಯದ್ ಗತ್ವಾ ನ ನಿವರ್ತ್ತಂತೇ ತದ್ಧಾಮ ಪರಮಂ ಮಮ' (ಗೀತೆ) ಇದರಲ್ಲಿ ಶ್ರುತಿ, ಪುರಾಣ, ಆಚಾರ್ಯವಾಣಿಗಳು ಪ್ರಮಾಣ. "ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ। ದಿವೀವ ಚಕ್ಷು ರಾತತಂ ತದ್ವಿಪ್ರಾಸೋ ವಿಪನ್ಯವೋ ಜಾಗೃವಾಸಸ್ಯಮಿಂಧತೇ ಇತ್ಯಾದಿ. 'ಏಕೋಹವೈ ನಾರಾ ಯಣೇನ ಬ್ರಹ್ಮಾನ್ನೇಶಾನಃ ವೈಕುಂಠೇ ತು ಪರೇ ಲೋಕೇ' ಇತ್ಯಾದಿ ಅನೇಕ ಶ್ರುತಿಗಳಿವೆ.

ಅಗ್ನಿರ್ಜ್ಯೋತಿ ರಹಶುಕ್ಲಃ ಷಣ್ಮಾಸಾ ಉತ್ತರಾಯಣಮ್

ತತ್ರ ಪ್ರಯಾತಾ ಗಚ್ಛಂತಿ ಬ್ರಹ್ಮ ಬ್ರಹ್ಮವಿದೋ ಜನಾಃ॥
ಶ್ರೀ ವೈಕುಂಠ ಮುಪೇತ್ಯ ನಿತ್ಯ ಮಜಡಂ ತಸ್ಮಿನ್ ಪರಬ್ರಹ್ಮಣಃ
ಸಾಯುಜ್ಯಂ ಸಮವಾಪ್ಯ ನಂದಕಿ ಚಿರಂತೇ
ನೈವ ಧನ್ಯಃ ಪ್ರಮಾನ್।
ಆಜ್ಞಾನುಗ್ರಹ ಭೀಮಕೋಮಲ
ಪುರೀಫಾಲಾಫಲಂಭೇಷುಷಾಂ
ಯಾಯೇಧ್ಯೇತ್ಯ ಪರಾಜಿತೇತಿ ಕಥಿತಾನಾಕಂ ಪರೇಣಸ್ಥಿತಾ।
.............................................
ನಿಷ್ಕಲ್ಮಷಂ ನಿಹತ ಜನ್ಮಜರಾವಿಕಾರ
ಭೂರ್ಯಯಿಷ್ಠ ಭಕ್ತಿ ವಿಭವೈರಭವೈರವಾಪ್ಯಮ್।
ಅನ್ಯೈರ್ ಧನ್ಯಪುರುಷಂ ರ್ಮನಸಾಪ್ಯನಾಪ್ಯಂ
ವೈಕುಂಠನಾಥ। ತವಧಾಮತದಾಮನಂತಿ

ಮೇಲ್ಕಂಡ ಸಂದರ್ಭಗಳಿಂದ ಸ್ಪಷ್ಟವಾಗುವುದೆಂದರೆ - ಶ್ರೀ ವೈಕುಂಠಧಾಮ ನಿತ್ಯ ಅಜಡ, ಪುನರಾಗಮನ ರಹಿತ, ವರ್ಣನಾತೀತ, ಪರಮಾಕಾಶ, ಹೀಗೆಲ್ಲಾ ಆಳವಂದಾರ್ ಇತ್ಯಾದಿ ಸ್ತೋತ್ರಗಳಿಂದ ಶ್ರಮಾವಧಿ ಯಥಾಮತಿ ವರ್ಣಿತವಾಗಿದೆ. ಈ ರೀತಿ ಪರಮಾನಂದವನ್ನು ಹೊಂದಿರುವ ಜೀವ ಮತ್ತೆ ಸಂಸಾರಾವರ್ತ್ತದಲ್ಲಿ ಬರಲು ಏಕೆ ಸಂಕಲ್ಪ ಮಾಡುವುದಿಲ್ಲ? ಎಂದು ಕೇಳುವುದೂ ಸಹ ಪ್ರಯೋಜನ ಮೂಲದ ಘಾತಕ ಹಾಗೂ ನಿಷ್ಪ್ರಯೋಜಕ ಪ್ರಶ್ನೆ. ಬ್ರಹ್ಮ ಏಕೆ ಮತ್ತೊಮ್ಮೆ ಬಂಧನಕ್ಕೆ ತಳ್ಳುವುದಿಲ್ಲ ಎಂದು ಕೇಳುವುದು ಬ್ರಹ್ಮನನ್ನು ಸುಳ್ಳುಗಾರ ಹಾಗೂ ಕೃತಘ್ನನನ್ನಾಗಿ ಮಾಡುವುದಾಗುತ್ತದೆ. ಯಾವಾಗ ಬ್ರಹ್ಮಸ್ವತಃ ಜೀವನಕ್ಕೆ ಮೋಕ್ಷ ಕೊಟ್ಟ ಪರಮಾನಂದಕೊಟ್ಟ, ನಿತ್ಯ ಸೇವೆ ಕೊಟ್ಟ, ಪುನಃ ಹಿಂತಿರುಗುವ ಮಾತು ಕೊಡಲಿಲ್ಲ. ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ','ಅಭಯಂ ಸರ್ವಭೂತೇ ಭ್ಯೋ ದದಾಮಿ ಈ ಪ್ರತಿಜ್ಞೆಯನ್ನು ಮಾಡಿದ ಮತ್ತೆ ಅವನಿಂದಲೇ ಅದೇ ಜೀವವನ್ನು ಜಗತ್ತಿನ ಹೊಂಡಕ್ಕೆ ತಳ್ಳಲು ಸಂಕಲ್ಪ ಮಾಡುವಂತೆ ಬಯಸುತ್ತೇವೆ. ಇದು ಬ್ರಹ್ಮನಿಗಿಂತಲೂ ನಿಮ್ಮದೇ ಹೆಚ್ಚು ಸ್ವತಂತ್ರವಾಗುತ್ತದೆ. ಜೀವಾತ್ಮ ಬಂಧನಕ್ಕೆ ಬರಲು ಸ್ವತಃ ಸಂಕಲ್ಪ ಮಾಡುತ್ತದೆ. ಅದೂ ಜಗತ್ತಿನ ಸುಖವನ್ನು ಅನುಭವಿಸಿದ ಮೇಲೆಯೂ ಅದು ಆಗಾಗ್ಗೆ ಜಗತ್ತಿಗೆ (ಬಂಧನ) ಬರಲಪೇಕ್ಷಿಸಿದರೆ (ಅಪೇಕ್ಷಿಸುವುದು) ಕೇವಲ ಕಲ್ಪನೆಯಷ್ಟೇ ನೀವು ಸ್ವರ್ಗ, ನರಕ, ವೈಕುಂಠ, ಮೋಕ್ಷ ಇತ್ಯಾದಿ ಎಲ್ಲವನ್ನು ಕಲ್ಪನೆ ಎಂದು (ಕೇವಲ) ಹೇಳಿದ್ದೀರಿ. ವಾಸ್ತವಿಕ ಸತ್ತೆ ಅಲ್ಲದಿದ್ದರೆ ಬಂಧನ ಹಾಗಿದ್ದ ಮೇಲೆ ಕಾಲ್ಪನಿಕವಲ್ಲವೇ?

**ತರ್ಕ -** ವಾಮದೇವ ಋಷಿ ತನ್ನ ತಾಯಿಯ ಗರ್ಭದಲ್ಲಿದ್ದು ಕೊಂಡೇ (ತತ್ವಜ್ಞಾನಿಯಾದುದರಿಂದ) ತತ್ವಜ್ಞಾನದ ಕಾರಣ ಮುಕ್ತರಾದರು. ಹಾಗಿದ್ದೂ ಗರ್ಭದಿಂದ ಹೊರಗೇಕೆ ಬರಲಿಲ್ಲ? ಮುಕ್ತರಾದವರು ಕೂಟಸ್ಥ ನಿರ್ವಿಶೇಷ ಶರೀರಾ ತೀರ ಮತ್ತು ನಿಷ್ಕಾಮರಾಗಿರುತ್ತಾರೆ. ಗರ್ಭದಿಂದ ಹೊರಗೆ ಬರಲಿಲ್ಲವೆಂದರೆ ವಾಮದೇವ ಎಂಬ ಹೆಸರು ಹೇಗೆ ಬಂದಿತು?

'ಅಸ್ಮಾಚ್ಛಾರೀರಾದೂರ್ಧ್ವ ಮುಕ್ರ್ರಮ್ಯಾಮುಸ್ಮಿನ್ ಸರ್ವೇ ಸರ್ವಾನ್ ಕಾಮಾನಾಪ್ತ್ವಾ ಅಮೃತಃ ಸಮಭವತ್ ಉಪನಿಷತ್ ಹೀಗೆ ಏಕಾದರೂ ಹೇಳಿತು - ಈ ಶರೀರದಿಂದ ಮೇಲೆ ನೆಗೆದು ಆ ಸ್ವರ್ಗದಲ್ಲಿ ಎಲ್ಲ ಬಯಕೆಗಳನ್ನು ಹೊಂದಿ ಅಮೃತ ಸದೃಶವಾಯಿತು. ತಾರ್ಕಿಕ ಹೇಳಿಕೆಯಿಂದ ಉಪನಿಷತ್ತುಗಳು ಸ್ವರ್ಗದ ಕಲ್ಪನೆಗಳೂ ಸಹ, ಸ್ವರ್ಗ ವಾಸ್ತಾವಿಕವಲ್ಲ ಹೀಗಿರುವಾಗ ಸ್ವರ್ಗಕ್ಕೆ ಹೋಗುವುದೂ ಸಹ ಕಲ್ಪನೆಯೇ ಇಲ್ಲಿಯ ಪ್ರಶ್ನೆ ಎಂದರೆ-ಆತ್ಮ ಶರೀರದಿಂದ ಹೊರಟು ಇಲ್ಲವೇ ಶರೀರದೊಂದಿಗೆ ಸ್ವರ್ಗಕ್ಕೆ ಹೋಯಿತೇ? ಅಲ್ಲಿಗೆ ಹೋದ ಮೇಲೆ ಎಲ್ಲ ಬಯಕೆಗಳನ್ನು ಪಡೆದಿದ್ದರೆ ಗರ್ಭದಲ್ಲಿಯೇ ಹೇಗೆ ಮುಕ್ತವಾಗಿತ್ತು. ಶರೀರದೊಂದಿಗೆ ಹೋಗಿದ್ದರೆ ಸಶರೀರ ಆತ್ಮ ಮುಕ್ತವಾಗುತ್ತದೆ.

ಶರೀರ ರಹಿತ ಆತ್ಮವಲ್ಲ. ಶರೀರವನ್ನು ಬಿಟ್ಟು ಮುಕ್ತವಾಗಿದ್ದರೆ ಜೀವನ್ಮುಕ್ತವಾಗಲಿಲ್ಲ. ಸ್ವರ್ಗಕ್ಕೆ ಹೋಗಿ ಕೇವಲ ಆತ್ಮ ಮುಕ್ತವಾಯಿತು. ಇಲ್ಲಿ ಸ್ವರ್ಗವನ್ನು ಪರಮವ್ಯೋಮ ಎಂದು ಅರ್ಥೈಸುವುದರಲ್ಲಿ ಏನು ತೊಂದರೆ? ಸ್ವರ್ಗ (ಶ್ರೀವೈಕುಂಠ)ಕ್ಕೆ ಹೋಗಿ ಅಮೃತ (ಆವಾಗಮನರಹಿತ)ವಾಯಿತು. ನಮ್ಮಲ್ಲಿ ಸ್ವರ್ಗ ವಾಸ್ತವಿಕ, ಈ ರೀತಿ ನಾವಿಬ್ಬರೂ ಒಂದೇ ಮಾರ್ಗದ ಪಥಿಕರಾದೆವು. ಯಾವಾಗ - **"ನೇಹನಾ ನಾಸ್ತಿ ಕಿಂಚನ"** ಎಂಬುದು ತೀರ್ಮಾನವಾಯಿತೋ ಆಗ ತಾಯಿ ಗರ್ಭ ಶರೀರಸ್ವರ್ಗ ಬಯಕೆಗಳು ಎಂಬುದೆಲ್ಲಾ ನಿಮ್ಮ ಅಭಿಪ್ರಾಯದಂತೆ ಮಿಥ್ಯೆ ಎಂಬುದು ಒಂದು ಕಲ್ಪನೆಯಷ್ಟೆ.



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

**ಕಳೆದ ಸಂಚಿಕೆಯಿಂದ**

ಪೆರಿಯಾಳ್ವಾರ್ ಕಾಲಕ್ಕೂ ಈ ಪಿಡುಗು ಇಲ್ಲದೆ ಇರಲಿಲ್ಲ. ಅವರು ಮಹಾವಿಷ್ಣುವಿನ ಪಾರಮ್ಯವನ್ನು ಸಭೆಯಲ್ಲಿ ಸ್ಥಾಪಿಸಿದಾಗ ಅವರಿಗೆ ಹೆದರಿಕೆ" ಎಲ್ಲಿ ಈ ಎದುರಾಳಿಗಳು ಕಲೆತು ವಿಷ್ಣುವಿಗೆ ಕೇಡೆಸಗುವರೋ" ಎಂಬುದಾಗಿ ಅದಕ್ಕೆ ಅವರು ಪಲ್ಲಾಂಡ್ ರಚಿಸಿ ವಿಷ್ಣುವಿಗೆ ರಕ್ಷೆಯನ್ನು ಕೋರಿದ್ದೂ. ರಾಮಾನುಜರ ಕಾಲಕ್ಕೂ ಈ ಶೈವರ ಕಿರುಕುಳ ತಪ್ಪಿದ್ದಲ್ಲ. ರಾಮಾನುಜರನ್ನೇ ಕೊಲ್ಲಲು ಪ್ರಯತ್ನಿಸಿದರು. ಈ ರೀತಿ ಎಂದಿನಿಂದಲೂ ಭಯಪೂರಿತ ವಾತಾವರಣದಲ್ಲೇ ಬೆಳೆದು ಬಂದು ಶ್ರೀವೈಷ್ಣವ ಸಿದ್ಧಾಂತ ಆಳ್ವಾರ್, ಮೊದಲಾಳ್ವಾರ್‌ಗಳು ತಮ್ಮ ಸಾಹಿತ್ಯವನ್ನು ರಕ್ಷಿಸುವ ಸಲುವಾಗಿ ಶೈವರ ಮನವೊಲಿಸಲು ತಮ್ಮ ಪ್ರಬಂಧದಲ್ಲಿ ಅಲ್ಲಲ್ಲಿ ಶಿವ, ವಿಷ್ಣು ಅಬೇಧದ ಪಾಶುರಗಳನ್ನು ಸೇರಿಸಿರಬಹುದಾದ ಅನುಮಾನ ಏರ್ಪಡುತ್ತದೆ. ಇದನ್ನು ಸಂಶೋಧಕರು ಅಧ್ಯಯನ ನಡೆಸಿ ನಿರ್ಣಯಿಸಬೇಕಾಗಿದೆ. ಇದೂ ಅಲ್ಲದೇ ಈ ಮೊದಲಾಳ್ವಾರ್ ಕಾಲದಿಂದಲೇ ಶ್ರೀವೈಷ್ಣವ ಅಥವಾ ವೈಷ್ಣವ ಪಂಥದ ಪ್ರಾರಂಭವಾಗಿದ್ದರಿಂದ ಆ ಕಾಲದಲ್ಲಿ ಇದಕ್ಕೊಂದು ಸ್ಪಷ್ಟವಾದ ರೂಪರೇಷೆ ಇನ್ನೂ ಬಂದಿರಲಿಲ್ಲವಾಗಿ ಅವರ ಪ್ರಬಂಧಗಳಲ್ಲಿ ಇಂತಹ ಗೊಂದಲಕ್ಕೆಡೆಯಾಗಿರಬೇಕು. ಅಂತೂ ಒಂದು ಮಾತ್ರ ನಿಷ್ಪಕ್ಷವಾಗಿ ಹೇಳಬಹುದು. ಅವರ ಪಾಶುರಗಳೆಲ್ಲಾ ವಿಷ್ಣುವಿನ ಪಾರಮ್ಯವನ್ನೂ, ಅವನ ವೈಭವವನ್ನೂ ವಿವರಿಸುವುದರಲ್ಲಿ ಯಶಸ್ಸನ್ನುಗಳಿಸಿದೆ. ಎಂತಲೇ ಶ್ರೀ ವೈಷ್ಣವ ಆಚಾರ್ಯರು ಅವರನ್ನು ತಮ್ಮ ಪಂಥದ ಮಾರ್ಗದರ್ಶಕರನ್ನಾಗಿ ಸ್ವೀಕರಿಸಿದ್ದುದು.

ಈ ಮೂವರ ನಂತರದವರು ತಿರುಮಳಿಶೈ ಆಳ್ವಾರ್, ಇವರ **"ತಿರುಚ್ಚಂದ ವಿರುತ್ತಂ"** 120 ಪಾಶುರಗಳಿಂದ ಕೂಡಿದ ಅದ್ಭುತವಾದ ಚಿತ್ರ ಪ್ರಬಂಧ. ಅದರಲ್ಲಿ ಮೂರು ಪಾಶುರಗಳು ತಿರುವೇಂಗಡವನ್ನು ಕುರಿತದ್ದು. ಇವರ ಶೈಲಿ ಅನುಪಮ ; ಭಾವಧಾರೆ ಕ್ಲಿಷ್ಟ, ಭಕ್ತಿ ಅತ್ಯುಚ್ಚತಮ, 48, 60 ಮತ್ತು 81 ನೆಯ ಪಾಶುರಗಳಲ್ಲಿ ತಿರುಮಲೆಯನ್ನು ಆಳ್ವಾರ್ ಹಾಡಿದ್ದಾರೆ.

ತಿರುವೇಂಗಡದ ಮೇಲೆ ನಿಂತಿರುವಂತೆಯೇ ಪರಮ ಪದದಲ್ಲಿಯೂ ವಾಸಿಸುತ್ತಾ ಕ್ಷೀರ ಸಮುದ್ರದಲ್ಲಿಯೂ ಇರುತ್ತೀಯೆ. ನೀರಿನಲ್ಲಿಯೂ, ನೆಲದ ಮೇಲೂ ಅವತರಿಸಿ ಪ್ರಳಯಕ್ಕೊಳಗಾದಾಗ ಭೂಮಿಯನ್ನು ಕಾಪಾಡಿ, ಭೂಮಿಗೆ ಆಪತ್ತು ಒದಗಿದಾಗ ರಕ್ಷಿಸಿ, ಜೀವರಾಶಿಗಳನ್ನು ಸೃಷ್ಟಿಸಿ, ಅವುಗಳ ಭಕ್ತಿಗೆ ಅನುಸಾರವಾಗಿ ದಿವ್ಯಮೂರ್ತಿಗಳನ್ನು ಅನುಗ್ರಹಿಸಿ ಕಾಪಾಡಿದೆ. ನನಗೂ ಹಾಗೆಯೇ ಅನುಗ್ರಹ ಮಾಡು ರಾತ್ರಿ ವೇಳೆ ಬಹಳವಾಗಿ ಮಂಜು ಬಿದ್ದುದರ ಪರಿಣಾಮವಾಗಿ ಎತ್ತರಕ್ಕೆ ಬೆಳೆದು ನಿಂತ ಬಿದುರುಗಳು, ಮರದ ಮೇಲೆ ಮಂಜು ಸಂಚಯವಾದುದರಿಂದ ಆ ಭಾರಕ್ಕೆ ಬಾಗಿ ನೆಲಕ್ಕೆ ಸೋಕಿದುವಂತೆ. ಯಥಾ ಪ್ರಕಾರ ಬೆಳಗ್ಗೆ ಸೂರ್ಯ ರಶ್ಮಿ ಮೇಲೆ ಬೀಳಲು

ಮಂಜು ಕರಗಿ ಹರಿದುದರಿಂದ ಬಿದಿರುಗಳು ಮತ್ತೊಮ್ಮೆ ನೇರವಾಗಿ ನಿಂತು ಆಗಸಕ್ಕೆ ಅಭಿಮುಖವಾದುವಂತೆ! ಅಂತಹ ರಮ್ಯವಾದ ವೇಂಗಡವಾದ ಮೇಲೆ ದುಂಬಿಗಳು ಮಧುಪಾನದ ಮತ್ತಿನಿಂದ ಝೇಂಕಾರ ಮಾಡುತ್ತಾ ವಿಕಸಿತಗೊಂಡ ಪುಷ್ಪಗಳ ಸುತ್ತಲೂ ಹಾರುತ್ತಿವೆಯಂತೆ ಇಂತಹುದೇ ತೋಟ ತಟಾಕಾದಿಗಳಿಂದ ಮೆರೆಯುವ ತಿರುಕ್ಕುಡಂದೈ (ಕುಂಭಕೋಣ) ನಲ್ಲಿ ಮಲಗಿರುವ ಸ್ವಾಮಿಯೂ ಒಬ್ಬನೇ ಆಗಿರುವ ಆಶ್ರಿತ ವತ್ಸಲ ಮಹಾವಿಷ್ಣುವಲ್ಲವೆ? (60) ದೂರ್ವಾಸ ಋಷಿಯ ಶಾಪದಿಂದ ನಷ್ಟೈಶ್ವರ್ಯನಾದ ದೇವೇಂದ್ರನು ಪರಮಾತ್ಮನನ್ನು ಆಶ್ರಯಿಸಲು, ಮಥಿಸಿದ ಕ್ಷೀರಸಾಗರದಲ್ಲಿ ಯೋಗನಿದ್ರೆ ಮಾಡುತ್ತಿರುವವನೂ, ಕಾಲನೇಮಿ ಅಸುರನನ್ನು ನಿಗ್ರಹಿಸಿ, ಬುದ್ಧಿಕೆಟ್ಟ ವಾಲಿಯನ್ನು ಕೊಂದು, ಸುಗ್ರೀವನ ಆಪತ್ತನ್ನು ಪರಿಹರಿಸಿ ಒಂದಕ್ಕೊಂದು ಸೇರಿದಂತಿದ್ದ ಸಪ್ತ ಸಾಲ ವೃಕ್ಷಗಳನ್ನೂ ರಸಾತಳದಿಂದಲೋ ಎನ್ನುವಂತೆ ಭೇದಿಸಿ, ಈಗ ವೇಂಗಡವನ್ನು ಸೇರಿ ನಿಂತಿರುವನು. ಆಶ್ರಿತರು ವ್ಯಾಮೋಹದೊಡನೆ ನಮಿಸುವ ದಿವ್ಯ ಪಾದಗಳನ್ನೇ ನಾನೂ ಸಹ ಆಶ್ರಯಿಸಿ ಉಜ್ಜೀವಿಸುವ ಮಾರ್ಗವನ್ನು ಕಂಡುಕೊಳ್ಳುವುದು ಜಾಣ್ಮೆ (81)

**"ನಾನ್ಮುಗನ್ ತಿರುವಂದಾದಿ"** ಎನ್ನುವ ಪ್ರಬಂಧ 96 ಪಾಶುರಗಳಿಂದ ಕೂಡಿದ್ದು. ಅವುಗಳ 12 ಪಾಶುರಗಳಾದ 34, 39, 40,41, 42, 43, 44,45,46,47,48 ಮತ್ತು 81 ವೇಂಗಡವನ್ನು ಕುರಿತ ಮಂಗಳಾಶಾಸನ ಪಾಶುರಗಳು. ಒಂದು ವಿಶೇಷವೇನೆಂದರೆ ಒಟ್ಟಾಗಿ ಹತ್ತು ಪಾಶುರಗಳಲ್ಲಿ ಅನುಸ್ಯೂತವಾಗಿ ವೇಂಗಡವನ್ನು ಕುರಿತ ಪಾಶುರ ಮಾಡಿರುವವರೆಂದರೆ ಇವರೇ ಮೊದಲಿಗರು. ಇದರ 7 ಪಾಶುರಗಳಲ್ಲಿ ವೇಂಗಡವನ್ನೂ 5 ಪಾಶುರಗಳಲ್ಲಿ ಸ್ವಾಮಿಯನ್ನೂ ಕೀರ್ತಿಸಿದ್ದಾರೆ. ಐದು ಪಾಶುರಗಳಲ್ಲಿ ಸ್ವಾಮಿಯ ಹೆಸರು ಕ್ರಮವಾಗಿ 'ವೇಂಗಡತ್ತು ಮೆಯ್ಯಾನ್', ವೇಂಗಡವಾ, ತಿರುವೇಂಗಡತ್ತಾನ್, ವೇಂಗಡತ್ತಾನ್ ಮತ್ತು ವಡವೇಂಗಡತ್ತಾನ್ ಈ ಆಳ್ವಾರ್ ಪಾಶುರಗಳೂ ಮೊದಲಾಳ್ವಾರ್‌ಗಳ ಪಾಶುರಗಳಂತೆಯೇ ಓಡುತ್ತವೆ. ಹೊಸ ಭಾವಗಳೇನೂ ಕಂಡು ಬರುವುದಿಲ್ಲ. ವರ್ಣನಾ ವೈಖರಿಗಳೂ ಅವೇ ಪುನರುಕ್ತಿಗೊಳ್ಳುತ್ತವೆ. ಅಂದರೆ ಹಾಗೆ ಹಾಗೆಯೇ ಚಿತ್ರಗಳು ಇವೆ ಎಂಬುದಾಗಿ ಅಲ್ಲ. ಅಲ್ಪಸ್ವಲ್ಪ ವ್ಯತ್ಯಾಸವಾಗಿ ಆ ಸನ್ನಿವೇಶಗಳೇ ಮೂಡಿ ಬಂದಿರುತ್ತವೆ. ಅಂತೂ ಮೊದಲಾಳ್ವಾರ್‌ಗಳಿಂದ ಪ್ರಭಾವಿತರಾಗಿರುವ ಮುದ್ರೆ ಚೆನ್ನಾಗಿ ಕಂಡು ಬರುತ್ತೆ. ಇದರಲ್ಲಿ ಬರುವ ವೇಂಗಡ ವಿಷಯಾತ್ಮಕವಾದ ಪ್ರಬಂಧಗಳಿಂದ ಈ ಆಳ್ವಾರ್ ವೇಂಗಡವನ್ನು ದರ್ಶಿಸಲು ಸಾಧ್ಯವಿಲ್ಲದೇ ಹೋಗಿ ಪಶ್ಚಾತ್ತಾಪ ಪಡುವ ವಿಧಾನ ಕಾಣಿಸುತ್ತದೆ.

ಇದರ ಹೃದಯ ಸ್ಪರ್ಶಿ ನಿರೂಪಣೆ ಇದೆ. ಮೊದಲಾಳ್ವಾರ್ ಮುಕ್ಕೋಟಿ ದ್ವಾದಶಿಯ ಸಂಭ್ರಮವನ್ನು ನಮ್ಮ ಮುಂದಿಟ್ಟರೆ ಈ ಆಳ್ವಾರ್ ಶ್ರವಣ ನಕ್ಷತ್ರದ ತಿರುಮಲೆಯ ಬ್ರಹ್ಮೋತ್ಸವ ವೈಭವವನ್ನು ವರ್ಣಿಸುತ್ತಾರೆ. ಆ ವೈಭವದ ಜಾತ್ರೆಯನ್ನು ನೋಡಲು ವೇಂಗಡಕ್ಕೆ ಬರಲು ಆಸೆ ಪಡುತ್ತೇನೆ. ನೀವಾದರೂ ಹೋಗಿ ನೋಡಿ ಅದರ ಭವ್ಯತೆಯಿಂದ ಆನಂದ ಹೊಂದಿರಿ. ನಾನು ನನ್ನ ಪೂರ್ವ ಜೀವನವನ್ನು ವ್ಯರ್ಥವಾಗಿ ಕಳೆದು,ಈಗ ವೃದ್ಧಾಪ್ಯ, ಖಾಯಿಲೆ ಇವುಗಳ ದೆಸೆಯಿಂದ ಅನಾನುಕೂಲತೆ ಉಂಟಾಗಿದೆ. ನೀವಾದರೋ ಮೈಯಲ್ಲಿ ಶಕ್ತಿ, ಕಸು, ಇರುವಾಗ ದರ್ಶಿಸಿ, ಆನಂದ ಪಡಿರಿ, ಪುಣ್ಯವನ್ನು ಗಳಿಸಿಕೊಳ್ಳಿರಿ" ಎನ್ನುತ್ತಾರೆ. ಇವರ ಒಂದು ಪಾಶುರದ ಆಧಾರದಿಂದಲೇ ಇಲ್ಲಿನ ದೇವರು ಮಂಟಪವೊಂದರಲ್ಲಿ ಎಲ್ಲರಿಗೂ ಕಾಣುವಂತೆ ನಿಂತಿದ್ದಾನೆ ಎಂದು ರಾಮಚಂದ್ರರಾಯರು ತೀರ್ಮಾನಿಸಿದ್ದಾರೆ. ನನ್ನ ಅಭಿಪ್ರಾಯವನ್ನು ಈಗಾಗಲೇ ತಿಳಿಸಿದ್ದಾಗಿದೆ.

ತಿರುಕ್ಕೋಟ್ಟಿಯೂರ್‌ನಲ್ಲೂ ತಿರುವೇಂಗಡದಲ್ಲಿಯೂ ನೆಲಸಿರುವ ಸ್ವಾಮಿಯನ್ನು ಸ್ತುತಿಸಲು ಆಶೆ. ಅಂತಹ ಭಗವಂತನನ್ನು ಸ್ತುತಿಸುವಂತಾದದ್ದು ಅವನ ಹಿರಿಮೆ, ಕುತೂಹಲ. ಶರೀರಸಂಬಂಧವಾದ ಕರ್ಮಗಳೂ, ವ್ಯಾಧಿಗಳೂ, ಸಮೀಪಿಸದಂತೆ ಮಾಡುವ ಆ ಸ್ವಾಮಿಯ ತಿರುವಡಿಗಳನ್ನು ನಾನು ಉಪೇಕ್ಷಿಸುವೆನೇ? (34) ಶ್ರೀವೇಂಗಡದೊಡೆಯನನ್ನು ದರ್ಶಿಸಲು, ಸೇವಿಸಲು ಬಾಯಿಬಿಟ್ಟು ಕರೆಯುತ್ತಿದ್ದೇನೆ. ಅಧಿಕವಾದ ಮಳೆಯಿಂದಾಗಿ ಪ್ರವಾಹ ಜಲವುರುಳುತ್ತಿರುವ ಜಲಪಾತಗಳೂ, ಕಾಲುವೆಗಳೂ ರತ್ನ, ಮುತ್ತು ಮುಂತಾದುವುಗಳು ಕೊಚ್ಚಿಸಿಕೊಂಡು ಬರುತ್ತಿವೆ. ಇದರಿಂದ ಭಯಪಟ್ಟು ಆನೆಗಳು ಓಡುತ್ತಿವೆ, ಹಾವುಗಳು ಹುತ್ತಗಳಲ್ಲಿ ಅಡಗುತ್ತಿವೆ.

ಇಂತಹ ಪರ್ವತವನ್ನು ಸೇರಲು **"ಕೂಡಲ್"** ಎನ್ನುವ ಶಕುನ ಚಿತ್ರವನ್ನು ಬರೆದು ಒಳ್ಳೆಯ ಶಕುನ ತಿಳಿಸುವುದೋ ಎಂದು ಎದುರು ನೋಡುತ್ತಿದ್ದೇನೆ (39) ಪರ್ವತವನ್ನು ವೇಂಗಡವೆಂದೇ ಕುರಿತು ಜಪಿಸುತ್ತಿದ್ದೇನೆ ಅದರ ಹೆಸರನ್ನು ಹೇಳುವುದರಿಂದಲೇ ಮುಕ್ತಿ ಸಿದ್ಧವೆಂದು ಭಾವಿಸುತ್ತೇನೆ.

ಸತತ ಧ್ಯಾನ ಮಾಡುತ್ತಿದ್ದೇನೆ,ಅಭ್ಯಾಸ ಮಾಡಿದ ವೇದ ಶಾಸ್ತ್ರಗಳಲ್ಲಿ ಪ್ರತಿಪಾದಿತವಾಗಿರುವ ಶ್ರೀಯಃ ಪತಿಯ ಚರಣಾರವಿಂದಗಳೆಂಬ ಬಲೆಗಳಲ್ಲಿ ಸಿಲುಕಿ ಬಿದ್ದಿದ್ದೇನೆ (40) ಈ ಎರಡು ಪಾಶುರಗಳಲ್ಲೂ ನಾಯಕಿಯ ವಿರಹದ ದೆಸೆಯಿಂದ ಭಗವಂತನ ವಿಶ್ಲೇಷದ ಬಾಧೆಯನ್ನು ವಿವರಿಸಿಕೊಳ್ಳುತ್ತಾಳೆ. ಶಬ್ದ ಮಾಡುವ ಅಬ್ಬಿಗಳು ಮುತ್ತು, ರತ್ನಗಳನ್ನು ಉದುರಿಸುವಂತಹವು. ಶ್ರವಣ ನಕ್ಷತ್ರದಂದು ನಡೆಯುವ ಉತ್ಸವದಲ್ಲಿ ಜನರ ಮಂಗಳಾಶಾಸನ ಧ್ವನಿ ಪ್ರತಿಧ್ವನಿಸುವಂತೆ ಭಕ್ತಾದಿಗಳು ನೆರೆದಿರುವರು. ಈ ಜಾತ್ರೆಯ ವೈಭವವನ್ನು ನಿರುಕಿಸಿ ಜನ್ಮವನ್ನು ಸಾರ್ಥಕ ಪಡೆಯಲು ವೇಂಗಡವನ್ನು ಸೇರಲು ಆಶೆ ಪಡುತ್ತೇನೆ.

**- ಮುಂದುವರೆಯುತ್ತದೆ.**

## 108 ದಿವ್ಯ ದೇಶಗಳು



# ತಿರುತ್ತೆಟ್ರಿಯಂಬಲಮ್

**ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**
**ಅನುವಾದ : ಶ್ರೀಮತಿ. ಸೂರ್ಯವಂಶಿ**

**'ತಿರುತ್ತೆಟ್ರಿಯಂಬಲಮ್'** ಎಂಬ ಈ ದಿವ್ಯದೇಶವು ತಿರುನಾಂಗೂರ್ ದಿವ್ಯ ದೇಶಗಳಲ್ಲಿ ಆರನೆಯದಾಗಿದೆ. ಈ ದಿವ್ಯದೇಶವು ತಮಿಳುನಾಡಿನ ಶೀರ್‌ಕಾಳಿಗೆ ಪೂರ್ವದಲ್ಲಿ 8 ಕಿ.ಮೀ.ದೂರದಲ್ಲಿದೆ. ಈ ದಿವ್ಯದೇಶದ ಮೂಲ ಮೂರ್ತಿ ಶೆಂಗಣ್‌ಮಾಲ್ ಪೆರುಮಾಳ್, ರಂಗನಾಥ, ಲಕ್ಷ್ಮೀ ರಂಗ ಎಂಬ ಹೆಸರುಗಳೊಂದಿಗೆ ಆದಿಶೇಷನ ಮೇಲೆ ದಕ್ಷಿಣ ದಿಕ್ಕಿಗೆ ಪವಳಿಸಿದ್ದು ಪಳ್ಳಿಕೊಂಡ ಎಂಬ (ಶಯನ ಭಂಗಿ) ಭಂಗಿಯಲ್ಲಿ, ನಾಲ್ಕು ಭುಜಗಳೊಂದಿಗೆ ನೆಲೆಸಿದ್ದಾನೆ.

ಆ ಮೂಲಮೂರ್ತಿಯ ಶಿರೋಭಾಗದಲ್ಲಿ ಮಹಾಲಕ್ಷ್ಮೀ, ಶ್ರೀದೇವಿ, ಪಾದಗಳ ಬಳಿ ಭೂದೇವಿ ಅಮ್ಮನವರು ನೆಲೆಸಿದ್ದಾರೆ. ಈ ಆಲಯದ ಪ್ರಾಕಾರದಲ್ಲಿ ಶೆಂಗಮಲಪಲ್ಲಿ ತಾಯಾರ್ ಎಂಬ ನಾಮದೊಂದಿಗೆ ಪ್ರತ್ಯೇಕವಾದ ಸನ್ನಿಧಿಯಲ್ಲಿ ಅಮ್ಮನವರು ನೆಲೆಸಿ ಅನುಗ್ರಹಿಸುತ್ತಿದ್ದಾರೆ.

ಹಾಗೇ ಚಕ್ರತ್ತಾಳ್ವಾರ್, ಗೋಪಾಲಕೃಷ್ಣ, ಹಾಗೇ ಕೆಲವರು ಆಳ್ವಾರರ ಸನ್ನಿಧಿಯೂ ಇದೆ. ಶ್ರುತಿಮಯ ವಿಮಾನ, ವೇದವಿಮಾನ ಎಂದು ವಿಮಾನಗೋಪುರವು ಹೆಸರಾಗಿದೆ. ಸೂರ್ಯಪುಷ್ಕರಿಣಿ, ಶೇಷತೀರ್ಥ ಎಂಬ ನಾಮಧೇಯಗಳೊಂದಿಗೆ ಪುಷ್ಕರಿಣಿಯು ನೆಲೆಸಿದೆ.

### ಸ್ಥಳ ಪುರಾಣ

ಅಂಬಲಮ್ ಎಂಬ ಶಬ್ದಕ್ಕೆ 'ರಂಗ' ಅಥವಾ **'ಮಹಡಿ'** ಎಂಬ ಅರ್ಥಗಳಿವೆ. ಪರಮಶಿವನು ನಾಟ್ಯವಾಡುವ ಈ ಮಹಡಿಯನ್ನು ಶೈವರು **'ಅಂಬಲಮ್'** ಎಂದು ಕರೆಯುತ್ತಾರೆ. ಆದ್ದರಿಂದ ಈ ತಿರುಚಿಟ್ರಂಬಲಮ್, ಪೊನ್ನಂಬಲಮ್ ಎಂದು ಪರಮಶಿವನ ಸ್ಥಳಗಳಿರುತ್ತವೆ. ಹಾಗಿದ್ದಾಗ ಅರ್ಚಾಮೂರ್ತಿಯಾದ ದೇವದೇವನು ಶಯನಭಂಗಿಯಲ್ಲಿ ತಿರುತ್ತೆಟ್ರಿಯಂಬಲಮ್ ಎಂಬ ಈ ದಿವ್ಯದೇಶದಲ್ಲಿ ಯಾವ ರೀತಿ **'ಅಂಬಲಮ್'** ಎಂಬ ಹೆಸರಿನೊಂದಿಗೆ ನೆಲೆಸಿದ್ದಾನೆ ಎನ್ನುವ ಸಂದೇಹ, ಆಶ್ಚರ್ಯವೂ ಕೂಡ ನಮಗೆ ಉಂಟಾಗುತ್ತದೆ.

ಅದಕ್ಕಾಗಿ ನಿಗಮಾಂತ ಮಹಾದೇಶಿಕರು **(ವೇದಾಂತದೇಶಿಕರು)** ದಶಾವತಾರ ಸ್ತೋತ್ರದಲ್ಲಿ ಮೊಟ್ಟಮೊದಲನೆಯ ಶ್ಲೋಕದಲ್ಲೇ **"ರಂಗೇ ಧಾಮನಿ ಲಬ್ಧ ನಿರ್ಭರ ರಸ್ಯೈಃ ಅಧ್ಯಕ್ಷಿತೋ ಭಾವುಕೈಃ"** ಅಂದರೆ ಈ ಲೋಕವನ್ನೇ ನಾಟ್ಯ ರಂಗವನ್ನಾಗಿ ಮಾಡಿಕೊಂಡು ಶ್ರೀ ಮಹಾವಿಷ್ಣುವು ಸಮಸ್ತ ಕಾರ್ಯಗಳನ್ನೂ ನೆರವೇರಿಸುತ್ತಿದ್ದಾನೆಂದು ಅರ್ಥ. ಪರಮ ಶಿವನಿಗೆ ಮಾತ್ರವೇ ಅಲ್ಲದೇ, ಶ್ರೀಮಹಾವಿಷ್ಣುವಿಗೂ ಈ ಹೆಸರು ಅನ್ವಯಿಸುತ್ತದೆ. ಹಾಗೇ **'ತೈಟ್ರಿ'** ಅಂದರೆ ಒಂದು ಎತ್ತರವಾದ ಪ್ರದೇಶ **'ತೈಟ್ರಿ ಅಂಬಲಮ್'** ಅಂದರೆ ಎತ್ತರವಾಗಿರುವ ಮಹಡಿ ಇರುವ ಒಂದು ಪ್ರದೇಶ ಎಂದು ಅರ್ಥ. ಹಾಗೇ ಈ ದಿವ್ಯ ದೇಶದಲ್ಲಿ ಕಂಡು ಬರುತ್ತಿರುವುದರಿಂದ ಇದಕ್ಕೆ **'ತಿರುತ್ತೆಟ್ರಿ ಯಂಬಲಮ್'** ಎಂದು ಹೆಸರು ಬಂದಿದೆ ಎಂದು ಹೇಳುತ್ತಾರೆ.

ಪೂರ್ವ ಕಾಲದಲ್ಲಿ ಭೂಮಾದೇವಿಯನ್ನು ಅಪಹರಿಸಿ ದಂತಹಾ ಹಿರಣ್ಯಾಕ್ಷನಿಂದ ಭೂಮಿಯನ್ನು ರಕ್ಷಿಸುವುದಕ್ಕಾಗಿ ಮಹಾವಿಷ್ಣುವು

ವರಾಹಾವತಾರವನ್ನು ಸ್ವೀಕರಿಸುವುದಕ್ಕೆ ಸಿದ್ಧನಾಗಿದ್ದಾಗ ಆ ಸಮಯದಲ್ಲಿ ಶ್ರೀದೇವಿ ಮತ್ತು ಆದಿಶೇಷನು 'ನಿಮ್ಮನ್ನು ಬಿಟ್ಟು ನಾವೂ ಇರಲಾರೆವು ಎಂದು ಶ್ರೀದೇವಿ ಮತ್ತು ಆದಿಶೇಷನು ಪ್ರಾರ್ಥಿಸಿದರಂತೆ ಆಗ ಭಗವಂತನು ಇವರನ್ನೂ ತಿರುನಾಂಗೂರ್ ದಿವ್ಯದೇಶದಲ್ಲಿ ಮೋದುಗ ವನದ ಸಮೀಪದಲ್ಲಿ ತಪಸ್ಸು ಮಾಡಿ ನಾನು ನನ್ನ ಅವತಾರದ ಉದ್ದೇಶಕ್ಕಾಗಿ ವರಾಹಾವತಾರವನ್ನು ತಾಳಿ ಭೂಮಾದೇವಿಯನ್ನು ರಕ್ಷಿಸಿ, ನಂತರ ಆ ಮೋದುಗವನಕ್ಕೆ ಬಂದು ನಿಮ್ಮನ್ನು ಅನುಗ್ರಹಿಸುತ್ತೇನೆ ಎಂದು ಹೇಳಿದನಂತೆ. ಭಗವಂತನ ಮಾತಿಗೆ ಒಪ್ಪಿದ ಶ್ರೀದೇವಿ ಮತ್ತು ಆದಿಶೇಷನು ಇಬ್ಬರೂ ಮೋದುಗವನಕ್ಕೆ ಹೋದರಂತೆ ಆಗ ಪರಶಿವನೂ ಇವರೊಂದಿಗೆ ಸೇರಿ ಮೂವರೂ ಭಗವಂತನಿಗಾಗಿ ತಪಸ್ಸು ಮಾಡಿದರಂತೆ. ದೇವ ದೇವನು ಇವರಿಗೆ ತಿಳಿಸಿದ ರೀತಿಯಲ್ಲೇ ಹಿರಣ್ಯಾಕ್ಷನನ್ನು ಸಂಹರಿಸಿ, ಈ ಮೋದುಗವನಕ್ಕೆ ಬಂದು ಈ ಮೂವರನ್ನು ಅನುಗ್ರಹಿಸಿದನಂತೆ.

ಹಾಗೇ ರಾಕ್ಷಸನಾದ ಹಿರಣ್ಯಾಕ್ಷನೊಂದಿಗೆ ಯುದ್ಧವನ್ನು ಮಾಡಿ, ಆ ಆಯಾಸವನ್ನು ತೀರಿಸಿಕೊಳ್ಳುವುದಕ್ಕಾಗಿ ತನ್ನ ಶಿರಸ್ಸಿನಲ್ಲಿ ಮಹಾಲಕ್ಷ್ಮಿಯನ್ನು ಹಾಗೇ ಪಾದಗಳಲ್ಲಿ ಭೂಮಾದೇವಿಯರಿಗೆ ಸ್ಥಾನವನ್ನು ನೀಡಿ, ಈ ಅಂಬಲದಲ್ಲಿ ಶಯನ ಮೂರ್ತಿಯಾಗಿ ಅರ್ಚಾಮೂರ್ತಿಯಾಗಿ ಅಂದಿನಿಂದ ಇಂದಿನವರೆಗೂ ಸೇವೆಯನ್ನು ಪ್ರಸಾದಿಸುತ್ತಿದ್ದಾನೆ. ಶ್ರೀರಂಗಂನಲ್ಲಿರುವ ರಂಗನಾಥನಂತೆ, ಈ ಶಯನ ತಿರುಕ್ಕೋಲಂನಲ್ಲಿ ಇದ್ದರೂ ರಂಗನಾಥನಿಗಿಂತಲೂ ಎರಡು ಹಸ್ತಗಳು ಹೆಚ್ಚಾಗಿ ಧರಿಸಿ, ನಾಲ್ಕು ಭುಜಗಳಲ್ಲಿ ಈ ತಿರುತ್ತೆಟ್ರಿಅಂಬಲದಲ್ಲಿ ಸ್ವಾಮಿಯು ನೆಲೆಸಿರುವುದು ವಿಶೇಷವಾಗಿದೆ. ಅಮ್ಮನವರಿಗೆ ಮತ್ತು ಶೇಷದೇವರಿಗೆ ಪ್ರತ್ಯಕ್ಷವಾದ ಸ್ಥಳವಿದೆ!

**ವಿಶೇಷಾಂಶಗಳು**

| | |
|---|---|
| **ದಿವ್ಯದೇಶದ ಹೆಸರು :** | **ತಿರುತ್ತೆಟ್ರಿಯಂಬಲಮ್** |
| **ಪ್ರದೇಶ :** | **ತಮಿಳುನಾಡು, ನಾಗಪಟ್ನಂ, ತಿರುನಾಂಗೂರ್** |
| **ಪ್ರಧಾನವಾದ ದೇವರು :** | **ಶೆಂಗಣ್‌ಮಾಲ್** |
| **ಪ್ರಧಾನವಾದ ದೇವತೆ :** | **ಶೆಂಗಮಲವಲ್ಲಿ** |
| **ದಿಕ್ಕು:** | **ಪೂರ್ವಮುಖ** |
| **ಪುಷ್ಕರಿಣಿ :** | **ಸೂರ್ಯಪುಷ್ಕರಿಣಿ, ಶೇಷತೀರ್ಥ** |
| **ವಿಮಾನ :** | **ಶೃತಿಮಯ ವಿಮಾನ, ವೇದವಿಮಾನ** |
| **ಆಗಮ :** | **ಪಾಂಚರಾತ್ರಾಗಮ** |
| **ಪ್ರತ್ಯಕ್ಷ:** | **ಅನಂತ / ಆದಿಶೇಷ** |
| **ಮಂಗಳಾಶಾಸನವನ್ನು ರಚಿಸಿದ ಆಳ್ವಾರರು :** | **ತಿರುಮಂಗೈ ಆಳ್ವಾರರು** |





ಪಾಂಚರಾತ್ರ ಆಗಮಶಾಸ್ತ್ರದ ಪ್ರಕಾರ ಈ ರಂಗನಾಥನು ಸಕಲವಿಧವಾದ ಸೇವೆಗಳನ್ನು ಸ್ವೀಕರಿಸುತ್ತಿದ್ದಾನೆ. ತಿರುಮಂಗೈ ಆಳ್ವಾರರು ಇವರಿಗೆ ಮಂಗಳಾಶಾಸನವನ್ನು ರಚಿಸಿದ್ದಾರೆ. ಯಾರು ಶೆಂಗಮಲವಲ್ಲಿ ನಾಯಕಿಯ ಸಮೇತನಾದ ರಂಗನಾಥನನ್ನು ಅರ್ಚಿಸಿ ಸೇವೆ ಮಾಡುತ್ತಾರೋ ಅವರಿಗೆ ಸಮಸ್ತ ವಿಧವಾದ ಕಷ್ಟಗಳು ತೊಲಗಿಹೋಗಿ, ಸಮಸ್ತ ಐಶ್ವರ್ಯಗಳು ಸಿದ್ಧಿಸುತ್ತವೆ.

ರಕ್ತಾಬ್ಜಾಕ್ಷ ಸಮಾಹ್ವಯೋ ಹರಿರಸೌ
ರಕ್ತಾಂಬುಜಾ ನಾಯಿಕಾ
ತೀರ್ಥ ಸೂರ್ಯನಿಷೇವಿತಂ
ಶೃತಿಮಯಂ ತದ್
ವ್ಯೋಮಯಾನಂ ಮಹತ್ !
ಉದ್ಯತ್ ಸೂರ್ಯಮುಖಶ್ಚ
ರಕ್ತಕಮಲಾ ಸಾಕ್ಷಾತ್ಕೃತಃ ಸರ್ವದಾ
ಮಹ್ಯಾ ಚೈವ ತಥಾ ಭುಜಂಗಶಯನೋ
ರಕ್ತಾಂಬರೋ ರಾಜತೇ॥



# ಮೇ 2025 ತಿಂಗಳ ರಾಶಿ ಫಲಗಳು



ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್



**ಮೇಷ**

ಮಾತಿನಲ್ಲಿ ಎಚ್ಚರವಿರಬೇಕು. ಆಯ-ವ್ಯಯದ ಕಡೆ ನಿಗಾ ಇರಬೇಕು. ವಿದ್ಯಾರ್ಥಿಗಳು ಓದಿನ ಕಡೆ ಹೆಚ್ಚಿನ ಜವಾಬ್ದಾರಿ ಅಗತ್ಯ ಸಾಂಸಾರಿಕ ಸುಖ ವೃದ್ಧಿ.



**ವೃಷಭ**

ದೈಹಿಕ ಹಾಗೂ ಮಾನಸಿಕ ಪರಿಸ್ಥಿತಿ ಸಂತೋಷ ವಾಗಿರುತ್ತದೆ. ಹೆಚ್ಚಿನ ವರಮಾನ, ಕಾರ್ಯ ಕ್ಷೇತ್ರದಲ್ಲಿ ಮುನ್ನಡೆ, ಶುಭವಾರ್ತೆ, ಕುಟುಂಬದಲ್ಲಿ ಸಂತೃಪ್ತಿ



**ಮಿಥುನ**

ಸ್ವಪ್ರಯತ್ನದಿಂದ ಕಾರ್ಯ ಪ್ರಗತಿ, ವರಮಾನ ಕ್ಕಿಂತ ಖರ್ಚು ಹೆಚ್ಚು, ಆರೋಗ್ಯದ ಕಡೆ ಗಮನ ವಿರಲಿ. ದೇವತಾಕಾರ್ಯ ತೃಪ್ತಿಕರ



**ಕರ್ಕಾಟಕ**

ಭಯಾಧಿಕ್ಯ, ಸ್ಥಾನಭ್ರಷ್ಟತೆ ಸಾಧ್ಯ, ಸಹೋದ್ಯೋಗಿ ಗಳಿಂದ ಅಸಮಾಧಾನ, ಧನಾಗಮನ ಸಂಭವ, ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲ.



**ಸಿಂಹ**

ಸ್ಥಾನಪಲ್ಲಟ ಸಾಧ್ಯತೆ, ಕಾರ್ಯಸ್ಥಾನದಲ್ಲಿ ಗೌರವ ಮತ್ತು ಪ್ರಗತಿ, ಲಕ್ಷ್ಮೀಕಟಾಕ್ಷ ನಿಮ್ಮ ಮೇಲಿರುತ್ತದೆ. ಪ್ರಯಾಣ ಸುಖಕರ ಸಾಂಸಾರಿಕ ಸುಖವೃದ್ಧಿ.



**ಕನ್ಯೆ**

ಶನಿಯು ಸಪ್ತಮದಲ್ಲಿ ಇರುವುದರಿಂದ ವ್ಯಾಕು ಲತೆ ಕೆಲಸದಲ್ಲಿ ಅಡೆ-ತಡೆ, ವಿದ್ಯಾರ್ಥಿಗಳಲ್ಲಿ ಆಲಸ್ಯ ಅಧಿಕ ಧನ ಮತ್ತು ದ್ರವ್ಯಲಾಭ.



**ತುಲಾ**

ನ್ಯಾಯಯುತ ಸಂಪಾದನೆಗೆ ನಿಮ್ಮ ಸಮ್ಮತಿ, ಸುಳ್ಳು ಮೋಸ ಇವುಗಳಿಂದ ದೂರ ಬಂಧು ಬಾಂಧವರಲ್ಲಿ ಸೌಹಾರ್ದತೆ ದ್ರವ್ಯಲಾಭ .



**ವೃಶ್ಚಿಕ**

ಕೋಪಾಧಿಕ್ಯ ಬಂಡವಾಳ ತೊಡಗಿಸುವಾಗ ಎಚ್ಚರ ವಿರಲಿ ಹೊಸ ಸಾಹಸಗಳಿಗೆ ಹೋಗದಿರಿ, ಖರ್ಚು ವೆಚ್ಚ ದಲ್ಲಿ ಹಿಡಿತ ಒಳ್ಳೆಯದು.



**ಧನಸ್ಸು**

ಸಕಲ ಕಾಯವಗಳಲ್ಲಿ ಯಶಸ್ಸು, ಅನಿರೀಕ್ಷಿತ ಧನಲಾಭ ಆರೋಗ್ಯದಲ್ಲಿ ಸುಧಾರಣೆ ವಿದ್ಯಾರ್ಥಿ ಗಳು ಸಾಕಷ್ಟು ಶ್ರಮ ಪಡಲೇಬೇಕು.



**ಮಕರ**

ಕಾರ್ಯಕ್ಷೇತ್ರದಲ್ಲಿ ಶುಭವಾರ್ತೆ, ಅಧಿಕ ವರ ಮಾನ, ವಿದ್ಯಾರ್ಥಿಗಳ ಹೆಚ್ಚಿನ ಸಾಧನೆಯಿಂದ ಉತ್ತಮ ಫಲಿತಾಂಶ ಆರ್ಥಿಕ ಪರಿಸ್ಥಿತಿ ಲಾಭ ದಾಯಕ .



**ಕುಂಭ**

ಧನವ್ಯಯ, ಆರೋಗ್ಯದಕಡೆ ಗಮನವಿರಲಿ, ಬಂಧು ಬಾಂಧವರಿಂದ ಅಸಹಕಾರ, ದೇವತಾ ಕಾರ್ಯಗಳಲ್ಲಿ ತೊಡಗುವಿರಿ.



**ಮೀನ**

ಜನ್ಮಸ್ಥತ ಶನಿಯಿಂದ ಬುದ್ಧಿವಿಕಲ್ಪ, ವರಮಾನ ಕಡಿಮೆ, ಕಳತ್ರ ಸೌಖ್ಯ ಕಡಿಮೆ, ಮಕ್ಕಳ ಕಡೆ ಗಮನವಿರಲಿ ಆರೋಗ್ಯ ಸಾಧಾರಣ ಕುಟುಂಬ ದಲ್ಲಿ ನೆಮ್ಮದಿ ಸಾಧಾರಣ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

**– ಡಾ|| ಅನಸೂಯ ಎಸ್. ರಾಜೀವ್**

### 1.ಕರಿಮಣಿಸರದ ವಿಶೇಷತೆ ಏನು?

**ಉತ್ತರ :** ಕರಿಮಣಿಸರವು ಮದುವೆಯಾದ ಸ್ತ್ರೀಯು ಧರಿಸುವಂತಹುದು. ಇದು ಮುತ್ತೈದೆಯ ಸೌಭಾಗ್ಯ ಲಕ್ಷಣ, ಕರೀಮಣಿಯು ಎದೆಯ ಭಾಗದಲ್ಲಿ ಉಂಟಾಗುವ ಉಷ್ಣತೆಯನ್ನು ಹೀರಿಕೊಳ್ಳುತ್ತದೆ. ಹಾಲುಣಿಸುವ ತಾಯಿಯಲ್ಲಿ ಎದೆ ಹಾಲಿನ ಉಷ್ಣತೆಯನ್ನು ಹೀರಿಕೊಂಡು ಎದೆ ಹಾಲು ಕೆಡದಂತೆ ಶಿಶುವಿಗೆ ಉಣ್ಣಲು ಅನುಕೂಲವಾದ ಸಮ ಉಷ್ಣತೆಯಲ್ಲಿರಿಸಲು ಸಹಾಯ ಮಾಡುತ್ತದೆ. ಆಧ್ಯಾತ್ಮಿಕವಾಗಿ ಕರೀಮಣಿಸರವು ಕತ್ತಿನ ಸುತ್ತ ಸುಷುಮ್ನಾ ನಾಡಿಗೆ ಸಮ್ಮಿಲನ ಚಕ್ರಗಳ ಆಧಾರವಾದ ಬೆನ್ನಲುಬಿನ ಮೇಲ್ಭಾಗ ವಿಶುದ್ಧ ಚಕ್ರಕ್ಕೆ ಹರಿದು ಬಂದು ಹೃದಯದ ಭಾಗದಲ್ಲಿರುವ ಅನಾಹತ ಚಕ್ರದಲ್ಲಿ ಸಮ್ಮಿಲನಗೊಳ್ಳುತ್ತದೆ. ಹೃದಯಜ್ಯೋತಿಯು ಸದಾ ದರ್ಶನೀಯವೆಂದು ಸೂಚಿಸುವುದೇ ಮಾಂಗಲ್ಯಸರದ ಸಂಕೇತ.

### 2.ವಿಭೂತಿ ಧಾರಣೆಯ ಮಹತ್ವವೇನು?

**ಉತ್ತರ :** ಭಸ್ಮ ಎಂದರೆ ಪವಿತ್ರವಾದ ವಿಭೂತಿ. ಪಾಪಗಳನ್ನು ಸುಟ್ಟು ದೇವರನ್ನು ನೆನೆಯುವುದೆಂದರ್ಥ. 'ಭ' ಎಂದರೆ ನಾಶ 'ಸ' ಎಂದರೆ ಸ್ಮರಣ ಎಂದರ್ಥ. ಹಾಗಾಗಿ ಭಸ್ಮಧಾರಣೆ ಎಂದರೆ ಕೆಟ್ಟದ್ದನ್ನು ಸುಟ್ಟು ದೈವವನ್ನು ನೆನೆ ಎಂದರ್ಥ. ವಿಭೂತಿ ಧರಿಸಿದವನು ಕಳೆಕಳೆಯಾಗಿರುತ್ತಾರೆ. ಅದು ಅವರಿಗೆ ರಕ್ಷಣೆ ಕೊಡುತ್ತದೆ. ಯಾರು ವಿಭೂತಿಯನ್ನು ಧರಿಸುವರೋ ಅವರಿಗೆ ಹೆಚ್ಚು ಅನಾರೋಗ್ಯ ಕಾಡುವುದಿಲ್ಲ.

ಮೂರು ಪಟ್ಟಿಯಂತೆ ಹಣೆಯಲ್ಲಿ ವಿಭೂತಿ ಧಾರಣೆ ಮಾಡಿ ಕುಂಕುಮದ ಬಟ್ಟಲನ್ನು ಮಧ್ಯದಲ್ಲಿ ಇಟ್ಟುಕೊಂಡರೆ ಶಿವ ಶಕ್ತಿಯ ಸಂಕೇತ 'ತ್ರಯಂಬಕಂ ಯಜಾಮಹೆ ಸುಗಂಧಿಂ ಪುಷ್ಟಿ ವರ್ಧನವ್ ಉರ್ವಾರುಕಮಿವಬಂಧನಾನ್ ಮೃತ್ಯೋರ್ಮುಕ್ಷೀಯ ಮಾಮೃತಾತ್ ಎಂಬ ಮಂತ್ರದೊಂದಿಗೆ ವಿಭೂತಿಧಾರಣ ಮಾಡಬೇಕು. ಅಡ್ಡರೇಖೆ ತಿರ್ಯಕ್‌ಪುಂಡ್ರವೆನಿಸುತ್ತದೆ. ನಾವು ಧರಿಸುವ ಪುಂಡ್ರ ಒಳಗಿನ ಶಕ್ತಿ ಸಂಚಾರದ ಸಂಕೇತ. ಮೂಲಾಧಾರದಿಂದ ಕುಂಡಲಿನ ಶಕ್ತಿ ಜಾಗೃತನಾಗಿ ಸಹಸ್ರಾರದಲ್ಲಿ ಹೆಡೆಯರಳಿ ನಿಲ್ಲುವುದರ ಸಂಕೇತ. ನಮ್ಮ ಆಜ್ಞಾ ಚಕ್ರಗಳನ್ನು ಜಾಗೃತಿಗೊಳಿಸಲು ಊರ್ಧ್ವಮುಖವಾಗಿ ಇಡುವುದು ಅಗತ್ಯ. ಅದು ಊರ್ಧ್ವ ಪುಂಡ್ರಧಾರಣೆಯಿಂದ ಮಾತ್ರ ಸಾಧ್ಯ. ಅಡ್ಡ ಮೂರು ಗೆರೆಗಳನ್ನು ಎಳೆಯುವ ತಿರ್ಯಕ್ ಪುಂಡ್ರದ ಅರ್ಥವೆಂದರೆ ಸತ್ವ,ರಜ,ತಮೋಗುಣಗಳು, ತ್ರಿಮೂರ್ತಿಗಳು ಜಾಗ್ರತ್, ಸ್ವಪ್ನ, ಸುಷುಪ್ತಿಗಳನ್ನು ಸೂಚಿಸುತ್ತದೆ. ಹೀಗೆ ವಿಭೂತಿಧಾರಣೆ ಅತ್ಯಂತ ಮಂಗಳಕರವಾಗಿಯೂ ವೈರಾಗ್ಯಸೂಚಕವೂ ಆಗಿರುತ್ತದೆ.

### 4. ಅಕ್ಷತೆ ಕಾಳಿನ ಮಹತ್ವವೇನು?

**ಉತ್ತರ :** ಅಕ್ಷತೆಯು ಪವಿತ್ರವಾದ ಪೂರ್ಣವಾದ ಅಕ್ಕಿ. ಈ ಅಕ್ಷತೆಯನ್ನು ದೇವರಿಗೆ ಸಮರ್ಪಿಸದೇ ಪೂಜೆಯೇ ಆಗದು. ಪ್ರತಿಯೊಂದು ಮಂಗಳದ್ರವ್ಯವನ್ನು ಸಮರ್ಪಿಸಿದ ಮೇಲೆ ಅಕ್ಷತೆ ಹಾಕಿದರೇನೇ ಅದರ ಪೂರ್ಣತೆಯುಂಟಾಗುತ್ತದೆ. ಗುರು ಹಿರಿಯರು ಆಶೀರ್ವಾದ ಮಾಡಬೇಕಾದರೆ ಅಕ್ಷತೆಯನ್ನೂ ತಲೆ ಮೇಲೆ ಹಾಕಿ ಆಶೀರ್ವದಿಸುತ್ತಾರೆ. ದೇವರಿಗೆ ಪೂಜೆ ಮಾಡುವಾಗ ಶುಭಸಮಾರಂಭಗಳಿಗೆ ಆಮಂತ್ರಿಸುವಾಗ ಕೆಂಪು ಕುಂಕುಮ ಮಿಶ್ರಿತ ಅಕ್ಷತೆಕಾಳುಗಳನ್ನು ಉಪಯೋಗಿಸುತ್ತಾರೆ. ಯತಿಗಳು ಮಂತ್ರಪೂರ್ವಕವಾಗಿ ನೀಡುವ ಆಶೀರ್ವಾದಕ್ಕೆ ಅರಿಶಿನ ಮಿಶ್ರಿತ ಅಕ್ಷತೆಕಾಳನ್ನೂ ಉಪಯೋಗಿಸುತ್ತಾರೆ.

ನೀತಿ ಕಥೆ

# ಮಕ್ಕಳು ಹಿರಿಯರನ್ನೂ ಪರಿವರ್ತಿಸಬಲ್ಲರು



- ಎ.ಆರ್. ರಘುರಾಮ
99161 38436

ರಸ್ತೆ ಬದಿಯಲ್ಲಿ ಬಾಲಕಿಯೊಬ್ಬಳು ಸೇಬು ಮಾರುತ್ತಿದ್ದಳು. ಕಾರೊಂದು ಬಂದು ನಿಂತಿತು. ಅದರಲ್ಲಿ ಪತಿ, ಪತ್ನಿ ಮತ್ತು ಒಂದು ಮಗು ಇದ್ದರು. ಒಂದು ಸೇಬು ಹಣ್ಣಿಗೆ ಹಣ ಎಷ್ಟು ಎಂದು ಕಾರಿನಲ್ಲಿದ್ದ ಮಹಿಳೆ ಕೇಳಿದಳು. 25 ರೂಪಾಯಿ, 15 ಕ್ಕೆ ಕೊಡುವೆಯಾ? ಇಲ್ಲ. ಹೋಗಲಿ 20 ರೂ. ಗಾದರೂ ಕೊಡು ಎಂದು ಆಕೆ ಚೌಕಾಸಿ ಮಾಡಿದಳು. ಸಾಧ್ಯವೇ ಇಲ್ಲ. ನಾನು ತಂದಿದ್ದೇ 23 ರೂಗೆ ಎಂದಳು ಬಾಲಕಿ, ಸರಿ ಹಾಗಾದರೆ. ಒಂದು ಹಣ್ಣು ಕೊಡು ಎಂದಳು ಮಹಿಳೆ, ಚೌಕಾಸಿ ವ್ಯಾಪಾರ ನೋಡಿ ಗಂಡ ನಗುತ್ತಾ ಕುಳಿತಿದ್ದ. ಹುಡುಗಿ ಹಣ್ಣು ತಂದಳು. ಕಾರಿನಲ್ಲಿ ಕೈ ಚಾಚಿದ ಆ ಮಗುವಿಗೆ ಹಣ್ಣು ಕೊಡಲು ಮುಂದಾದಳು. ಆ ಹಣ್ಣು ಮಗುವಿನ ಕೈಯಿಂದ ಜಾರಿ ನೆಲಕ್ಕೆ ಬಿತ್ತು, ಮಣ್ಣಾಯಿತು. ಕಾರಲ್ಲಿ ಇದ್ದ ಮಗು ಅಳಲು ಆರಂಭಿಸಿತು. ಆ ಹುಡುಗಿ ಓಡಿ ಹೋಗಿ ಮತ್ತೆ ಇನ್ನೊಂದು ಸೇಬು ತಂದು ಜೋಪಾನವಾಗಿ ಮಗುವಿಗೆ ಕೊಟ್ಟಳು. ಹಣ್ಣು ಮಾರುವ ಹುಡುಗಿಗೆ ಮಹಿಳೆ 50 ರೂ. ನೀಡಿದಳು. ಎಣಿಸಿಕೊಂಡ ಹುಡುಗಿ 25 ರೂ. ವಾಪಸ್ ಕೊಟ್ಟಳು. ಇದೇನು ಅಚ್ಚರಿ! ಮಹಿಳೆ 2 ಹಣ್ಣಿನ ಹಣ 50 ರೂ. ತಗೋ ಎಂದರೂ ಆ ಹುಡುಗಿ ಸುತರಾಂ ಒಪ್ಪಲಿಲ್ಲ. ಒಂದು ಹಣ್ಣನ್ನು ನನ್ನ ಮಗು ಕೆಡವಿ ಹಾಳು ಮಾಡಿದೆ. ನಿನಗೆ ನಷ್ಟ ಆಗುತ್ತದೆ. ಒಟ್ಟು 50 ರೂ. ತಗೋ ಎಂದರೂ ಆ ಹುಡುಗಿ ಸಮ್ಮತಿಸಲಿಲ್ಲ. ಅಯ್ಯೋ ನನ್ನ ತಮ್ಮ ಹಣ್ಣನ್ನು ಕೆಳಗೆ ಕೆಡವಿದ್ದಾನೆ. ನಷ್ಟವಲ್ಲ ಬಿಡಿ ಎಂದಳು. ಸಹೋದರ ಸಂಬಂಧಗಳಲ್ಲಿ ಲಾಭ-ನಷ್ಟ ಲೆಕ್ಕಿಸಬಾರದು ಎಂದು ನನಗೆ ಅಮ್ಮ ಹೇಳಿದ್ದಾಳೆ. ಹಾಗಾಗಿ ಹೆಚ್ಚಿನ ಹಣ ಒಲ್ಲೆ ಎಂದು ಬಿಟ್ಟಳು. ಮಹಿಳೆ ಬೆರಗಾದಳು. ಮನೆಯಲ್ಲಿ ಯಾರ್ಯಾರು ಇದ್ದೀರಿ ಎಂದಳು. ನಾನು ಅಮ್ಮ ಮಾತ್ರ. ಸ್ವಲ್ಪ ದಿನಗಳ ಕೆಳಗೆ ನನ್ನ ತಮ್ಮ ಕಾಯಿಲೆಯಿಂದ ನರಳಿ ಮರಣಿಸಿದ. ನಿಮ್ಮ ಮಗು ನೋಡಿ ನನ್ನ ತಮ್ಮ ನೆನಪಾದ. ಹಾಗಾಗಿ ತಮ್ಮ ತಿಂದಿದ್ದರೂ, ಕೈತಪ್ಪಿ ಬೀಳಿಸಿದ್ದರೂ ಅದು ನನಗೆ ಪ್ರೀತಿಯೇ, ಇಲ್ಲಿ ನಷ್ಟದ ಮಾತೇ ಇಲ್ಲ ಎಂದು ಹೇಳಿ ವ್ಯಾಪಾರಕ್ಕೆ ಹೋದಳು.

ಮಕ್ಕಳ ಆದರ್ಶ, ವಿಶಾಲ ಪ್ರೀತಿ, ಹೃದಯವಂತಿಕೆ ಮತ್ತು ತ್ಯಾಗಮಯ ಗುಣ ಹಿರಿಯರ ಮನವನ್ನೂ ಪರಿವರ್ತನೆ ಮಾಡುತ್ತದೆ. ಮಾತೃತ್ವ ಉದ್ದೀಪಿಸುತ್ತದೆ. ಒಂದು ಹಣ್ಣಿಗೆ ಚೌಕಾಸಿ ಮಾಡುತ್ತಿದ್ದ, ಆ ಮಹಿಳೆ ತನ್ನ ಕೈನಲ್ಲಿದ್ದ 2 ಚಿನ್ನದ ಬಳೆಗಳನ್ನು ಆ ಹುಡುಗಿಗೆ ಕೊಟ್ಟಳು. ಬೇಡ ಎನ್ನಬೇಡ ತೆಗೆದುಕೋ. ಇವುಗಳನ್ನು ನಾನು ನನ್ನ ಮಗಳಿಗೆ ಕೊಡುತ್ತಿದ್ದೇನೆ ಎಂದಳು. ಸಂಬಂಧಗಳಲ್ಲಿ ಲಾಭ-ನಷ್ಟದ ಲೆಕ್ಕಾಚಾರ ಇರಬಾರದು ಎಂಬುದೇ ಕತೆಯ ನೀತಿ.

## ಮಾರ್ಚ್ 2025 ತಿಂಗಳ ಪದಬಂಧದ ಉತ್ತರಗಳು

01. ಬೇವುಬೆಲ್ಲ
02. ತೀರ್ಥಪ್ರಬಂಧ
03. 223 ಕಿಮೀ.
04. ಆದಿ ಪರ್ವದಲ್ಲಿ
05. ಐದು
06. ಕೃಷ್ಣನ
07. ವೆಂಕಣ್ಣ
08. ವೈಕುಂಠ ಏಕಾದಶಿ
09. ರಾಮತೀರ್ಥರು
10. ಗೋವಿಂದ ಒಡೆಯರ್
11. ಸರ್ವಯಜ್ಞ
12. ಹರಿಭಕ್ತ
13. ರಂಗಿನಾಟ
14. ನಾಲ್ಕನೆಯದೆಂದು
15. ದೇವಮ್ಮ

# ಪುಟಾಣಿ ಮಕ್ಕಳಿಗಾಗಿ

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.




ಬಣ್ಣವನ್ನು ತುಂಬಿರಿ.



## ಮಾರ್ಗ ಅನ್ವೇಷಣೆ

ಮಕ್ಕಳೇ, ಪ್ರಹ್ಲಾದ ಯಾವ ಹಾದಿಯಲ್ಲಿ ಹೋದರೆ ಲಕ್ಷ್ಮೀನರಸಿಂಹ ಸ್ವಾಮಿಯನ್ನು ಸೇರಬಹುದು ಎಂದು ಕಂಡು ಹಿಡಿಯಿರಿ ನೋಡೋಣ!





ಇಲ್ಲಿರುವ ಚಿತ್ರವನ್ನು ನೋಡಿದರೆ ಯಾವ ಹಬ್ಬದ ಗುರುತನ್ನು ತೋರಿಸುತ್ತದೆ.

**ಉತ್ತರಗಳು:**

ಕೂರ್ಮಜಯಂತಿ



ತಿರುಮಲೆ ತಿರುಪತಿ ದೇವಸ್ಥಾನಗಳು

## ಮಕ್ಕಳೇ ಇದು ನಿಮಗಾಗಿ

# ರಸ ಪ್ರಶ್ನೆಗಳು

01. ವೈಶಾಖದಲ್ಲಿ ಯಾವ ನಕ್ಷತ್ರ ಯೋಗ ಇರುತ್ತದೆ? ..............................
02. ಅಬ್ಬೂರು ಪ್ರದೇಶವನ್ನು ಅಪ್ರಮೇಯ ಮಹಾತ್ಮೆಯಲ್ಲಿ ಏನೆಂದು ಕರೆಯಲಾಗಿದೆ?..............................
03. ಝುರಣಿ ನರಸಿಂಹ ಕ್ಷೇತ್ರ ಎಲ್ಲಿದೆ ? ..............................
04. ತ್ರಿಲೋಕ ಸಂಚಾರಿ ಯಾರು?..............................
05. ದುದ್ದ ಗ್ರಾಮದಲ್ಲಿರುವ ದೇವಾಲಯ ಯಾವುದು? ..............................
06. ಶತಾರಿ ಯಾರ ಸಂಕೇತ? ..............................
07. ರಾಘವೇಂದ್ರ ಸ್ವಾಮಿಗಳು ಏನನ್ನು ನೀಡಿ ಅನುಗ್ರಹಿಸಿದರು?..............................
08. ಸರಸ್ವತೀ ನದಿ ಹೇಗೆ ಜನಿಸಿದಳು?..............................
09. ಅನ್ನಮಯ್ಯನವರು ರಚಿಸಿದ ಕೀರ್ತನೆಗಳು ಎಷ್ಟು ? ..............................
10. ಮಂಗಳಗಿರಿಯಲ್ಲಿ ಪ್ರಸಿದ್ಧ ದೇವಾಲಯ ಯಾವುದು? ..............................
11. ಚಕ್ರರಾಜನು ಯಾರನ್ನು ನೋಡಿ ಗರ್ಜಿಸಿದನು? ..............................
12. ಶ್ರೀ ಗುಂಡಾಚಾರ್ಯರು ಯಾವುದರಲ್ಲಿ ಧ್ರುವತಾರೆಯಂತೆ ಮಿನುಗಿದರು?..............................
13. ತಿರುತ್ತೆಟ್ರಿಯೆಂಬಲಮ್‌ನ ಮೂಲ ಮೂರ್ತಿ ಹೆಸರೇನು?..............................
14. ಯಾವ ಸಂಬಂಧಗಳಲ್ಲಿ ಲಾಭ ನಷ್ಟ ಲೆಕ್ಕಿಸಬಾರದು?..............................
15. ಯಾರ ಮಾತಿನಿಂದ ಕೈಕೇಯಿಗೆ ನಷ್ಟವಾಯಿತು? ..............................

## ಸೂಚನೆಗಳು

**34 ಕ್ವಿಜ್**

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

ಹೆಸರು :
ಚಂದಾ ಸಂಖ್ಯೆ :
ತಂದೆಯ ಹೆಸರು :
ತಾಯಿಯ ಹೆಸರು:

ವಿಳಾಸ :

ದೂರವಾಣಿ ಸಂಖ್ಯೆ :



ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ



- ಸಿಂಹದ ರೂಪದಲ್ಲಿ ದರ್ಶನವನ್ನು ನೀಡುವ ಸ್ವಾಮಿ ಯಾರು?
- ಪ್ರಹ್ಲಾದನಿಗೆ ಅಭಯ ನೀಡಿದವರು ಯಾರು?
- ನರಸಿಂಹ ಸ್ವಾಮಿಯವರೊಂದಿಗೆ ಇರುವ ಅಮ್ಮನವರು ಯಾರು?
- ನರಸಿಂಹ ಸ್ವಾಮಿ ಅವತರಿಸಿದ ಮಾಸ ಮತ್ತು ತಿಥಿ ಯಾವಾಗ?
- ನರಸಿಂಹ ಸ್ವಾಮಿ ಯಾವ ಸಮಯದಲ್ಲಿ ಉದ್ಭವಿಸಿದರು?
- ನರಸಿಂಹ ಸ್ವಾಮಿ ಸಂಹರಿಸಿದ ಅಸುರ ಯಾರು?
- ನರಸಿಂಹನಾಗಿ ಯಾರಿಗಾಗಿ ಅವತರಿಸಿದರು?
- ದಶಾವತಾರದಲ್ಲಿ ನರಸಿಂಹನ ಅವತಾರ ಎಷ್ಟನೆಯದು?



1) ನರಸಿಂಹಸ್ವಾಮಿ 2) ನರಸಿಂಹಸ್ವಾಮಿ 3) ಲಕ್ಷ್ಮಿ ದೇವಿ 4) ವೈಶಾಖ ಬಹುಳ ಚತುರ್ದಶಿ 5) ಮುಸ್ಸಂಜೆ 6) ಹಿರಣ್ಯಕಶಿಪು 7) ಪ್ರಹ್ಲಾದ 8) ನಾಲ್ಕನೆಯದು

ಮಕ್ಕಳೇ ಈ ಚಿತ್ರದಲ್ಲಿರುವ ಮಡಿಕೆಯಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ತಟ್ಟೆಯಲ್ಲಿ ಸರಿಹೊಂದುತ್ತದೆ ಎಂದು ಕಂಡು ಹಿಡಿಯಿರಿ ಮಕ್ಕಳೇ !




1) v 2) iii 3) iv 4) ii 5) i





**ಮಕ್ಕಳೆ ಈ ಚಿತ್ರದಲ್ಲಿ ಕಾಣುವ ವಸ್ತುಗಳು ಯಾವ ಕಾಲದಲ್ಲಿ ಕುಡಿಯುವ ಪಾನೀಯಗಳು ಎಂದು ಕಂಡು ಹಿಡಿಯಿರಿ ನೋಡೋಣ**

ಬೇಸಿಗೆ ಕಾಲ

ಚಿತ್ರಕಥೆ

# ಹೇಳಿಕೆಯ ಮಾತುಗಳನ್ನು ಕೇಳುವುದು ಅಪಾಯ

ಕಥೆ: ತೆಲುಗು ಮೂಲ: ಡಾ|| ಕೆ. ರವಿಚಂದ್ರನ್
ಅನುವಾದ : ಆರ್.ಕೆ.ವಿ.
ಚಿತ್ರಗಳು : ಟಿ. ಶಿವಾಜಿ




ಆ ಮಾತನ್ನು ಕೇಳಿ ಕೈಕೇಯಿ ಗಾಬರಿಯಾದಳು
ನನ್ನ ಮಗ ಭರತನು ದಿಕ್ಕಾಪಾಲಾಗುವನೇ? ಇಂತಹ ದುರ್ಗತಿ ನನ್ನ ಮಗನಿಗೆ ಬೇಡ?
ಹಾ.. ಈಗ ನಿನ್ನ ಮಾತು ಅರ್ಥವಾಯಿತು... ಆಗತಿ ರಾಮನಿಗೆ ಸಿಗಬೇಕು...
ಹಾಗಾದರೆ ಈಗ ಏನು ದಾರಿ?
ದಾರಿ ಇದೆ. ಏಕೆ ಇಲ್ಲ? ಚೆನ್ನಾಗಿ ನೆನಪಿಸಿಕೋ... ಆ ದಿನ ಮಹಾರಾಜರು ನಿನಗೆ ಕೊಟ್ಟ ವರಗಳು... ಆ ವರಗಳನ್ನು ನೀನು ಕೇಳಲಿಲ್ಲ ಅವರು ನೀಡಲಿಲ್ಲ. ಈಗ ಆ ವರವನ್ನು ಕೇಳು...
ಕೋಪದ ಗೃಹದೊಳಗೆ ಪ್ರವೇಶಿಸಿ ಈ ಕಾರ್ಯವನ್ನು ಸಾಧಿಸು... ಭರತನಿಗೆ ಪಟ್ಟಾಭಿಷೇಕ ಮತ್ತು ರಾಮನಿಗೆ ವನವಾಸವನ್ನು ಬಯಸು...
ಮಹಾರಾಜನು ವರವನ್ನು ನೀಡುತ್ತಾರೆಯೇ?
ಮೊದಲು ವರವನ್ನು ನೀಡು ಎಂದು ಭರವಸೆಯನ್ನು ತೆಗೆದು ಕೋ... ಪಂಚಭೂತಗಳ ಸಾಕ್ಷಿಯಾಗಿ...! ಆಗ ಮಹಾರಾಜರು ಎಲ್ಲಿಗೆ ಹೋಗುತ್ತಾರೆ...
ಸರಿ ನೀನು ಹೇಳಿದ ಹಾಗೆ ಮಾಡುತ್ತೇನೆ... ಮಂಥರಾ! ನಾವು ಅಂದುಕೊಂಡ ಕೆಲಸವು ಪೂರ್ತಿಯಾದ ನಂತರ ನಿನ್ನ ಬೆನ್ನಿಗೆ ಚಿನ್ನದ ಕವಚವನ್ನು ಮಾಡಿಸುತ್ತೇನೆ.
ಹ್ಹ...ಹ್ಹ... ಬೆಳಗ್ಗೆಯಾದರೆ ನನ್ನ ಮಗ ಭರತನು ಈ ಅಯೋಧ್ಯಾನಗರದ ಚಕ್ರವರ್ತಿ... ನಾನು ರಾಜಮಾತೆ ಮಂಥರೆಯ ಮಾತು ಕೇಳಿ ಕೈಕೇಯಿಗೆ ತುಂಬಾ ನಷ್ಟವಾಯಿತು.
ಕೊನೆಗೆ ತನ್ನ ಮಾಂಗಲ್ಯವನ್ನು ಕಳೆದು ಕೊಂಡಳು ಎಲ್ಲರ ಮುಂದೆ ದೋಷಿಯಾದಳು. ಒಳ್ಳೆಯ ಕುಟುಂಬಗಳನ್ನು ಹಾಳು ಮಾಡುವಂತಹ ಮಂಥರೆಯರು ಅನೇಕ ಜನರು ಈ ಜಗತ್ತಿನಲ್ಲಿದ್ದಾರೆ. ಇಂತಹವರ ಮಾತಿಗೆ ಕಿವಿಗೊಡದೆ ಅವರ ಜೊತೆ ಜಾಗ್ರತೆವಹಿಸಿದರೆ ಎಲ್ಲರೂ ಚೆನ್ನಾಗಿರುತ್ತಾರೆ....
ಲೋಕಾಸ್ಸಮಸ್ತಾ ಸ್ಸುಖಿನೋ ಭವಂತು!

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರೆಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ದು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್ : 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

## ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., P.G. Dip.in Ephigraphy, Dip.in Yoga on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.

ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಗೌ॥ ಶ್ರೀ ನಾರಾಚಂದ್ರಬಾಬು ನಾಯುಡು ರವರ ಮೊಮ್ಮಗ ಹಾಗೂ ಮಾನ್ಯ ಮಂತ್ರಿಗಳಾದ ಶ್ರೀ ನಾರಾಲೋಕೇಶ್ ರವರ ಪುತ್ರರಾದ ದೇವಾನ್ಷ್ 11 ನೇ ಹುಟ್ಟು ಹಬ್ಬದ ಪ್ರಯುಕ್ತ 21-03-2025 ರಂದು ಕುಟುಂಬ ಸಮೇತರಾಗಿ ತಿರುಮಲೆ ಸ್ವಾಮಿಯವರ ದರ್ಶನ ಪಡೆದರು. ನಂತರ ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನಪ್ರಸಾದ ಕೇಂದ್ರದಲ್ಲಿ (ತಿರುಮಲೆ) ಭಕ್ತರಿಗೆ ಅನ್ನ ಸಂತರ್ಪಣೆ ಮಾಡಿದರು. ದೇವಾನ್ಷ್ ಹುಟ್ಟು ಹಬ್ಬದ ಪ್ರಯುಕ್ತ ಒಂದು ದಿನದ ಅನ್ನಪ್ರಸಾದ ವಿತರಣೆಗೆ ಆಗುವ ವೆಚ್ಚವನ್ನು 44 ಲಕ್ಷ ರೂ. ಗಳನ್ನು ತಿ.ತಿ.ದೇ., ಗೆ ದೇಣಿಗೆಯನ್ನು ನೀಡಿದರು.

ಮುಖ್ಯಮಂತ್ರಿಗಳು ತಿರುಮಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಇವರುಗಳೊಂದಿಗೆ ತಿ.ತಿ.ದೇ., ಆಡಳಿತ ಮಂಡಲಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯುಡು ಮತ್ತು ಇತರ ಆಡಳಿತ ಮಂಡಲಿಯ ಸದಸ್ಯರು, ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್, ಐ.ಎ.ಎಸ್., ರವರು ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ. ಹೆಚ್. ವೆಂಕಯ್ಯ ಚೌದರಿ, ಐ.ಆರ್.ಎಸ್., ರವರು ಪಾಲ್ಗೊಂಡರು.











ತಿ.ತಿ.ದೇ., ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಸ್ಪೆಷಲ್ ಗ್ರೇಡ್ ತೆಲುಗು ಉಪಸಂಪಾದಕರಾದ ಡಾ॥ ಕೆ. ರವಿಚಂದ್ರನ್ ರವರಿಗೆ ಆಂಧ್ರಪ್ರದೇಶದ ರಾಜ್ಯ ಸರ್ಕಾರದ ಅತ್ಯುನ್ನತ ಪ್ರಶಸ್ತಿಯಾದ ಸ್ವರ್ಣಹಂಸ, ಕಲಾರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಆಂಧ್ರಪ್ರದೇಶದ ಮುಖ್ಯ ಮಂತ್ರಿಗಳಾದ ಗೌ॥ ಶ್ರೀ ನಾರಾಚಂದ್ರಬಾಬು ನಾಯುಡು ರವರು ಯುಗಾದಿ ಹಬ್ಬದ ದಿನದಂದು (30-03-2025) ವಿಜಯವಾಡದಲ್ಲಿರುವ ತುಮ್ಮಲಪಲ್ಲಿ ಕಲಾಕ್ಷೇತ್ರದಲ್ಲಿ ನೀಡಿದರು. ನಂತರ ಇವರನ್ನು ತಿ.ತಿ.ದೇ., ಸಪ್ತಗಿರಿ ಮಾಸಪತ್ರಿಕೆಯ ಪ್ರಧಾನ ಸಂಪಾದಕರಾದ ಡಾ॥ ಕೆ. ರಾಧಾರಮಣ ರವರು ಮತ್ತು ಸಂಪಾದಕರು ಡಾ॥ ವಿ.ಜಿ. ಚೊಕ್ಕಲಿಂಗಂ ರವರು ಹಾಗೂ ಸಿಬ್ಬಂದಿಯರು ಕಾರ್ಯಾಲಯದಲ್ಲಿ ಅಭಿನಂದಿಸಿದರು.



07-03-2025 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ತಿರುಪತಿಯಲ್ಲಿರುವ ಮಹತಿ ಕಲಾಕ್ಷೇತ್ರದಲ್ಲಿ ತಿ.ತಿ.ದೇ, ಅದ್ದೂರಿಯಾಗಿ ನಿರ್ವಹಿಸಿತು. ಇದೇ ಸಂದರ್ಭದಲ್ಲಿ ವಿವಿಧ ಇಲಾಖೆಗಳಲ್ಲಿ ವಿಶೇಷ ಸೇವೆ ಸಲ್ಲಿಸುತ್ತಿರುವ 12 ಮಂದಿ ಮಹಿಳಾ ಉದ್ಯೋಗಿಗಳಿಗೆ ಪದ್ಮಾವತಿ ಮಹಿಳಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ. ಹೆಚ್. ವೆಂಕಯ್ಯ ಚೌದರಿ ಐ.ಆರ್.ಎಸ್., ರವರು ತಿ.ತಿ.ದೇ., ಆಡಳಿತ ಮಂಡಲಿಯ ಸದಸ್ಯರು ಶ್ರೀಮತಿ ಎ. ರಂಗಶ್ರೀ ಮತ್ತು ಶ್ರೀಮತಿ ಟಿ. ಜಾನಕಿ ದೇವಿ ಇತರ ಮಹಿಳಾ ಉದ್ಯೋಗಿಗಳು ಪಾಲ್ಗೊಂಡರು.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-04-2025 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment
No. PMGK/RNP/WPP-04(6)/2024-2026" Posting on 5th of Every Month



ನೃಸಿಂಹ ಜಯಂತಿ
11-05-2025

ಮಾತಾ ನೃಸಿಂಹಶ್ಚ ಪಿತಾ ನೃಸಿಂಹಃ
ಭ್ರಾತಾ ನೃಸಿಂಹಶ್ಚ ಸಖಾನೃಸಿಂಹಃ
ವಿದ್ಯಾ ನೃಸಿಂಹೋ ದ್ರವಿಣಂ ನೃಸಿಂಹಃ
ಸ್ವಾಮಿ ನೃಸಿಂಹಃ ಸಕಲಂ ನೃಸಿಂಹಃ